UNIVERSAL LIBRARY
OU_198262
UNIVERSAL LIBRARY

# ಪುರೂರವ.

ನಿಡಂಬೂರು ರಾಘವೇಂದ್ರ ಬಲ್ಲಾಳ.
ವಿದ್ವಾನ್
ಕನ್ನಡ ಪಂಡಿತ.
ಬೋರ್ಡ್ ಹೈಸ್ಕೂಲ್, ಉಡುಪಿ.

ಕರ್ನಾಟಕ ಸಾಹಿತ್ಯ ಪ್ರಚಾರಕ ಮಂಡಲಿ.
ಉಡುಪಿ.

( ಈ ಗ್ರಂಥದ ಸರ್ವ ಸ್ವಾತಂತ್ರ್ಯವೂ ಗ್ರಂಥ ಕರ್ತರದೇ ಆಗಿದೆ. )

೧೯೩೧.

ಬೆಲೆ. ೦-೮-೦

ಮೊದಲ ಕವೀಂದ್ರರೊಲ್ದೊರೆದ ಸತ್ಕೃತಿ ಸಂಚಯಮೀಧರಿತ್ರಿಯೋಳ್ ।
ಪುದಿದಿರೆ ನೋಡಿತುಷ್ಟಿವಡಲೊಲ್ಲದೆ ಕಬ್ಬಿಗರೇಕೆ ಕಬ್ಬಮಂ ॥
ಗದಿಪರೊ! ಬೇರೆನುತ್ತ ನುಡಿವಳ್ಕಜಕಾರ ನವಂಗೆ ಪುತ್ರಸಂ ।
ಪದ ದೊದವೇಕೆ ಬೇರೆ ಪರಪುತ್ರರ ನೀಕ್ಷಿಪತುಷ್ಟಿ ಸಾಲದೇ ॥ ೧ ॥

ಷಡಕ್ಷರ ದೇವ.

# ಮೊದಲುನುಡಿ.

ವರ್ಣನಾತ್ಮಕವಾದ ಗ್ರಂಥಗಳು ಕನ್ನಡದಲ್ಲಿ ತೀರಾ ಕಡಿಮೆ ನನ್ನ ಸಂಸ್ಕೃತಾಭ್ಯಾಸವನ್ನು ಮುಗಿಸಿದೊಡನೆ, ಈ ಕೃತಿಯನ್ನು ಬರೆದೆನು. ಇದರಲ್ಲಿ 'ಪುರೂರವೋರ್ವಶಿಯರಿಗೆ ವಿವಾಹವಾಗಿದೆ' ಎಂಬಷ್ಟುಕಥೆ ಮಾತ್ರ ಪುರಾಣ ಸಿದ್ಧವಲ್ಲದೆ ಉಳಿದ ಯಾವಭಾಗವೂ ಪ್ರಸಿದ್ಧವಲ್ಲ; ಕಪೋಲಕಲ್ಪಿತವು.

ಬೇಟೆಗಾಗಿ ಹೊರಟ ಪುರೂರವರಾಜನು ಮೋಹಿನಿಯಿಂದ ಮೂರ್ಛೆಹೊಂದಿ, ಭೂಪ್ರದಕ್ಷಿಣೆಗೆಹೊರಟ ಊರ್ವಶಿಯಿಂದ ಸ್ವರ್ಗಕ್ಕೆ ಒಯ್ಯಲ್ಪಡಲು, ಇದನ್ನರಿತ ದೇವರಾಜನು ಇವರೀರ್ವರಿಗೂ ಶಿಕ್ಷೆ ವಿಧಿಸಿದನು. ಊರ್ವಶಿಯು ಮಯನ ಮುಖಾಂತರ ಉಪಾಯದಿಂದ ತಮಗೀರ್ವರನ್ನೂ ಈ ಶಿಕ್ಷೆಯಿಂದ ಬಿಡುಗಡೆಮಾಡಿಸಿಕೊಂಡು ಆ ಮೂಲಕವೇ ದೇವೇಂದ್ರನಮೆಚ್ಚಿಕೆಹೊಂದಿ, ತಿರಿಗಿ ಭೂಮಿಗೆ ಬಂದು ಎಷ್ಟೋ ಕಾಲ ಸುಖದಿಂದ ಇದ್ದರೆಂಬುದೇ ಇದರಲ್ಲಿ ಬರೆಯಲ್ಪಟ್ಟ ಕಥೆ.

ರಾಜನ ಮತ್ತು ಊರ್ವಶಿಯ ಮುಂದಿನಕಥಾಭಾಗವು ನಾನು ಉಡುಪಿ ಶಿರೋಮಣಿ ಕಾಲೇಜಿನಲ್ಲಿ ಸಂಸ್ಕೃತೋಪಾಧ್ಯಾಯನಾಗಿದ್ದಾಗ ಬಿಡುವು ದೊರೆತ ವೇಳೆ "ಉತ್ತರ ಪುರೂರವ" ಎಂಬಹೆಸರಿನಿಂದ ಬರೆಯಲ್ಪಟ್ಟಿದೆ. ಆದರಲ್ಲಿ ಊರ್ವಶಿಯಲ್ಲಿ ಆಯುರಾಜನ ಉತ್ಪತ್ತಿ, ಮೋಹಿನಿಗೂ ಊರ್ವಶಿಗೂ ನಡೆದ ಚಿಕ್ಕ ಸಂವಾದ, ರಾಜನಿಗೂ ಊರ್ವಶಿಗೂ ಸಂಘಟಿಸಿದ ಒಂದು ಶಪಥ, ಇದುಹೇತುವಾಗಿ ಊರ್ವಶಿಯು ಸ್ವರ್ಗಕ್ಕೆ ತೆರಳೋಣ, ಮತ್ತು ರಾಜನು ಮಗನಿಗೆ ಪಟ್ಟಗಟ್ಟಿ, ತಾನು ರಾಜರ್ಷಿಯಾಗಿ ವೈರಾಗ್ಯಗೊಂಡು ಕಾಡಿಗೆ ತೆರಳೋಣ, ಆಯುರಾಜನ ಚರಿತೆಯ ದಿಙ್ಮಾತ್ರ ಪ್ರದರ್ಶನ, ಇಷ್ಟು ಕಥೆಗಳೂ. ಇನ್ನೂ ಕೆಲವು ಸಣ್ಣಸಣ್ಣ ವರ್ಣನೆಗಳೂ, ಶಿಕ್ಷಿತಾಶಿಕ್ಷಿತರ ಮನಮುಟ್ಟುವಂತೆ ಕೈಲಾದಮಟ್ಟಿಗೆ ಬರೆಯಲ್ಪಟ್ಟಿದೆ.

ಬಾಲ್ಯದಲ್ಲಿ ಕೌತುಕಪೂರ್ತಿಗಾಗಿ ಬರೆದ ಈ ಬಾಲಕೃತಿಯನ್ನು ಹಣದ ಅಭಾವದಿಂದ ಪ್ರಕಾಶಪಡಿಸದೆ ಇದ್ದೆನು. ಈಗ ಇದನ್ನು

ಪ್ರಸಿದ್ಧಪಡಿಸುವುದರಲ್ಲಿ 'ಕರ್ನಾಟಕಸಾಹಿತ್ಯಪ್ರಚಾರಕಮಂಡಲಿಯವರು' ನನಗೆ ನೆರವಾದ್ದರಿಂದ ಅವರಿಗೆ ತುಂಬಾ ನಾನು ಆಭಾರಿಯಾಗಿದ್ದೇನೆ.

ಕರಿದಾದ ಕಾಡಿಗೆಯು ಕಣ್ಣಿನೆಡೆಯಲ್ಲೇ ಇದ್ದು ಕಾಣಿಸದಂತೆ, ಇದರಲ್ಲಿ ದೋಷರಾಶಿಯೆಂತ್ತಹದಿದ್ದರೂ ನನಗೆ ಗೋಚರಿಸದು. ನಾನಂತಹ ಪ್ರತಿಭಾವಂತನೂ ಅಲ್ಲ. ವಿದ್ವಾಂಸರು ಯಾವ ಕಡೆಗಳಲ್ಲಿಯೂ ಗುಣಗಳನ್ನೋ ದೋಷಗಳನ್ನೋ ಬೇಕಾದಂತೆ ಎತ್ತಿ ತೋರಬಲ್ಲರು. ಅದಕ್ಕಾಗಿ ಇದನ್ನು ದೋಷಜ್ಞರಾದ ನಿರ್ಮತ್ಸರ ವಿದ್ವಾಂಸರಲ್ಲಿ ಒಪ್ಪಿಸಿ ಕ್ಷಮೆಬೇಡುವೆನು; ಅಲ್ಲದೆ ನನಗೆ ಆ ತಪ್ಪುಗಳನ್ನು ತಿದ್ದಿ ತೋರಿ ಮುಂದಣ ಆಚ್ಚಿಗೆ ಅನುಕೂಲಿಸಿಕೊಟ್ಟಾರೆಂದು ವಿಶ್ವಾಸಗೊಂಡಿರುವೆನು.

ಇದರಲ್ಲಿ ಬರೆಯಲ್ಪಟ್ಟ ವರ್ಣನೆಗಳು ವಿದ್ಯಾರ್ಥಿಗಳಲ್ಲಿಯೂ ಸಾಮಾನ್ಯ ವಾಚಕರಲ್ಲಿಯೂ ವಾಚನಾಭಿರುಚಿಯನ್ನು ಹೆಚ್ಚಿಸುವಂತಾದಲ್ಲಿ ನನ್ನ ಶ್ರಮವು ಸಾರ್ಥಕವಾಯಿತೆಂದು ತಿಳಿಯುತ್ತೇನೆ. ಕನ್ನಡದಲ್ಲಿ ಈ ಬಗೆಯ ಗ್ರಂಥಗಳಿಗೆ ಭಾಷಾಭಿಮಾನಿಗಳ ಮತ್ತು ವಿದ್ಯಾಭಿಮಾನಿಗಳ ಪ್ರೋತ್ಸಾಹವು ಸಿಕ್ಕದಿರಲಾರದೆಂದು ನನ್ನ ವಿಶ್ವಾಸ. ಪ್ರೋತ್ಸಾಹ ಸಿಕ್ಕಿದಲ್ಲಿ **ಉತ್ತರ ಪುರೂರವ** ಭಾಗವನ್ನು ಬೇಗನೆ ಪ್ರಕಟಪಡಿಸುವೆನು.

ಉಡುಪಿ,
ತಾ. 1-6-1931.

ನಿ. ರಾ. ಬಲ್ಲಾಳ.

# ಸಮರ್ಪಣೆ.

ಈ ಪ್ರಥಮ ಕವನವನ್ನು

ನನ್ನ ವಿದ್ಯಾ ಗುರುಗಳೂ ಶ್ರೇಯಃಕಾಂಕ್ಷಿ ಅಗ್ರಜರೂ ಆದ

ಜಮೀನ್‌ದಾರ

ಅಂಬಲ್ಪಾಡಿ ಜನಾರ್ದನ ಮತ್ತು ಮಹಾಕಾಳೀ ದೇವಾಲಯದ

ಮೊಕ್ತೇಸರ

ನಿಡಂಬೂರು ಬೀಡು

## ನಾರಾಯಣ ಬಲ್ಲಾಳರವರ

ಅಡಿದಾವರೆಗಳೆಡೆಯಲ್ಲಿ ವಿನಯ ವಿಶ್ವಾಸಗಳೊಡನೆ

ಪುಷ್ಪೋಪಹಾರವಾಗಿ ಅರ್ಪಿಸಿರುತ್ತೇನೆ.

**1931.**

# ತಪ್ಪು ಒಪ್ಪುಗಳು.

ವಿರಾಮಾದಿ ಚಿಹ್ನೆಗಳ ತಪ್ಪನ್ನು ತಿದ್ದಿಲ್ಲ. ವಾಚಕರು ದಯೆಯಿಟ್ಟು ಸಾಮಾನ್ಯ ದೋಷವೆಂದು ಮನ್ನಿಸ ಬೇಕಾಗಿ ವಿನಂತಿ.

| ಪುಟ | ಪಂಕ್ತಿ | ಒಪ್ಪು | ತಪ್ಪು |
|---|---|---|---|
| 4 | 8 | ಎಂದು | ಎಂವು |
| 16 | 14 | ಭಾಗೀರಥಿ | ಭಾಗೀರಠಿ |
| 18 | 2 | ಸಾಂತ್ವ | ಸ್ವಾಂತ |
| 19 | 15 | ನೊಂದು | ನೊಂದ |
| 20 | 15 | ಉಣ್ಣಿಸುವವಳು | ಉಣ್ಣಿಸುವಳು |
| 21 | 9 | ಎಂತಹ | ಅಂತಹ |
| 26 | 22 | ತಿರುಗಿದರು | ತಿರುಗಿಧರು |
| 29 | 25 | ಹಿಂಸ್ರ | ಹಿಂಸ |
| 33 | 15 | ಶೌರ್ಯೌದಾರ್ಯ | ಶೌರ್ಯೋದಾರ್ಯ |
| 50 | 27 | ಆವರಣಗಳಿಂದ | ಆದರಣಗಳಿಂದ |
| 57 | 18 | ಸಂಧ್ಯಾಕರ್ಮ | ನಿತ್ಯಾಹ್ನಿಕ |
| 58 | 19 | ರಾವುತರ್ | ರಾಹುತರ್ |

# ೧. ಇಂದ್ರ ಸಭೆ.

ರಾಜಾಧಿರಾಜಾ ಪುರಂದರನು ಒಡ್ಡೋಲಗದಲ್ಲಿ ಕುಳಿತು ಸಡಗರದ ಕಪಲನ್ನು ಈಸಾಡಹತ್ತಿರುವನು. ದಿಕ್ಪಾಲಕರು ಅಂದಣಗಳನ್ನು ಅಲಂಕರಿಸಿರುವರು. ಬೃಹಸ್ಪತ್ಯಾಚಾರ್ಯರು ದೇವತೆಗಳ ಅಭಿವೃದ್ಧಿಯ ಉಪಾಯವನ್ನು ಚಿಂತಿಸುವರು. ಶಚೀ ದೇವಿಯು ದೇವೇಂದ್ರನ ಹಿಂಬದಿಯಲ್ಲಿ ತಲೆಯನ್ನು ಸಸುಬಾಗಿ ಸೆರೆದಿರುವ ಸಭೆಯನ್ನು ಅವಲೋಕಿಸುತ್ತಿರುವಳು. ಸೇನಾನಿಯು ಕೈಕಟ್ಟಿ ನಿಂದಿರುವನು. ಜವಾನರು ಅರುಹಿದ್ದ ಸಮಾಚಾರಗಳಿಗೆ ಮರು ಅಪ್ಪಣೆಯನ್ನು ಹಾರಯಿಸುವರು. ಕೆಲವರು ವರದಿಯನ್ನು ಹೇಳಲು ಸಮಯ ದೊರೆಯದೆ ಅವಕಾಶ ನೋಡುತ್ತ ಬಾಯಿ ಮುಚ್ಚಿ ಸುಮ್ಮನೆ ನಿಂದಿರುವರು. ಬೇಹುಗಾರರು ಬೇಹು ಸುದ್ದಿಯನ್ನು ಬಿನ್ನಯಿಸಲು ಈ ದಿನ ಎಡೆಸಿಕ್ಕುವ ಸಂದೇಹದಿಂದ ಮಹಾರಾಜರ ಮುಖದಲ್ಲಿಯೇ ಕಣ್ಣಿಟ್ಟಿರುವರು. ರಂಭೆಯೇ ಮೊದಲಾದ ಅಪ್ಸರಸ್ತ್ರೀಯರು ಅಹಮಹಮಿಕೆ (ಲವಲವಿಕೆ)ಯಿಂದ ತಂತಮ್ಮ ಕಲಾಕೌಶಲ್ಯಗಳನ್ನು ತೋರಿಸಲು ನರ್ತನಕ್ಕಾಗಿ ಸಿದ್ಧರಿರುವರು. ಅಲ್ಲಲ್ಲಿ ಕೃತ್ರಿಮ ಪುತ್ತಳಿಕೆಗಳು ಪಾತ್ರಸಾಮ್ಯವಾಂತಿರುವುವು. ಜಾಜಿಯ ಹೂಗಳಿಂದ ಪ್ರಮೆಗೊಂಡ ಎಳೆದುಂಬಿಗಳು ಕೃತಕಲತಾಗುಚ್ಛಗಳಲ್ಲಿ ಬಂದುಬಂದು ಕುಳಿದಾಡುವುವು. ಪಂಜರಗಿಳಿಯು ಹಾಡುವ ವಾರಸ್ತ್ರೀಯರ ಪೋರಿಯನ್ನು ತಗ್ಗಿಸುವುದು. ಕೋಗಿಲೆಯ ಇಂಪಾದ ಪಂಚಮ ಧ್ವನಿಯನ್ನು ಗಂಧರ್ವರು ಗಾನದಿಂದ ಸರಿಹೋಲಿಸಲು ಅಪೇಕ್ಷಿಸುವರು. ಕುಣಿತವಿಂದ ನಾಕಣ್ ನವಿಲುಗಳು ನರ್ತಕಿಯರನ್ನು ಹಿಮ್ಮೆಟ್ಟಿಸುವುವು; ಮೂರು ಕಾಲಗಳಲ್ಲಿಯೂ ಇವುಗಳ ಆಟವು ಬಿಡದೆ ನಡೆಯುವುದು. ದೇವತೆಗಳಲ್ಲಿ ಕೆಲವರು ದೇವಾಚಾರ್ಯರೊಡನೆ ಆಧ್ಯಾತ್ಮಿಕ ವಿಚಾರವಾಗಿ ಮಾತೆ

ತ್ತಿರುವರು. ಕೆಲವರು ಪಗಡೆಯಾಟದ ಸಾಮಾಗ್ರಿಗಳನ್ನು ಸಿದ್ಧಪಡಿಸುತ್ತಾ ಪಣಬಂಧದ ಆಲೋಚನೆಯಲ್ಲಿ ಮಗ್ನರಾಗಿರುವರು. ಇನ್ನೂ ಕೆಲವರು ತರ್ಕಶಾಸ್ತ್ರದಲ್ಲಿ ಕಾದಾಡುತ್ತಿರುವರು. ಬಹು ಮಂದಿ ಸಂಗೀತಾಭಿಜ್ಞರು ವೇಶ್ಯಾಸ್ತ್ರೀಯರ ನರ್ತನ ಚಮತ್ಕೃತಿಗಳಲ್ಲಿ ಭೇದಹುಡುಕಲು ಉತ್ಸಾಹಪಟ್ಟಿರುವರು.

ಈ ಸಭೆಯಲ್ಲಿ ಕವನಚಾತುರ್ಯವಿಲ್ಲದವರಿಲ್ಲ. ಜ್ಯೋತಿಷ್ಯ ತಿಳಿಯದವರು ಸಿಗಲಾರರು, ವೈದ್ಯದ ಮರ್ಮವನ್ನರಿಯದವರು ದೊರೆಯರು. ಇದರ ಸೊಬಗೆನ್ನೆಷ್ಟೆಂದರೂ ಸ್ವಲ್ಪವೇ. ನಾವು ಏನೆಂದು ವಿಸ್ತರಿಸಲಿ? ಬಣ್ಣಿಸಲಿಕ್ಕೆ ಶಕ್ತರಾದ ವೇದವ್ಯಾಸ ಮುನಿವರ್ಯರೂ ಅಲ್ಲಲ್ಲಿ 'ಸುಧರ್ಮೆ' ಎಂದು ಅದರ ಹೆಸರನ್ನು ಮಾತ್ರ ಎತ್ತಿರುವರಷ್ಟೇ! ನೋಡಿ ಬಂದ ಯಾವ ಮಹಾತ್ಮರೂ 'ದೇವಸಭೆ'ಯೆಂದೆನ್ನುತ್ತಾ ಕಥೆ ಕೊನೆಮುಟ್ಟಿಸುವರಲ್ಲದೆ ಆದ್ಯಂತವಾಗಿ ಇದರ ಶೋಭೆಯನ್ನುಸುರಲು ಯತ್ನಿಸಲಿಲ್ಲ. ಆಗದ ಕೆಲಸದಲ್ಲಿ ಅರಿತವರು ಅಡಿಇಡುವರೇ?

ಇಷ್ಟಕ್ಕೂ ಸ್ವಲ್ಪ ದೂರದಲ್ಲಿ ಮಂದಾರ ಪುಷ್ಪದ ಸುವಾಸನೆಯನ್ನು ಆಘ್ರಾಣಿಸುತ್ತಾ ಸಕಲ ಕಲಾಕೋವಿದನಾಗಿಯೂ, ಸಮಸ್ತ ಮಂತ್ರ ತಂತ್ರಗಳನ್ನರಿತವನಾಗಿಯೂ ಇರುವ, '**ಅಗ್ನಿಹೋತ್ರಿ**'ಯೆಂದು ಯಥಾರ್ಥನಾಮದಿಂದ ಹೆಸರ್ಗೊಂಡ ದೂರ್ತ ಬ್ರಾಹ್ಮಣನೊಬ್ಬನು ನೆಲದ ಮೇಲೆ ಎಲೆಗಳನ್ನು ಹಾಸಿ ಕುಳಿತು, ಮನದಲ್ಲಿ ಏನೇನೋ ಯೋಚಿಸುವಂತೆ ಕಂಡುಬರುವನು. ಈತನು ಸಿಖಿಲ ಮಾಯಾಶಾಸ್ತ್ರವನ್ನು ತಿಳಿದಿರುವನು. ಮೂರು ಲೋಕಗಳನ್ನು ಯಾವಾಗಲೂ ಕೈಗೆರೆಗಳಂತೆ ಸುಲಭದಿಂದ ನೋಡುತ್ತಿರುವನು. ಬೃಹಸ್ಪತ್ಯಾಚಾರ್ಯನು ಈತಗೆ ತುಂಬಾ ಅಕ್ಕರೆಯಿಂದ ವಿದ್ಯೆಯನ್ನು ಕಲಿಸಿರುವನು. ಈಗಲೂ ಈತಗೆ ನೋಟಕ್ಕೆ ಮೂವತ್ತೇ ವರುಷ. ಆತನ ಮುಂದೆ ಹರಿಯಲು ಅಂಜಿ ಅಪ್ಸರ ಸ್ತ್ರೀಯರು ಪರದೆಯ ಮರೆಯಾಗಿ ನಿಲ್ಲುವರು. ಸ್ವರ್ಗವು ಯಾವಾಗಲೂ ಈ ಮಹಾತ್ಮನ ಪ್ರಸನ್ನತೆಯನ್ನೇ ಬಯಸುವುದು. ಈತನ ರೋಷಕ್ಕೆ ದುರ್ವಾಸನೂ ದೂರವೇ! ವಿಶ್ವಾಮಿತ್ರನೂ ಕಡಿಮೆಯೋ?

ಪುಣ್ಯವಶದಿಂದ ಅಗ್ನಿಹೋತ್ರಿಗೆ ಈ ಸಮಯವು ಪ್ರಸನ್ನಕಾಲವಾಗಿತ್ತು; ಕಾರಣ, ಎದ್ದು ನಿಂತು ಕೈಜೋಡಿಸಿ 'ಅಹಮಭಿವಾದಯೇ' ಎಂದುಚ್ಚರಿಸಿದನು. ಇದನ್ನು ನೋಡಿದ ಇಂದ್ರನು ಜಗ್ಗನೆ ಎದ್ದು, ಸಿಂಹಾಸನದಿಂದಿಳಿದನು. ಹತ್ತಡಿ ಮುಂದರಿಯಲು, ಎದುರು ಬರುವ ಅನಿರ್ವಚನೀಯವಾದ ಕಾಂತಿರಾಶಿಯು ಕಣ್ಗೆಸೆಯಿತು. ಇಂಪಾದ ವೀಣೆಯ ಗಾನಶ್ರವಣದಿಂದ ಮನುಷ್ಯನೆಂದೂಹಿಸಿದನು. ಭಗವನ್ನಾಮವನ್ನು ಕೇಳ್ದು ನಾರದನೆಂದರಿತನು. ಕೂಡಲೇ ಮುನಿಗೆದುರ್ಗೊಂಡು ಕರತಂದು ಪೀಠದಲ್ಲಿ ಕುಳ್ಳಿರಿಸಿದನು. ಸಭಿಕರಾದ ದಿಕ್ಕುಗಳ ಒಡೆಯರೆಲ್ಲರೂ ಬಿನ್ನಯಿಸಿದರು. ಷೋಡಶೋಪಚಾರ ಪೂಜೆಯು ಸಾಂಗವಾಗಿ ನಡೆಯಿತು; ಪರಸ್ಪರ ಕುಶಲ ಪ್ರಶ್ನೆಗಳೂ ನಡೆದುವು.

'ಸಂಚರಣೆಯಿಂದ ತ್ರಿಲೋಕವನ್ನು ಪರಿಶುದ್ಧಿಗೈಯುವ ಮಹರ್ಷಿಯೇ! ಥಟ್ಟನೆ ಇಲ್ಲಿಯ ವರೆಗೆ ಬಿಜಯವನ್ನು ಗೈದಪರಿಯನ್ನರಿಯಲು' ಮನಸ್ಸುಕ್ಕುವುದೆಂಬ ಪುರಂದರನ ಮಾತು ಕೇಳಿದ, ಬ್ರಹ್ಮಮಾನಸಪುತ್ರನು ನಸುನಕ್ಕು, ಮಹಾರಾಯನೇ! ತಿರಿತಿರಿಗಿ ಬೇಸತ್ತು ಇಲ್ಲಿನ ಚಿತ್ರಗಳಿಂದ ವಿಚಿತ್ರಗಳಾದ ಗೋಪುರ ಪ್ರಕಾರ, ವಾರವಿಲಾಸಿನಿಯರ ಸಾರಸಂಗೀತ, ನವರಸಭರಿತವಾದ ಕವಿಗಳ ಸರಸಸಲ್ಲಾಪ; ಇವುಗಳಿಂದ ಮನಸ್ಸಿನ ಆಲಸ್ಯವನ್ನು ಹೋಗಲಾಡಿಸಿಕೊಳ್ಳುವುದಲ್ಲದೆ ಬೇರೇನು ಕಾರಣಗಳು? ಎಂದನು.

ತಕ್ಷಣವೇ ಸಕಲ ಸಂಭ್ರಮಗಳೂ ಒಂದೊಂದಾಗಿ ಹುಟ್ಟಿ ಸುಧರ್ಮ ಸಭೆಯು ಸರಿಯಿಲ್ಲದಂತೆ ಮೆರೆಯಿತು! ವಾರಸ್ತ್ರೀಯರು ನರ್ತನದೊಂದಿಗೆ ಅಭಿನಯಿಸತೊಡಗಿದರು. ಗಂಧರ್ವರು ಕಿವಿಗಾನಂದ ಬೀರುವ ಗಾನಕಲಾಪದಲ್ಲಿ ಗ್ರಾಮಮೂರ್ಛೆಗಳ ಚಮತ್ಕಾರಗಳನ್ನು ಹೊರಪಡಿಸಿದರು. ಸೇರಿರುವ ದೇವತೆಗಳೆಲ್ಲರೂ ಮಹರ್ಷಿಯ ಮನಸ್ಸು ಸಂತೋಷಪಡುವಂತೆ ಉಪಚರಿಸುತ್ತಲಿದ್ದರು. ಈ ರೀತಿಯಾಗಿ ಸ್ವಲ್ಪ ಸಮಯ ಕಳೆಯುತ್ತಲೇ, ಪರಮಾನಂದ ತುಂದಿಲನಾದ ಋಷಿವರ್ಯನು ಮಹತಿಯೊಂದಿಗೆ ಭಗವನ್ನಾಮೋಚ್ಚಾರಣೆಯನ್ನು ಗೈಯುತ್ತಾ ತಂದೆಯ

ಸಂದರ್ಶನಕ್ಕಾಗಿ ಸತ್ಯಲೋಕಕ್ಕೆ ತೆರಳಿದನು. ಅಪ್ಸರೆಯರೂ, ದೇವಯೋನಿಗಳೂ ತಕ್ಕ ಬಹುಮಾನ ಪಡೆದು ತಂತಮ್ಮ ವಸತಿಯನ್ನು ಸನಾಥೀಕರಿಸಿದರು.

ಇಷ್ಟಕ್ಕೂ 'ಸ್ವರ್ಗಮಣಿ' ಎಂದು ಹೆಸರ್ಪಡೆದ **ಉರ್ವಶಿಯು** ಬಂದಿಲ್ಲವೆಂದು ರಾಜಪುರುಷರು ಸಾಸೂಯವಾಗಿ ಗುಣುಗುಟ್ಟುತ್ತಲಿದ್ದರು. ಅಗ್ನಿಹೋತ್ರಿಯು, 'ರಾಜನು ವಿಟಸಾರ್ವಭೌಮನಾದರೆ ಪರಿವಾರವು ಬೆದರಿ ಅರಸನನ್ನು ಗೌರವಿಸುವುದೇ?' ಎಂದು ಮುಕ್ತಕಂಠನಾಗಿ ದೇವರಾಜನ ಮನಸ್ಸು ವ್ಯಾಕುಲವಾಗುವಂತೆ ಹೇಳಿದನು! ಇಂದ್ರನು 'ಅಗ್ನಿಹೋತ್ರಿಯೇ! ನಿನ್ನ ಮಾತು ನ್ಯಾಯವಾದುದು' ಎಂದು ಗೌರವಿಸುತ್ತಾ ಉನ್ಮತ್ತೆಯಾದ ಊರ್ವಶಿಯನ್ನು ಜಾಗ್ರತೆಯಾಗಿ ಕರತರುವುದೆಂದು, ದೂತರಿಗೆ ಕಟ್ಟಪ್ಪಣೆಮಾಡಿದನು. ಓರ್ವ ಜವಾನನು ತಲೆಬಾಗಿ ಪೊರಮಟ್ಟನು. ಅಪ್ಪಣೆಯನ್ನು ತಾಳ್ದ ಹುದ್ದೇದಾರರೆಲ್ಲರೂ ತಂತಮ್ಮ ಕೆಲಸಗಳಲ್ಲಿ ಮನವಿಟ್ಟರು. ಓಲಗದಿಂದ ಅಮರರ ಒಡೆಯನು ಶಚೀದೇವಿಯೊಂದೊಡಗೂಡಿ ಅಂತಃಪುರಕ್ಕೆ ಹೊರಟನು. ದೇವತೆಗಳ ಗಲಭೆಯು ಅಡಗಿತು. ಅಂದಿನ ಸಭೆಯು ಮುಗಿಯಿತು. ನೀರವ.

ಒಂದೊಂದು ತಡವೆ ಪಂಜರ ಗಿಳಿಯು ಮಾತ್ರ ಆಡಿಹೋದ ನಾರದನ ಮಾತನ್ನೇ ಅನುವಾದಿಸುವುದು. ಅತಿ ಚತುರೆಯಾದ ಸಾರಿಕೆಯೂ ಇದಕ್ಕೆ ಉತ್ತರವಾಗಿ ದೇವತೆಗಳ ಮಾತನ್ನೇ ಹೇಳುವುದು. ಸಂವಾದವು ಬಹಳ ನಾಜೂಕಾಗಿತ್ತು. ಆಗಾಗ ಎಳೆಗಾಳಿಯು ಮೆಲ್ಲಮೆಲ್ಲನೆ ಬೀಸುವುದರಿಂದ ಕಪಟವಲ್ಲಿಗಳಲ್ಲಿ ಉಂಟಾದ ಒಂದು ತರದ ಮರ್ಮರವು ಕೇಳಿಸುವುದು. ಒಂದೊಂದು ಬಾರಿ ನಿರ್ಜನವಾದ ಈ ಸಭೆಯನ್ನು ಹೂದೋಟದ ಪಕ್ಷಿಗಳು ಒಳಹೊಕ್ಕು, ಅಂದಕ್ಕಾಗಿ ಜೋತಾಡಿಸಿದ್ದ ಹಣ್ಣುಗೊಂಚಲುಗಳನ್ನು ಕುಕ್ಕಿಕುಕ್ಕಿ, ರಸಕಾಣದೆ ಚೀಕರಿಸುತ್ತಿದ್ದ ಸಿಸದ, ಸಣ್ಣಸಣ್ಣ ಹಕ್ಕಿಗಳು ಅತ್ತಿತ್ತ ಹಾರಾಡುವಾಗ ಚಿಕ್ಕಚಿಕ್ಕ ಗರಿಗಳದನಿ, ಮೇಲ್ಕಟ್ಟು ಹಾಕಿದ್ದ ಜಲತಾರಿ ಗೊಂಚಲು, ಬಂಕದಸರ, ಇವುಗಳ ಶಬ್ದವಲ್ಲದೆ ಇನ್ನೇನೂ ಕೇಳಿಸದು. ಎಲ್ಲೆಲ್ಲಿಯೂ ಸುಣ್ಣಗೆ.

# ೨. ಪುರೂರವ.

ಪುರೂರವ ಮಹಾರಾಜನು ಭೂಲೋಕದಲ್ಲಿ ಸಿಂಹಾಸನವೇರಿ, ಪ್ರಜೆಗಳ ಸುಖಸಂಭ್ರಮವನ್ನಾರಯಿಸುತ್ತಾ ರಾಜ್ಯವನ್ನಾಳುತ್ತಿರುವನು. ರಾಜ್ಯವು ನಿಷ್ಕಂಟಕವಾಗಿ ಫಲಪೈರುಗಳಿಂದ ತುಂಬಿರುವುದು. ಕಾಲ ಕಾಲದಲ್ಲಿ ತಕ್ಕ ಮಳೆ ಸೂಸುವುದರಿಂದ ಲೋಕವೇ ನಿತ್ಯತೃಪ್ತವು. ಪೈರುಗಳು ಮೂರು ತಡವೇ ಫಲಿಸುವುವು. ದುರ್ಭಿಕ್ಷೆಯು ತಲೆದೋರದು. ಇಲ್ಲಿ ಕಳ್ಳತನವಿಲ್ಲ. ಹುಸಿ ಮಾತಾಡುವವರು ಮೊದಲೇ ಇಲ್ಲ. ಅನ್ಯಾಯವು ಕಾಣದೊರೆಯದು. ನಿಂದೆಯ ವಾರ್ತೆಯೇ ಕೇಳಿಸದು. ಪುರೂರವ ರಾಜನ ಆಳಿಕೆಯ ಸಮಯ ವಿವಾದವು ಶಾಸ್ತ್ರಾರ್ಥದಲ್ಲಿ, ಅಧೋಗತಿಯು ಬೇರುಗಳಲ್ಲಿ, ಕೊಲೆಯು ಯಜ್ಞಕಲಾಪಗಳಲ್ಲಿ, ಮೊರೆಯು ಸಮುದ್ರದಲ್ಲಿ, ದುರ್ಮರಣಗಳು ಕೋಳಿಗಳಲ್ಲಿ, ಅಲ್ಲದೆ ಪ್ರಜೆಗಳಲ್ಲಿಲ್ಲ. ಪ್ರಜೆಗಳು ನೀತಿವಂತರು, ವಿಭವ ವಿಖ್ಯಾತರು, ಪರಹಿತನಿರತರು, ಪುತ್ರಶೋಕವನ್ನೂ ವೈಧವ್ಯ ದುಃಖವನ್ನೂ ಅರಿತವರಲ್ಲ. ಎಲ್ಲೆಲ್ಲಿಯೂ ಸುಖ, ಸೌಭಾಗ್ಯ, ಆರೋಗ್ಯ, ಸಂಪತ್ತು, ಸಮೃದ್ಧಿ!

ಈ ಮಹಾರಾಜನ ರಾಜಧಾನಿಯು ಅಮರಾವತಿಯಂತೆ, **‘ಹಸ್ತಿನಾವತಿ’** ಎಂಬ ಹೆಸರಿನಿಂದ ಭೂರಮಣಿಯ ಸೀಮಂತರತ್ನವಾಗಿ ಮೆರೆಯುತ್ತಿತ್ತು. ಸೂರ್ಯನು ನವರತ್ನದಿಂದ ಕೆತ್ತಲ್ಪಟ್ಟ ಗೋಪುರ ಪ್ರಕಾರ (ಕೋಟೆಕೊತ್ತಲ)ಗಳ ಶಿಖರಗಳಲ್ಲಿ ಪವಣಿಸಿದ, ಮಣಿಶ್ರೇಣಿಯ ನೂರ್ಗಟ್ಟುವ ಕಿರಣಗಳಿಂದ ಕಣ್ಗೆಡುವುದೆಂಬ ಭೀತಿಯಿಂದಲೋ, ಇಲ್ಲಿನ ದೀಪದ ಹೊಗೆಯಿಂದ ಕಪ್ಪುರೆಗಟ್ಟುವನೆಂಬ ಭಯದಿಂದಲೋ, ಈ ಪಟ್ಟಣದ ಮೇಲ್ಗಡೆ ನೀಟ ನಡೆಯದೆ ಇದನ್ನು ಬಲಗೊಳ್ಳುವದೆಂಬಂತೆ, ಉತ್ತರಾಯಣ ದಕ್ಷಿಣಾಯಣವೆಂದು ಅಡ್ಡ ನಡೆವನು. ಸುತ್ತುಮುತ್ತಲೂ ಅಂಗಡಿಬೀದಿ, ಸಾಲುಸಾಲಾದ ಬಗೆಬಗೆಯ ಕೇರಿಗಳು, ನಗರದ ಹಿರಿಬಾಗಿಲಿಗಿದಿರಾಗಿ ದೊಡ್ಡದಾದ ರಾಜಮಾರ್ಗ: ಈ ಪರಿಯಲ್ಲಿ ಪುರೂರವ ಮಹಾರಾಜನ ಶೌರ್ಯೌದಾರ್ಯಗಳಿಂದ ಧರ್ಮವು ಮೂರ್ತಿಮತ್ತಾಗಿರುವುದು.

ಮಹಾರಾಜನು ಒಂದು ದಿನ ಪ್ರಾತಃಕಾಲ, ಮಂತ್ರಿಸೇನಾನಿಗಳೊಂದಿಗೆ ಕಚೇರಿಮಾಡುತ್ತಿರುವ ಸಮಯ. ಅಲ್ಲಿಗೆ ಪ್ರಜೆಗಳೊಂದಾಗಿ ಬಂದು ಕಾಡುಜಂತುಗಳ ಸಹಿಸಲಾಗದ ಉಪದ್ರವವನ್ನು, ಅರಸನ ಎದುರಾಗಿ ಅಡ್ಡಬಿದ್ದು ವಿಜ್ಞಾಪಿಸಿಕೊಂಡರು. ರಾಜನು ಕನಿಕರತೋರಿ ಬಂದ ತೊಂದರೆಯನ್ನು ನಿವಾರಿಸುವೆನೆಂದಾಜ್ಞಾಪಿಸಿ, ಪರಿವಾರದೊಡನೆ ಸೈನ್ಯ ಸಮೇತನಾಗಿ ಅರಣ್ಯವನ್ನೊಳಹೊಕ್ಕನು.

ಬೇಡರು ಕಾಡುಕಟ್ಟುತ್ತಾ ಮೃಗಗಳನ್ನು ಇಕ್ಕೆಯಿಂ ಹೊರಹೊರಡಿಸತೊಡಗಿದರು. ತಮ್ಮ ಕೈಸಾಗದ ಘಾತಕ ಪ್ರಾಣಿಗಳನ್ನು ಓಡಾಡಿಸುವ ಸಂದರ್ಭದಿಂದ, ಬಲೆಯಲ್ಲಿ ಬಿದ್ದುಸತ್ತ ಕ್ಷುದ್ರ ಜಂತುಗಳನ್ನು ನೋಡುವವರೇ ಇಲ್ಲ. ತೇರಿನ ಶಬ್ದವನ್ನು ಕೇಳಿ ಓಡುವ ಮದ್ದಾನೆಗಳ ಪ್ರಪಕ್ಕಗಳ ಹೊಡೆತಕ್ಕೆ, ಅತ್ತಿತ್ತಲೊರಗುವ ಪರ್ಮರಗಳು ಭಯಂಕರ ಶಬ್ದವನ್ನು ಬಿಡುವುವು. ಎರಳೆಗಳ ಹಿಂಗಾಲಿಗೆ ಸಿಕ್ಕಿ ಸಿಡಿದೋಡುವ ಕಲ್ಲುಗಳ ಒದೆಯಿಂದ, ಅಲ್ಲಲ್ಲಿ ಬೆಂಕಿಹತ್ತುವುದು. ಮತಿಗೆಟ್ಟ ಗಂಡುಮೃಗ, ಕಾಡುಕೋಣ ಇವೇ ಮೊದಲಾದ ದಷ್ಟ ಪ್ರಾಣಿಗಳು ದಿಕ್ಕುತೋರದೆ ನಿಂದಲ್ಲಿಯೇ ನಿಂತಿದ್ದು ರಭಸದಿಂದೋಡುವ ಕಾಡು ಹಂದಿಗಳ ಕೋರೆದಾಡೆಗಳಿಗೆ ಸಿಲುಕಿ ಸೀಳಾಗುವುವು. ಈ ಮೃಗಗಳನ್ನು ಹಿಡಿಯುವುದರಿಂದ ಮನಉಬ್ಬಿದ ನಾಯ್ಗಳ ಬಗೆಬಗೆ ಬಗುಳನ್ನು ಕೇಳಿದ ಸಿಂಹಗಳೂ, ಒಮ್ಮೆ ತಲೆಬಾಗುವುವು. ನಾಯಿಕುನ್ನಿಗಳು ಹುಲ್ಲುಗಾವಲಿನ ಕರುತುರುಗಳಂತೆ, ವಿಧವಿಧ ಮಾಂಸಗಳ ರುಚಿಯನ್ನು ನೋಡುತ್ತಾ ಮುಂದರಿವುವಲ್ಲದೆ, ಹಸಿವೆ ತಣಿಸಿಕೊಳ್ಳಲಿಲ್ಲವು.

ಹೀಗೆ ಕೆಲವು ಜಂತುಗಳು ರಾಜನ ಬಾಣಗಳಿಗಾಹುತಿಗಳಾದುವು. ಕೆಲವು ಬೇಡರ ಪಾಲಾದುವು. ಹಲವು ನಾಯಿಗಳ ಭಾಗವಾಗಿ ಸತ್ತವು. ಹಲಕೆಲವು ಜರಿದುಬೀಳುವ ಗಂಡಶೈಲಗಳಿಗೂ ಮುರಿದು ಬೀಳುವ ಗಿಡಮರಗಳಿಗೂ, ಸಿಕ್ಕಿ ಹತವಾದವು. ಉಳಿದವುಗಳು ಅಲ್ಲಲ್ಲಿ ಹಬ್ಬಿದ ಬೆಂಕಿಗೂ. ಮಹಾ ಮೃಗಗಳ ಪೆಟ್ಟಿಗೂ, ತಾಗಿ ಅಳಿದುವು. ಇನ್ನೂ ಕೆಲವು ಬಲೆಯಲ್ಲಿಯೇ ನುಸುಳಿದುವು. ಸಿಕ್ಕಾದ ಸಾಧು ಸಾಧಾರಣ

ಪ್ರಾಣಿಗಳು ಪೊದರುಗಳಲ್ಲಿಯೇ ಮುದುರಿದ್ದು, ಆರ್ಭಟಗಳನ್ನು ಕೇಳಿ ಕೇಳಿ ತಲೆಬಾಗಿ ಅಲ್ಲಲ್ಲಿಯೇ ಮಡಿದವು. ಘೋರಾರವಕ್ಕೆ ಬೆದರಿ ಓಡುವ ಪಕ್ಷಿಗಳು ಎದ್ದ ಧೂಳಿಯಿಂದ ಕಂಗೆಟ್ಟು ದಿಕ್ಕುಕಾಣದೆ ಮರಗಳಿಗೆ ಅಪ್ಪಳಿಸಿ ಸೀಳುಸೀಳಾಗುತ್ತಲಿದ್ದವು.

ಅಂದಿನ ಕಾಡುಖತಿಯನ್ನು ಹೇಳುವವರಾರು? ಎಲ್ಲೆಲ್ಲಿಯೂ 'ಎಲೇ ಅಂಜುಪುರುಕ! ಕಡಿ. ಎಲಾ ಬಂಜೇಮಗ! ಜಡಿ. ಎಲೋ ಕಿರಾತ ಬಡ್ಡಿ! ತಿವಿ. ಎತ್ತು ಪುಲಿಕಣ್ಣಾ! ಸೀಳು. ಛೀ! ಸೆಳೆ, ಓಡು. ಕೊಲ್ಲು. ಇಕೋ! ಸಿಂಹ ಸೀಳಿದ ಆನೆಯ ತಲೆಮಣಿಯು ರಕ್ತಕೂಡಿ ಮಿಣುಕುತ್ತಲಿರುವುದು! ಅಕೋ, ಮದ್ದಾನೆಗಳು ಕದಡಿಸಿ ಹಾಳುಮಾಡಿದ ಮಡುವು. ಅದೋ, ಕಾಡುಕೋಣವು ಮೈಯುಜ್ಜಿ ತೊಗಟು ತೆಗೆದ ಮರದ ಮುಂಡ. ಇಕೋ. ಭದ್ರಮುಷ್ಟಿಗಾಗಿ ಹಂದಿಯಿಂದ ಕೆದರಲ್ಪಟ್ಟ ಭೂಭಾಗ. ಎಲಾ, ಶಬರ, ಮಡಿಕಿವಿ, ಟೊಂಕುಬಾಲ, ಏರೆದೆ. ಕೆಂಗಣ್ಣು, ತಗ್ಗುಬೆನ್ನು, ಮೊನೆಯುಗುರು, ಜೊಲ್ಲಾಲಿಗೆ, ಪಿರಿಗೊರಳು, ಹೆಬ್ಬಲ್ಲು ಎಂಬ, ವನಮೃಗಗಳ ಎದೆಗುಂದಿಸುವ ನಮ್ಮ ಬೇಟೆನಾಯಿಗಳೆಲ್ಲಿ? ಮುಂದಟ್ಟು, ಕಾಪುಕಟ್ಟು, ಬಲೆಹರಡು' ಎಂಬ ಬೇಡರ ಕಠೋರ ಶಬ್ದಗಳಲ್ಲದೆ, ಇಂಪಾದ ಧ್ವನಿಯೇ ಇಲ್ಲ.

ಇಷ್ಟರೊಳಗೆ ಒಂದು ಕುತ್ತುರೊಳಗೆ ಹುದುಗಿರ್ದ ಪುಲ್ಲೆಯು, ಪಕ್ಕನೆ ಹೊದೆಯಿಂದ ಹೊರಹೊರಟು ದುಮುಕಿ ಹಾರಿಹೋಗುವುದನ್ನು ಪರಿಕಿಸಿ, ಪ್ರೊಢಪತಿಯು ಅನುಪದವಾಗಿ, ಬೆಂಬಿಡದೆ ಹೋಗಿ ಮಹಾರಣ್ಯವನ್ನೊಳಹೊಕ್ಕನು. ಸೈನಿಕರೆಲ್ಲರೂ ಇಪ್ಪತ್ತು ಯೋಜನ ಹಿಂಬಿದ್ದರು. ಆಸರು ರಾಜನ ವೇಗಶಾಲಿಯಾದ ಕುದುರೆಯ ಬೆನ್ನಟ್ಟಿ ಬಳಲಿ ಸದಳರಾಗಿ ಅಲ್ಲಲ್ಲಿಯೇ ತಾವ್ರನಾಡಿ ನಿಂತರು. ಕುದುರೆಯು ಮುಂದರಿಯಿತು.

ಆಗ ಹನ್ನೊಂದುವರೆ ಘಂಟೆಯ ಸಮಯ. ಸೂರ್ಯನು ನೆತ್ತಿಯನ್ನು ಸುಡತೊಡಗಿದ್ದನು. ಮಹಾರಾಜನಿಗೆ ಬಾಯಾರಿತು. ಬ್ರಹ್ಮರಂಧ್ರವು ಬಿಸಿಏರಿತು. ಕಾಲುನಡುಗ ತೊಡಗಿತು. ಎದೆಯು ಹದ

ಮೀರಿ ಹಾರಿತು. ಶ್ವಾಸವು ಪ್ರಮಾಣ ಮಿಕ್ಕಿ ಬರುತ್ತಲಿತ್ತು. ಕಣ್ಣು ಮುಸುಕಾಯಿತು. ನೊಂದು ಬೆಂದು ತಲೆಯು ಭ್ರಮಿಸತೊಡಗಿತು. 'ಇದೇನರ್ಧ ರಾತ್ರಿಯೇ?' ಎಂದು ಯೋಚಿಸಿದನು. ಶಬ್ದವನ್ನು ಸ್ಪಷ್ಟವಾಗಿ ಉಚ್ಚರಿಸಲಾಗುತ್ತಿದ್ದಿಲ್ಲ. ಮೈಬೆವರಿ ಬೆವರಿ, ಹೊಂಬಟ್ಟೆಗಳೆಲ್ಲಾ ತೊಯ್ದು ಮೈಗೆ ತಗಲಿಕೊಂಡು, ರಾಜನ ಮನಸ್ಸಿಗೆ ಬೇಸರ ತೋರ್ಪಡಿಸುತ್ತಲಿದ್ದುವು. ನರನಾಡಿಗಳಲ್ಲಿ ನೆತ್ತರವು ಕಾವೇರಿ, ಅತಿ ವೇಗವಾಗಿ ನಡೆಯುತ್ತಲಿತ್ತು. ಚಂದ್ರನಿಂದ ಅಮೃತಬಿಂದುಗಳಂತೆ, ಮುಖದಿಂದ ಬೆವರ್ತುಂತುರುಗಳು ಹಿಂಗುರುಳಲ್ಲಿಳಿದು, ಗಲಪಟ್ಟಿಯನ್ನು ನೆನೆಯಿಕ್ಕುತಲಿದ್ದುವು.

ಅರಸನು ಕಂಗೆಟ್ಟು ಹಿಂದಿರುಗಿ ಪರಿವಾರವನ್ನು ನೋಡಿದನು! ದಂಡಾಳುಗಳೆಲ್ಲರೂ ಇಪ್ಪತ್ತೈದು ಯೋಜನ ಹಿಂದಾಗಿರುವರು: ಕಾಣಿಸುವ ಬಗೆ ಹೇಗೆ? ಜನರನ್ನು ಕಾಣದೆ ಧೀರನಾದ ರಾಜನು ಸ್ವಲ್ಪ ಮತಿಗೆಟ್ಟು 'ವಿಪದಿ ಧೈರ್ಯಂ' ಎಂಬ ಪ್ರಾಜ್ಞರ ಮಾತನ್ನು ಸ್ಮರಿಸಿ, ಸ್ಥೈರ್ಯಗೊಂಡು ನಿಟ್ಟುಸಿರು ಬಿಟ್ಟು ದೇವರನ್ನು ನೆನೆಯುತ್ತಾ 'ಆರಬ್ಧ ಸ್ಯಾಂತಗಮನಂ' ಎಂದು ಇನ್ನೂ ಮುಂದರಿದನು.

ಹುಲ್ಲೆಯು ರಾಜನ ಕುದುರೆಯನ್ನು ತಿರುತಿರುಗಿ ನೋಡುವುದು. ಮೈಕುಗ್ಗಿ ಹಿಗ್ಗಿಸಿ, ಹೆಚ್ಚು ಪಾಲು ಆಗಸದಲ್ಲಿಯೇ ಹಾರುವುದು. ವೇಗ ಚಾಪಲ್ಯವನ್ನು ಅದರ ಕಣ್ಣಿನಿಂದಲೇ ಕಲಿತಿರಬೇಕು. ಸಾರ್ವಭೌಮನು ಹೆದೆಏರಿದ ಬಿಲ್ಲೊಳಗೆ, ಕೂರ್ಗಣೆಯನ್ನು ಹೂಡಿ ಮೃಗದ ಎದೆಯನ್ನು ತಿವಿದನು! ಅರ್ಧಜಗಿದ ಹುಲ್ಲನ್ನುಗುಳುತ್ತಾ ಹುಲ್ಲೆಯು ಅಲ್ಲಿಯೇ ನಾಮಶೇಷವಾಯಿತು!

# ೩. ರಾಜನ ವಿಶ್ರಾಂತಿ.

ರಾಜನು ಕಡಿವಾಣವನ್ನು ಸಡಿಲುಬಿಟ್ಟು ಕುದುರೆಯಿಂದಿಳಿದನು. ಜಲಾಶಯವನ್ನು ಹುಡುಕಲೆಳಸಿ, ಕಣ್ದೆರದು ನಾಲ್ಕೂ ಕಡೆಯನ್ನು ನೋಡಿದನು. ಸುತ್ತಲೂ ಕರಿದಾದ ಕಾಡು. ಆಕಾಶವನ್ನು ಮುಟ್ಟುವ ಮರಗಳಲ್ಲಿ ಹಬ್ಬಿದ ಜ್ಯೋತಿಷ್ಮತೀ ಬಳ್ಳಿಯು ಹಗಲು ಮಿಂಚಿನಂತೆ ತೋರುತ್ತಲಿತ್ತು. ಅಲ್ಲಲ್ಲಿ ಹರಿದುಹೋದ ನದಿಗಳ ದಾರಿ; ಅವುಗಳಲ್ಲಿ ಮಳಲು ಕಲ್ಲುಗಳು ಮಾತ್ರ ತುಂಬಿದ್ದುವು. ಹೊಯ್ಗೆಗಳೊಡನೆ ಬೆಟ್ಟದ ಝರಿಗಳಿಂದ ಕಿತ್ತುಬಂದ ಚಿನ್ನದ ರವೆಗಳು, ಸೂರ್ಯನ ರಶ್ಮಿತಟ್ಟಿ ಹಾಸಿದ ಭಂಗಾರದ ತಗಡಿನಂತೆ ಹೊಳೆಯುತ್ತಿದ್ದುವು. ಬಿಲದ್ವಾರಗಳು, ಚಂಡಾತಪದಿಂದ ಬಳಲಿದ ಬೆಟ್ಟದ ಶ್ವಾಸದ ಗಾಳಿಯನ್ನೆಂಬಂತೆ, ಬಿಸಿಯಾದ ಸೆಕೆಯನ್ನು ಬಿಡುತ್ತಿದ್ದುವು. ಮರಗಳ ಅಡಿಯಲ್ಲಿ ಮೃಗಜಾತಿ ಎಲ್ಲವೂ ತಂಡತಂಡವಾಗಿ ಬಿದ್ದಿದ್ದುವು. ಪರಹಿತಕ್ಕಾಗಿ ಛಳಿಬಿಸಿಲನ್ನು ಸಹಿಸುವ ಮರಗಳು, ಸಜ್ಜನರಂತೆ ಏಕಕಾಲದಲ್ಲಿ ಸರ್ವಸ್ವವನ್ನೂ ದಾನಮಾಡಿ ಇನ್ನೂ ಆಶೆ ಕೊನೆಮುಟ್ಟದೆ ನಿಂತಿದಂತೆ ಕಾಣಿಸಿಕೊಳ್ಳುತ್ತಿದ್ದುವು.

ಇವುಗಳ ತೊಗಟನ್ನು ಋಷಿಗಳು ಬಟ್ಟೆಗಾಗಿ ಉಪಯೋಗಿಸುವರು. ಪರಿಮಳವನ್ನು ಗಾಳಿ ಕೊಂಡೊಯ್ಯುವುದು. ಪುಷ್ಪಗಳನ್ನು ಗುಂಗಿಹುಳಗಳು ಕೈಕೊಂಡವು. ಎಲೆಗಳಿಂದ ಪಶುಗಳು ತೃಪ್ತಿಹೊಂದುತ್ತಲಿದ್ದವು. ಸಮಿಧೆಗಳು ತಾನೇ ಹೋಮಕ್ಕೆ ಪ್ರಧಾನಾಹುತಿಗಳು. ನೆಳಲಿನಿಂದ ಉಪಕಾರ ಹೊಂದದ ಪ್ರಾಣಿಗಳಿಲ್ಲ. ಕೊಂಬೆಕೋಟರಗಳಲ್ಲಿ ಹಕ್ಕಿಹರಣಗಳು ಸುಖಜೀವಿಗಳಾಗಿರುವವು.

ಅಲ್ಲಲ್ಲಿ ಬಿಳ್ಳ ಮನೆ, ಗಿಡಗಳ ಹೊದರು, ಹುಲ್ಲುಗಳ ರಾಶಿ. ಸ್ವಲ್ಪ ದೂರ ಮುಂದೆ ಗಮಿಸಿದನು. ನಾನಾ ಬಣ್ಣದ ಹಕ್ಕಿಗಳ ತಂಡವು ಕಂಗೊಳಿಸುವಂತಾಯಿತು. ಸರೋವರವಿದೆಂದೂಹಿಸಿ. ಹತ್ತಿಪ್ಪತ್ತಡಿ ನಡೆದು, ಜಲೋದವಾದ ನೀರನ್ನು ಕಂಡನು. ಇದೇ ಬಾಣಕವಿಯಿಂದ

ಕಾದಂಬರಿಯಲ್ಲಿ ವಿಶದವಾಗಿ ಹೊಗಳಲ್ಪಟ್ಟ, ಅಚ್ಛೋದವೆಂಬ ಅಮೋಘತರವಾದ ಸರೋವರವು.

ವಿಹಗಗಳು ಕೆನ್ನೈದಿಲೆ ಎಲೆಗಳ ಅಡಿಯಲ್ಲಿ ಅತ್ತಿತ್ತ ತುಳುಕಾಡುವುವು. ತಿಳಿನೀರು ಮರಕತದ ಹಲಿಗೆಯಂತೆ ಥಳಥಳಿಸುತ್ತಿರುವುದು. ಕಮಲ ಪುಷ್ಪಗಳಲ್ಲಿ, ಭ್ರಮರಗಳು ಒಂದರಿಂದೊಂದಕ್ಕೆ ಧುಮ್ಮಿಡುವಾಗ, ಪುಷ್ಪಗಳು ಕರಿತುಂಬಿಗಳ ಸಹವಾಸದಿಂದ ತಗಲಿದ ಕಪ್ಪನ್ನು ತೊಳೆಯಲಿಕ್ಕೆಂಬಂತೆ, ನೀರನ್ನು ಮುಟ್ಟಿ ಏಳುವುವು. ಅರಸಂಚೆಗಳು ಮಾನಸ ಸರೋವರಕ್ಕಿಂತಲೂ ಇದರಲ್ಲಿ ಹೆಚ್ಚಿನ ಪ್ರೀತಿ ತುಂಬಿರುವುವು. ಹೂಹಾಸಸೆಗಳ ಪ್ರತಿಬಿಂಬ ಚಿತ್ರಿತವಾದ, ಸುತ್ತಲಿರುವ ಇಂದ್ರನೀಲದ ಪಾವಟಿಗೆಗೂ ನೀರಿಗೂ ವ್ಯತ್ಯಾಸವಿಲ್ಲ. ಸಣ್ಣ ಸಣ್ಣ ಅಲೆಗಳು ಧಡಕ್ಕೆ ತಟ್ಟುವುದರಿಂದ ಮಾತ್ರ, ಅವುಗಳ ಭೇದವರಿಯಲಾಗುವುದು. ಸುತ್ತಲೂ ಪಕ್ಷಿಗಳ ಚಿಲಿಪಿಲಿಯ ಆರಾವ!

ಕಾಸಾರವು ಅತಿ ಆಳವಾದುದು. ಇದರ ದಂಡೆಯಿಂದ ಧಡಕ್ಕೆ ಮನುಷ್ಯರ ಕಣ್ಣು ಹಾಯದು. ಮಾನಸ ಸರೋವರವು ದೇವತೆಗಳ ಪ್ರೀತಿಪಾತ್ರವಾದುದರಿಂದ, ಇದಕ್ಕೆ ಸರಿಹೋಲಿಸಿ ಮಾತೆತ್ತಿದರೂ ಒಪ್ಪಬೇಕು. ಹೆಚ್ಚು ಹೇಳಿ ಸಾಗದು. ಇದರ ಕಮನೀಯತೆಯನ್ನು ಹೆಸರಿನಿಂದಲೇ ತಿಳಿಯಲು ಸುಲಭ. ಇದರಿಂದಲೇ ಅರಿತವರು 'ಮಹತ್ವಮೋಘಾಮಭಿದೈವವಕ್ತಿ' ಎಂದುಸುರಿರುವುದು ವಾಸ್ತವವು.

ರಾಯನು ಇಳಿದು, ಸ್ನಾನಪಾನಗಳಿಂದ ದಣುವಾರಿಸಿ, ಕುದುರೆಯ ಬೆನ್ನ ಮೇಲೆ ನೀರುತಟ್ಟಿ, ಅದನ್ನು ಆಲದಮರದ ನೆಳಲಿನಲ್ಲಿ ಬೇರಿಗೆ ಬಿಗಿದನು. ಕುದುರೆಯು ಎದೆ ಬ್ಯಾಬಿರಿದು ಕಾರುವ ಜೊಲ್ಲನ್ನು, ದಣುವಾರಿದಂತೆ ಕಮ್ಮಿಕಮ್ಮಿಯಾಗಿ ನಿಶ್ಶೇಷ ನಿಲ್ಲಿಸಿತು ಅರಸನು ಒಂದು ಅಂದವಾದ ಮರದಕಟ್ಟೆಯಲ್ಲಿ, ಒದ್ದೆಯಾದ ಪೀತಾಂಬರಗಳನ್ನು ಒಣಹಾಕಿ, ವಜ್ರ ಕವಚವನ್ನು ಬಿಚ್ಚಿಟ್ಟು ವಿಶ್ರಮಿಸುವ ಕೋರಿಕೆಯಿಂದ ನುಣ್ಣಗೆ ಕುಳಿತನು.

ಘಂಟೆ ಹನ್ನೆರಡು ಹೊಡೆಯಿತು! ಹಗಲೊಡೆಯನು ಆಕಾಶಮಧ್ಯ

ದಲ್ಲಿ, ಮನುಷ್ಯಲೋಕದ ಜೀವನವನ್ನು ಹೀರುವಂತಿದ್ದನು. ಪಕ್ಷಿಗಳು ನೀರು ಕುಡಿದು, ತಂತಮ್ಮ ಬಿಡಯುವನ್ನು ಸೇರಿ, ಸೆಕೆಯಿಂದ ಪಾರಾಗುತ್ತಲಿದ್ದುವು. ಮಳೆಕುಡುಕ ಹಕ್ಕಿಯ ದುರ್ದೆಶೆಯನ್ನು ಹೇಳಿಸಾಲದು. ಜಲಜಂತುಗಳು ತಿಳಿಗೊಳದ ತಾವರೆಗಳ ನೆಳಲಲ್ಲಿ ಅಲುಗದೆ ನಿಂತಿದ್ದವು! ಸ್ಥಲಚರಗಳು ನೆಳಲು, ನೀರನ್ನು ಹಂಬಲಿಸುತ್ತಾ ಅತ್ತಿತ್ತ ಓಡುತ್ತಲಿದ್ದವು! ಮೃಗಗಳು ಜಾತಿವೈರವನ್ನು ತೊರೆದು, ಸಹೋದರ ಸ್ನೇಹವನ್ನು ತೋರಿಸುವುವು. ಸಿಂಹಗಳು ಮದ್ದಾನೆಗಳ ಬಸಿರಡಿಯನ್ನು ಸೇರಿ ನಿಲ್ಲುವುವು. ಕಪ್ಪೆಗಳು ಬಿರಿದ ನಾಗರದ ಹೆಡೆಯ ನೆಳಲಲ್ಲಿ ಅವಿತುಕೊಳ್ಳುವುವು! ಅಹಿಮೂಷಿಕಗಳೊಂದಾಗಿ, ಬಿಲದಲ್ಲಿ ವೈಚಾಚಿ ನಿಂದಿರುವುವು! ನಾಗರಹಾವು ಸೋಗೆಯ ಹಿಂಗರಿಗಳೆಡೆಯಲ್ಲಿ ಅಟ್ಟಿಕಟ್ಟಿ ಕೂತಿರುವುದು! ಬ್ರಾಹ್ಮಣೋತ್ತಮರು ಸೂರ್ಯನಿಗೆದುರಾಗಿ ನಿಂದು ಗಾಯಿತ್ರೀ ಮಂತ್ರದಿಂದ, ಅಭಿಮಂತ್ರಿಸಿದ ಮಧ್ಯಾಹ್ನಿಕಾರ್ಘ್ಯವನ್ನು ಸುರಿಯುವುದಕ್ಕೆ ಸಿದ್ಧರಾಗಿರುವ ವೇಳೆ ನಭೋಮಂಡಲವು ಬಣ್ಣದಿಂದ ಏಕಾಕಾರವಾಗಿತ್ತು. ಪಥಿಕರಂತೆ ನೆರಳು ಮರದಡಿಯಲ್ಲೇ ನಿಂದಿತ್ತು.

## ೪. ಮೋಹಿನಿ.

ರಾಜನು ಮಲಗಲಿಚ್ಛೆಯಿಂದ, ಸಮವಾದ ನೆಲವನ್ನು ಅನ್ವೇಷಿಸುತ್ತಾ ಸ್ವಲ್ಪ ಮುಂದುಹೋದನು. ಅಶೋಕೆಯ ಮರದಡಿಯಲ್ಲಿ, ವಜ್ರದ ಮಂಚದ ಮೇಲೆ, ಮೃದುಮೃದು ಸುಪತ್ತಿಗೆಗಳು ಒಂದರ ಮೇಲೊಂದು ಬಿಡಿಸಿದ್ದುವು. ಭೋಗಸಾಮಗ್ರಿಗಳು ಪಲ್ಲಂಗದ ಮೇಲೆ ಹರಡಿದ್ದುವು. ಎಲ್ಲಿ ನೋಡಿದರೂ ಲತಾಗೃಹ! ಎತ್ತ ಕಂಡರೂ ಹೂವಿನ ಪರಿಮಳ! ಆಹಾ, ಆನಂದ! ಈ ಸುಖವು ಅರಮನೆಯಲ್ಲಿಯೂ ದುರ್ಲಭವೆಂದು ಅವನು ಭಾವಿಸಿದನು. ವನಲಕ್ಷ್ಮಿಯ ಶಿರೋರತ್ನದಂತೆಸೆವ ಈ ಉದ್ಯಾನವು, ಯಾರ ಕೈಕೆಳಗಿರಬೇಕು? ಇದರ ಒಡೆಯನಾವನು? ಇದರಲ್ಲಿ ಸುಖಪಡೆಯುವ ಆ ಮಹಾತ್ಮನ ಪುಣ್ಯವು ಯಾವ ತೆರದಿಂದ ಕೈಸೇರಿದುದು? ಹಾ! ಪುಣ್ಯಶಾಲಿಯೆ! ಎಂದೆನ್ನುತ್ತಾ ತಲ್ಪದಲ್ಲಿ ಕೂರುವಷ್ಟರೊ

ಳಗೆ, ಕುದುರೆಯು ಹ್ರೇಷೆಯನ್ನು ಮಾಡಿ, ಕಬ್ಬಿಣ ಕಟ್ಟಿದ ಕಾಲ್ಗೊರ ಸನ್ನು ಸ್ವಾಭಾವಿಕವಾಗಿ ಮೇಲಕ್ಕೆತ್ತಿ ನೆಲಕ್ಕೊದೆಯಿತು.

ಕುರುಚಲಿನ ಬಳಿಯಲ್ಲಿ ಮಲಗಿದ್ದ ಕಾವಲುಗಾರನು ಒದೆಯನ್ನು ಕೇಳಿ, ಒಡತಿಯು ಬಂದೇ ಬಂದಳೇ? ಎಂದು ದಿಗಿಲಾಗಿ ಕಣ್ಣುಜ್ಜುತ್ತಾ ತಿರಿಗಿ ನೋಡಿದನು! ಹತ್ತಿರದಲ್ಲಿ ಸುಲಕ್ಷಣವಾದ ಕುದುರೆಯೊಂದು ಬಗಿದಿತ್ತು. ಪರ್ಯಂಕದಲ್ಲಿ, ಆರೋ ಓರ್ವ ಪುರುಷ ವ್ಯಕ್ತಿಯಂತೆ ಕಾಣಿಸಿತು. ಥಟ್ಟನೆ ಹತ್ತಿರ ಸರಿದನು. ಮಹಾರಾಜನ ಲಕ್ಷಣಗ ಳನ್ನು ನೋಡಿ, ಮಾತು ತಡವರಿಸಿತು. ನೀನಾರೆಂದು ಕೇಳಲು ಧೈರ್ಯ ಬಂದಿಲ್ಲ. ಹಿಡಿದಿದ್ದ ಆಯುಧವು ಕೈಜಾರಿ ಬಿತ್ತು. ಒಡತಿಯ ಆಗ್ರಹದ ಅತಿ ಭಯದಿಂದ ನಿಟ್ಟುಸುರು ಬಿಡುತ್ತಾ, 'ನಿನಗೆಲ್ಲಿ? ನೀನಾರು? ಏತಕ್ಕೆ ಬಂದೆ?' ಎಂದು ಮೂರು ಪ್ರಶ್ನೆಗಳನ್ನು ಪ್ರಾಣಗಳಂತೆ ಹೊರತಳ್ಳಿದನು. ರಾಜನು ಇವನ ಅಂಗಭಂಗಿಯಿಂದಲೂ, ಮುಖವಿಕಾರದಿಂದಲೂ, ಸಾಮಾನ್ಯ ಚರನೆಂದು ನಿಶ್ಚಯಿಸಿ ತನ್ನ ಗುರುತನ್ನರುಹದೆ 'ದಿಟಹೇಳು! ಇದಾರ ವನ?' ವೆಂದು ಗದರಿಸಿ ಕೇಳಿದನು. ನಾಲ್ಕು ಕಡೆ ನೋಡುತ್ತಾ ಕಾವಲಿನವನು ಹೆದರಿ, 'ಮೊ– ಮೋ– ಮೋಹಿನಿ'ಯದೆಂದನು. ಬಿಂಬಿ ಸಿಲಾರಿಸಿಕೊಳ್ಳುವುದಕ್ಕಾಗಿ, ಮೋಹಿನಿಯು ರೆಕ್ಕೆಗಳನ್ನು ಚದರಿ, ಮೆಲ್ಲನೆ ಸ್ವರ್ಗದಿಂದಿಳಿದು ಬರುತ್ತಲಿದ್ದಳು. ಕಣ್ಣುಹಾಳಿತ ದೂರದಲ್ಲಿ ಹಾಥು ಬರುವ ಆಕೆಯನ್ನು ದೂತನು ಕೈಸನ್ನೆಯಿಂದ ಕಾಣಿಸಿ, ಕಾಲಿಗೆ ಬುದ್ಧಿ ಹೇಳಿದನು.

'ಮೋಹಿನಿ' ಎಂಬ ನಾಮವೇ ಮೂಲೋಕವನ್ನು ಭ್ರಮೆಗೊಳಿಸು ವುದು. ಸಾಕ್ಷಾದ್ವ್ಯಕ್ತಿಯು ಸ್ಮೃತಿಗೆಡಿಸಲೇ ಬೇಕು. ಇದಲ್ಲ. ವ್ಯಾಸ ಮುನಿಗಳಿಂದ ನಿರೂಪಿತವಾದ ರುಕ್ಮಾಂಗದ ಚರಿತೆಯ ನೆನಪಿರುವುದು. ನಾನಾದರೂ ಸ್ತ್ರೀಯರ ಬಡಿವಾರದ ಮಾತಿಗೆ ಮರುಳಾಗುವೆನೆ? ಈ ನಡಗೆ ಬೆಡಗುಗಳು ನನ್ನ ಎದುರೇ! ಪಾಪಭಾವಗಳೆಲ್ಲ ನನ್ನಲ್ಲಿ ಬೆಳೆ ಯಾಗುವವೇ?' ಎಂದು ಯೋಚಿಸುತ್ತಾ ರಾಜನು ಮೇಲಕ್ಕೆ ನೋಡುವಷ್ಟ್ರ,

ಮೋಹಿನಿಯು ಆಳೆತ್ತರದಲ್ಲಿಯೇ ಇಳಿಯುತ್ತಿದ್ದಳು. ರಾಜನು ದೂರದರ್ಶನದಿಂದಲೇ ಚಮಕಿತನಾದನು!

ಮೋಹಿನಿಯು ಆಲಸ್ಯವನ್ನು ನಿವಾರಿಸಿ, ಸುಖಶಯನಕ್ಕಾಗಿ ವನದೇವತೆಯಂತೆ, ಮೆಲ್ಲಮೆಲ್ಲನೆ ಅಡಿಯಿಡುತ್ತಾ, ಮಂಚದ ಬಳಿ ಸಾರಿದಳು. ಕೈಯಿಂದ ಬೈತಲೆ ಬಿಡಿಸುತ್ತಿರುವಳು. ಕುರುಳು ಕುರುಳಾದ ತಲೆಗೂದಲು, ನಿದ್ದೆ ಹತ್ತಲು ಬಾಡಿದ ಕಣ್ಣು, ಬಳಲಿದ ಅಂಗೋಪಾಂಗಗಳು, ಗಾಳಿಗೆ ಹಾರಿ ಮೈಮುಸುಕುವ ಕರಿಕೂದಲು, ವಾಯುಸೇವನೆಗಾಗಿ ಉಟ್ಟಿದ್ದ ತೆಳುವು ಬಿಳುಪಾದ ಪಟ್ಟೆಯ ಬಟ್ಟೆ, ತಿಲಕದ ಬೊಟ್ಟು ಇಲ್ಲದ ಹಣೆ, ಅಂಜನ ತಿದ್ದದ ಕಣ್ಣುರೆಪ್ಪೆ, ನೀರುತೊಟ್ಟ ಕಾಲಂದುಗೆಯ ಮಂಜುಲ ಧ್ವನಿ, ಮನಸ್ಸಿನ ಯಾವ ಅಭಿಪ್ರಾಯವನ್ನೂ ತೋರಿಸದ ಮುಖ, ಸ್ವರ್ಣಕಾಂತಿಗೂಡಿದ ಆ ಶರೀರ; ನಿರ್ಮಲವಾದ ಮುಖಕಮಲವನ್ನು ಚೂರ್ಣಕುಂತಲಗಳೆಂಬ ತುಂಬಿಗಳು ಮುಸುಕಿ, ಸಂಪಿಗೆಯ ಮೊಗ್ಗೆಯಂತಿರುವ ನಾಸಿಕವನ್ನು ನೋಡಿ, ದೂರ ಓಡಿ, ಇಂತಹ ಮಕರಂದಭರಿತವಾದ ಪುಷ್ಪವನ್ನು ಬಿಟ್ಟು ಹೋಗಲು ಇಷ್ಟವಿಲ್ಲದೆ ಮತ್ತೂ ಮತ್ತೂ ಮೋರೆಯುನ್ನೇ ಹಾರಿ ಆವರಿಸುವಂತಿದ್ದುವು. ಇವೆಲ್ಲಾ ಚಕ್ರವರ್ತಿಯ ಮನಸ್ಸಿನಲ್ಲಿ ನೆಲೆಸಿಂದು, ಪೌರುಷಾಹಂಕಾರಗಳನ್ನು ಸೂರೆಗೊಡಲು ಸಜ್ಜುಗಳಾಗಬೇಕೆಂದು ಯತ್ನಿಸಲು ಮುಂಗೊಂಡವು.

ರಮಣಿಯು ಉದಾರಾಶಯನನ್ನು ನಿರುಕಿಸಿ 'ಇದೇನು! ಮಧ್ಯಾಹ್ನಕಾಲದಲ್ಲಿಯೂ ಚಂದ್ರನೇ? ಅಂಗಗಳಿಂದ ರಾರಾಜಿಸುವ ಮನ್ಮಥನೇ? ಇರದು; ವನದೇವತೆಯ ವಲ್ಲಭನಾಗಿರಬೇಕು' ಎಂದು ಬಹುವಿಧವಾಗಿ ಚಿಂತಿಸುತ್ತ ಆತನನ್ನೇ ನಿರುಕಿಸುತ್ತಿದ್ದಳು. ಆಶ್ಚರ್ಯದಿಂದ ಈರ್ವರೂ ಮಾತು ಹೊರಡದೆ ಪರಸ್ಪರ ನೋಡಿಕೊಳ್ಳುತ್ತಿದ್ದರು. ಆಕೆಯ ಕಣ್ಣು ಸ್ತಿಮಿತವಾಯಿತು; ಮಾತಿನ ಲವಲವಿಕೆಯು ಉಕ್ಕಿತು. 'ಅತಿಥಿಗಳನ್ನು ಮುಂದಾಗಿ ಮನ್ನಿಸುವುದು ಗೃಹಸ್ಥನ ಧರ್ಮವೆಂದು, ತಾನೇ ನಮಸ್ಕರಿಸುವೆ'ನೆಂದೆರಗಿದಳು. 'ರಾಜನು ಸುಗುಣೆ! ನೀನು ಯಾರು? ನಿನ್ನ ವಲ್ಲಭನ

ಹೆಸರೇನು? ನಿನ್ನನ್ನು ಪಡೆದ ತಾಯಿತಂದೆಗಳೆಲ್ಲಿ?' ಎಂದು ಅರಿವಿಲ್ಲದವನಂತೆ ವಿಚಾರಿಸಿದನು.

ಬಾಲೆಯು ತನ್ನ ವೃತ್ತಾಂತವನ್ನು ನಗೆಮೊಗದಿಂದ ಆದ್ಯಂತವಾಗಿ ವಿವರಿಸಿ 'ಮಹಾರಾಜನಿಲ್ಲದೆ ಯಾವ ಪ್ರಜೆಗಳು ಬಳಲುವರೋ? ಯಾವ ಅಂತಃಪುರದ ಸ್ತ್ರೀಯರು ವಿರಹವ್ಯಥೆಯನ್ನು ತಾಳದೆ ಹಂಬಲಿಸಿ ದಾರಿಯನ್ನೆದುರು ನೋಡುತ್ತಾ ಕಾಲಕಳೆವರೋ? ಎಲ್ಲಿ ಓಲಗವು ಮುನಿವೃತ್ತಿಯನ್ನು ತಃಳಿರುವುದೋ?' ಎಂದು ಕೇಳಿಕೊಂಡಳು.

ರಾಜನು ತನ್ನನ್ನು ತಿಳಿಸಿ, ಆಕೆಯ ಮನೋವೃತ್ತಿಯನ್ನರಿಯಲು 'ಇದೇನು ನಿನ್ನ ಆರಾಮುವೇ? ದಣುವಾರಿಸಿ ಈಗಲೇ ಸ್ವರ್ಗಕ್ಕೆ ಹೊರಟು ಹೋಗುವೆಯಾ?' ಎಂದು ಕೇಳಲಾಗಿ, ಮೋಹಿನಿಯು ಬೇಸಿಗೆಯ ಬಾಳೆಯ ಸುಳಿಯಂತೆ ಬಾಡಿ ಬಳುಕುತ್ತಾ ಹೋಗದಿದ್ದರೂ 'ಅಪ್ಸರ ಸ್ತ್ರೀಯರನ್ನು ಕೇಳುವವರಾರು?' ಹೋದರೆ, ತಡೆವವರಿರುವರೇ? ಎಂದು ಪಲಿಕಿನಿಂದ ಸಾತೂಕವಾಗಿ ಉಸುರಿದಳು.

ರಾಜನು ಭಾವವನ್ನರಿತು, ಆಕೆಯ ನಿಸರ್ಗರಕ್ತವಾದ ತುಟಿಯ ಕಾಂತಿತಟ್ಟಿ, ಕೆಂಪು ಹತ್ತಿದ ಮುಖರದ ಮುತ್ತನ್ನವಲೋಕಿಸುತ್ತಾ 'ಇದೇನು? ಮೂಗಿಗೆ ಹವಳವನ್ನು ಸಿಂಗರಿಪುದು ದೇವಲೋಕದ ಬಿರುದೇ?' ಎಂದನು. ಚಮತ್ಕೃತಳಾದ ಮೋಹಿನಿಯು ಆ ಮೌಕ್ತಿಕಗಳನ್ನು ಪರಿಕಿಸಿನೋಡಿದಳು. ಅದರ ಒಂದು ಭಾಗದಲ್ಲಿ ಕಟಾಕ್ಷದ ಕಪ್ಪು ಹೊಳೆಯಲು 'ಏನು ಗುರುಗುಂಜಿಯೋ?' ಎಂದು ಕೇಳಿದನು. ಆಗ ಮಂದಸ್ಮಿತವು ಆಕೆಯದಂತಾಕುರಗಳಲ್ಲಿ ತಲೆದೋರಿತು. ಮುತ್ತಿನ ಮಣಿಯು ಸ್ವಭಾವದಿಂದಲೂ ಹಾಸದಿಂದಲೂ ಬಲು ಬಿಳುಪಾಯಿತು.

ರಾಜನು ನಿರೀಕ್ಷಿಸಿ ದೇವಸ್ತ್ರೀಯರ ಸೊಬಗನ್ನರಿಯಲು ಮನುಷ್ಯರಿಂದಾಗುವುದೇ? ಸ್ವಲ್ಪ ಪುಣ್ಯದಿಂದ ಅವರ ದರ್ಶನವು ದೊರೆಯುವುದೇ? ಎಂದು ವರ್ಣಿಸುತ್ತಾ, 'ರಮಣೀಮಣಿ! ನನ್ನ ಪರಿವಾರವು ಏನು ಬವಣೆಗೆ ಈಡಾಗಿ ಎಂತಹ ಸ್ಥಿತಿಯಲ್ಲಿ ಏನನ್ನು ಚಿಂತಿಸುವುದೋ, ಎಲ್ಲಿರುವುದೋ, ಏನಾಗುದೋ, ತಿಳಿಯದು: ಸೈನ್ಯವಿಲ್ಲದೆ ಒಂಟಿಯಾಗಿ ರಾಜನು ಕಾಡಿ

ನಲ್ಲಿ ಅಲೆದಾಡುವುದು ರಾಜಧರ್ಮವೇ'? ಆ ಕಾರಣ, ಈಗಲೇ ರಾಜ್ಯಕ್ಕೆ ಸ್ವಸ್ತ್ಯವನ್ನು ತೆರಳಿಸಿಕೊಂಡು ಹೋಗುವುದು ತಕ್ಕದ್ದಲ್ಲವೇ? ಅನುಗತವಾದ ಪರಿವಾರವನ್ನು ಗೊಂಡಾರಣ್ಯದಲ್ಲಿ ಗತಿಕಾಣಿಸದೆ ತೊರೆದು ಬಂದುದು ಲೋಕಾಪವಾದವಲ್ಲವೇ? ಜಾಗ್ರತೆಯಾಗಿ ತೆರಳುವೆನು, ನಿನ್ನ ಉಪಚಾರದಿಂದ ಸಂತಸಗೊಂಡೆನು, ಸುಖಿಯಾಗಿರಮ್ಮಾ, ಮುಂದೆಲ್ಲಿ ಸಂದರ್ಶನವೋ, ದೇವರ ಇಚ್ಛೆ!' ಎಂದು ಹೇಳಿ, ಹೊರಡಲುದ್ಯುಕ್ತನಾದನು. ರಾಜನ ಮನಸ್ಸು ಏನೂ ಪಲ್ಲಟವಾಗಲಿಲ್ಲ. ನಿಷ್ಕಲ್ಮಷವಾಗಿತ್ತು. ಅಲ್ಲದಿದ್ದರೆ ಇಷ್ಟರೊಳಗೆ 'ಅಮ್ಮಾ' ಎಂಬ ಸಂಬೋಧನೆಯು ಈ ಸಂದರ್ಭದಲ್ಲಿ ಕೂಡುವುದೇ?

ಆತನು ಬಣ್ಣಹಾಕಿದ ಪೀತಾಂಬರವನ್ನುಟ್ಟನು. ವಜ್ರಕವಚವನ್ನು ತೊಟ್ಟನು. ಕಟಿಗೆ ರತ್ನಖಚಿತವಾದ ದಟ್ಟಿಯನ್ನು ಕಟ್ಟಿದನು. ಹರಿತವಾದ ಕತ್ತಿಯನ್ನು ಒರೆಗಾಣಿಸಿ ದಟ್ಟಿಯ ಎಡಬದಿಯ ಕೈಗೆ ಸಿಲುಕಿಸಿದನು. ಬಲ ಕೈಯಲ್ಲಿ ಕಠಾರಿಯು ತೂಕಾಡುತ್ತಲಿತ್ತು. ಧನುಸ್ಸನ್ನು ಹೆಗಲಲ್ಲಿ ಧರಿಸಿಕೊಂಡನು. ಆಗ ಚರ್ಮದ ಹೆದೆಯು ಅದರ ಒಂದು ತುದಿಯಲ್ಲಿ ಮಾತ್ರ ಕಟ್ಟಲ್ಪಟ್ಟಿತ್ತು. ಮೂಡಿಕೆಗಳೆರಡೂ ಅರ್ಧ ಬರಿದಾಗಿದ್ದುವು; ಭಾರವಿದ್ದಿಲ್ಲ.

ಇನ್ನೂ ಮೋಹಿನಿಗೆ, ಆತನು ತನ್ನನ್ನು ಬಿಟ್ಟು ಹೋಗಲಾರನೆಂಬುವುದೇ ಆಶೆ! ಮಾತನಾಡಿಸದೆ ಇರಲಾರನೆಂಬುವುದೇ ಅಭಿಲಾಷೆ!! ನೋಡದೆ ಎಂದಿಗೂ ತಿರುಗನೆಂಬುದೇ ಕೋರಿಕೆ!!!

ರಾಜನು ಸ್ತ್ರೀಯರ ಕಾಪಟ್ಯವನ್ನೂ, ಪರಸ್ತ್ರೀಯರಿಂದ ಎಷ್ಟೋ ಎಷ್ಟೋ ವಿಪತ್ತಿಗೊಳಗಾದ ಹಿಂದಿನವರನ್ನು ನೆನಪರಿಸಿದನು. ರಾಜನೀತಿಯನ್ನು ಚಿಂತಿಸಿದನು. ಧರ್ಮಶಾಸ್ತ್ರವನ್ನು ಸ್ಮರಿಸಿ ತನ್ನನ್ನು ತಾನೇ ಯೋಚಿಸಿದನು. ಸರ್ವಥಾ ಅಪವಾದಕ್ಕೂ ಧರ್ಮದ್ರೋಹಕ್ಕೂ ಪಾತ್ರನಾದೇನೆಂಬುವುದೇ ಬಲವತ್ತಾದ ತರ್ಕ; ಎರಡನೇ ಪಾಪಭೀತಿ. ಇವೆಲ್ಲಾ ಒಂದೇ ತಡವೆಗೇ ಎದುರು ನಿಂದು, ಕೂಡಲೇ ಇಲ್ಲಿಂದ ದೂರವಾಗುವುದೇ ತಕ್ಕುದೆಂದು ಅವನಿಗೆ ಹೊಳೆದಂತಾಯಿತು.

# ೫. ನಿರಾಶೆ.

ರಾಜನು ಕಿರೀಟವನ್ನು ಧರಿಸಿ, ಪಾದರಕ್ಷೆಯಲ್ಲಿ ಕಣ್ಣಿಟ್ಟು ನಾಲ್ಕಡಿ ಇಡುವಷ್ಟರೊಳಗೆ, ಮೋಹಿನಿಯ ಮನಸ್ಸು ಕಳವಳಗೊಂಡಿತು. ಮೋರೆಯು ಹಗಲು ಚಂದಿರನಂತೆ ವೈವರ್ಣ್ಯಹೊಂದಿತು. ಗಂಟಲು ದಪ್ಪವಾಗುತ್ತ ಬಂತು. ಶೋಣಾಧರವು ಬಿಳುಪೇರಿ, ಸ್ವಲ್ಪ ಕಂಪಿಸತೊಡಗಿತು, ಚಂಚಾಲಾಕ್ಷಿಗಳು ಚಲಿಸದೆ ನಿಂದುವು. ಮೈ ಪುಲಕಿಸಿತು. ಸ್ವರವು ಗದ್ಗದವಾಯಿತು. ಬಿಳುಪಾದ ಕಣ್ಣೀರ ಬಿಂದುಗಳು, ನೇತ್ರಗಳಿಂದ ದರಧರಿತ ಧಾರೆಯಾಗಿ, ಸನಾಳಕಮಲದಂತಿರುವ ಬಾಹುಲತೆಯ ಮೇಲೆ ಉರುಳಿ ಉರುಳಿ, ಪಾದಪದ್ಮಗಳಲ್ಲಿ ಬಿದ್ದು, ಆರಿಹೋಗುತ್ತಲಿದ್ದುವು. ರನ್ನಕನ್ನಡಿಯಂತಿರುವ ಕಪೋಲತಗಳಲ್ಲಿ, ಬೆವರ್ತಂತುರುಗಳು ಸಣ್ಣ ಸಣ್ಣ ಮುತ್ತುಗಳಂತೆ ಝುಳುಪಿಸತೊಡಗಿದುವು. ಚಿನ್ನವನ್ನು ಸರಿಹೋಲುವ ಸರ್ವಾಂಗವನ್ನು ಬಿಳುಪು ಆವರಿಸಿತು. ಕಂಬುಕಂಠದಿಂದ ಪುಣ್ಯೋದಕದಂತೆ, ಸ್ವೇದಜಲವು ರೋಮಲತೆಯ ಮಾರ್ಗವಾಗಿ, ತ್ರಿವಳಿಯಲ್ಲಿ ಭಾಗೀರತಿಯ ತೆರದಿಂದ ಮೂರು ಪಾಲಾಗಿ ಹರಿದು, ಸೆರಗಿನ ತುದಿಯಿಂದ ಭೂಮಿಯ ಮೇಲೆ ಬಿದ್ದು ಇಂಗಿಹೋಗುತಲಿತ್ತು.

ಇಲ್ಲಿ ವಾಕ್ಚಾತುರ್ಯವು ಫಲಿಸುವುದು, ಅಸಂಭವವೆಂದೂಹಿಸಿದಳು, ತತ್ಕಾಲದಲ್ಲಿ ಆಕೆಯ ಮನಸ್ಸಿಗೆ ಯಾವ ಉಪಾಯವೂ ತೋಚಲಿಲ್ಲ 'ಪ್ರತ್ಯುತ್ಪನ್ನ ಮತಿಃ ಸ್ತ್ರೀಣಾಂ' ಎಂಬ ಮಾತನ್ನು, ಕಾಳಿದಾಸನು ಪಕ್ಷಪಾತದಿಂದ ಹೇಳಿದ್ದನೆಂದರೂ ಆಗ ಸಟೆಯಾಗುತ್ತಿದ್ದಿಲ್ಲ.

ಸ್ತ್ರೀಯು ನಿರಾಶಳಾಗಿ ಥಟ್ಟನೆ ರಾಜನಿಗೆದುರು ಬಂದು 'ಕೋಮಲಾಂಗನೇ! ಬಂದ ಅಭ್ಯಾಗತರು ಸತ್ಕಾರವನ್ನು ಕೈಕೊಳ್ಳದೆ ಹೋಗುವುದೇ? ಗೃಹಸ್ಥನಿಗೆ ಇದರಿಂದ ಶ್ರೇಯಸ್ಸಾಗುವುದೇ? ಇದಕ್ಕೆ ದೇವತೆಗಳು ಮೆಚ್ಚುವರೇ? ಉಪಚಾರವನ್ನು ಸ್ವೀಕರಿಸಿ ನಡೆವುದು ಅತಿಥಿಗಳ ಧರ್ಮವಲ್ಲವೇ?' ಎಂದೆನ್ನುತ್ತಾ ಅಡ್ಡೈಸಿದಳು.

ರಾಜನು 'ಸುದತಿ, ನಿನ್ನ ಒಲ್ಮೆಯಿಂದ ಇಂದು ನಾನೂ ಕುದುರೆಯೂ ಬದುಕಿದೆವು. ಗಾಳಿಯನ್ನು ಮೈಗೊಟ್ಟು ಸೇವಿಸಿದೆವು. ಪರಿ ಪರಿ ಪುಷ್ಪಗಳ ಪರಿಮಳವನ್ನು ಆಘ್ರಾಣಿಸಿದೆವು. ಇಂಪಾದ ಕೋಗಿಲೆಯ ಕುಕಿಲನ್ನಾಕರ್ಣಿಸಿದೆವು. ಮನುಷ್ಯಯೋನಿಯಲ್ಲಿ ನೋಡಲು ಕೂಡದ, ಇಂತಿರುವ ಪ್ರದೇಶಗಳನ್ನೆಲ್ಲಾ ಸವೀಕ್ಷಿಸಿದೆವು. ನಿನ್ನ ದೆಸೆಯಿಂದಾಗಿ ಮನಸ್ಸು ಸಂತಸ—ಕಡಲೊಳಗೆ ಪಾರುಗಾಣದೆ ತೇಲಾಡುವುದು. ಅಂಗೀಕರಿಸದೆ ಉಳಿದ ಉಪಚಾರವಿನ್ನಾವುದು? ಓರೆಯಾಗು. ಅನುಮನ್ನಿಸು. ಕುದುರೆಯನ್ನು ಸಡಲಿಸುವೆನು' ಇಂತು ಸರಳಚಿತ್ತದಿಂದ ಒಡಂಬಡಿಸಿ ಒಡಿಯನ್ನು ಮುಂತೆಗೆದನು.

ಬಾಲೆಯು ದಾರಿ ತಡೆದು' ಪ್ರಿಯರತ್ನ! ನಿನ್ನ ಮಾತುಗಳು ಆದರಿಸತಕ್ಕವುಗಳು, ಮನ್ನಿಸುವೆನು. ಮಹಾರಾಜರ ಪಯಣವು ನನ್ನಂತಹ ಅಬಲೆಯರ ಸಿರೋಧಕ್ಕೆ ಹಿಂಜರಿಯುವುದೇ? ಲೋಕನೀತಿಯನ್ನರಿತಿರುವ ರಾಜಶ್ರೇಷ್ಠರು ಸತ್ಕಾರ ಪೂರೈಸುವುದರೊಳಗೆ ಎದ್ದು ಹೋಗುವುದು ಆವ ನ್ಯಾಯವೋ?' ಎಂದು ಬಾಯ್ಬಿಟ್ಟು ಕೇಳಿದಳು. ರಾಜನು ಕಣ್ಣೆತ್ತಿ ನೋಡಿ 'ಮಹಿಲಾಮಣಿಯೇ ಪ್ರಾಣ ದಾನಕ್ಕೂ ಮಿಗಿಲಾದ ಕೃತ್ಯೋಪಕಾರವು ಎಂತಹುದೋ ಅರಿಯೆ. ತಕ್ಕುದನ್ನು ಕೈಕೊಳ್ಳುವೆನು. ಅದಕ್ಕಿಷ್ಟು ಸಂಕೋಚವೇಕೆ? ಏನಿದು? ಉಸುರು' ಎಂದು ಹೇಳಿದನು.

'ತಕ್ಕುದನ್ನು' ಎಂಬ ರಾಜವಾಕ್ಯವನ್ನು ಕೇಳಿದ ನಾರೀಮಣಿಯು, ಸ್ವಲ್ಪ ಚಕಿತಳಾಗಿ - ವಾರಾಂಗನೆಯರ – ಎಂಬಷ್ಟರಲ್ಲಿ ಹರ್ಷ, ಶೋಕ, ಭಯದಿಂದ ಅರ್ಧದಲ್ಲಿಯೇ ಮಾತುಕಟ್ಟಿತು. ತಲೆಯು ತಾನಾಗಿ ಬಾಗಿತು. ಉಂಗುಷ್ಠ (?) (ಹೆಬ್ಬೆಟ್ಟಿ) ನಿಂದ ಭೂಮಿಯನ್ನು ಕೆರಚುತ್ತಾ ನಿಂತಳು.

ರಾಜನು—'ಶುಕವಾಣಿ, ಮುಂದರಿತೆನು. ಈ ಆಶೆಯಿಂದ ಹಿಂದಾಗು. ಮನಸ್ಸನ್ನು ಹಿಂತೆಗೆ. ಇದರಿಂದ ನಮಗಿರ್ವರಿಗೂ ಕೇಡುಕು ಸಂಭವಿಸದಿರದು. ನೀನು ದೇವತೆಗಳ ಭೋಗ ಭಾಗ್ಯಗಳಿಗೋಸುಗ ಹುಟ್ಟಿ ಬೆಳೆದವಳು; ನಾನು ಮನುಷ್ಯನು. ಕ್ಷತ್ರಿಯ ಅರಸನು.

'ಆಗದುದರ ಅಪೇಕ್ಷೆ ಆಗಲೇ ಅಂತ್ಯಗೊಳಿಸುವುದು' ಎಂದನ್ನುವ ನ್ಯಾಯವನ್ನು ಪರ್ಯಾಲೋಚಿಸು. ಮರುಳಾಗದಿರು. ಇಂತೆಂದು ಸ್ವಾಂತ-ವಚನಗಳಿಂದ ಆಕೆಯನ್ನು ಸಮಾಧಾನಪಡಿಸಿದನು.

ರಾಜನ ನೀತಿ ವಾಕ್ಯಗಳೆಲ್ಲಾ ಮಾನಿನಿಯ ಮನಸ್ಸನ್ನು ಮುಟ್ಟದೆನೇ ಗಾಳಿಗೆ ಹಾರಿ ಹೋದುವು. ಮೋಹಿನಿಯು ಉತ್ತರಾಲೋಚನೆಯಲ್ಲಿ ನಿಂತಿದ್ದಾಗ, ಒಬ್ಬ ಋಷಿ ಕುಮಾರನು ಅದೇ ತಿಳಿಗೊಳದಲ್ಲಿ ಮಾಧ್ಯಾಹ್ನಿಕೆಯನ್ನು ಮುಗಿಸಿ, ಗುರುಗಳಿಗೆ ಹೋಮಕ್ಕಾಗಿ ತಾನು ತಂದಿಟ್ಟಿದ್ದ ಸಮಿತ್ಕುಶಿಗಳನ್ನು ತೆಗೆದುಕೊಳ್ಳಲು ಪಾವಟಿಗೆಯನ್ನು ಹತ್ತಿ, ಸಮಿಧೆಯನ್ನು ಕಂಡನು. ಸಮಿಧೆಯು ಚದರಿತ್ತು. ದರ್ಭೆಯೂ-ಕೆದರಿತ್ತು. ಸುತ್ತಲೂ ನೋಡಿದನು. ಪಶುಪ್ರಾಣಿಗಳೇನೂ ಕಂಡುಬರಲಿಲ್ಲ. ನಿಜವನ್ನು ತಿಳಿಯಲಪೇಕ್ಷಿಸಿ, ಜ್ಞಾನದೃಷ್ಟಿಯಿಂದ ನೋಡಲು, ಅದೇ ಮೋಹಿನಿಯು ಓರ್ವ ಪ್ರಿಯ ಪುರುಷನಲ್ಲಿ ಮನಸೋತು, ಅವನನ್ನು ಸಳೆಯಲು ವ್ಯಗ್ರಚಿತ್ತಳಾಗಿ ಹೋಗುವಾಗ, ಕಾಲುತಟ್ಟಿ ಸಮಿತ್ಕುಶಿಯು ಚದರಿ ಬಿತ್ತೆಂದು ಗೋಚರಿಸಿತು.

ಬಾಲಕನು ಹುಬ್ಬುಗಂಟಕ್ಕಿ ಕೆಂಗಣ್ಣಿಸಿಂದ ಆಕೆಯನ್ನು ನೋಡುತ್ತಾ 'ಅಪ್ಸರೆಯಾಗಿ ಐಹಿಕವಾದ ತುಚ್ಛಸುಖವನ್ನು ಬಯಸಿ, ಮನುಷ್ಯನಲ್ಲಿ ಮನಹಬ್ಬಿಸಿದೆಯಾ? ಹೆಮ್ಮೆಯಿಂದ ದರ್ಭೆಯ ಕಟ್ಟನ್ನು ಹುಲ್ಲೆಂದೆಣಿಸಿದೆಯಾ? ತಪಃಪ್ರಭಾವವನ್ನು ಲೆಕ್ಕಿಸದೆ ಕೊಬ್ಬಿನಿಂದ ನಮ್ಮ ತಪೋವನದ ಪ್ರಾಂತ್ಯದಲ್ಲಿ ತಿರುಗುವೆಯಾ? ಉನ್ಮತ್ತಳೇ! ಒಳ್ಳಿತು. ಇನ್ನು ಮುಂದೆ ನಿನಗೆ ಸಾಕ್ಷಾತ್ ಶರೀರದಿಂದ ಪುರುಷರಸಹವಾಸವು ಇಲ್ಲದೆ ಹೋಗಲಿ. ಮಿಕ್ಕಿ ನಡೆದರೆ ನಿನ್ನ ಬ್ರಹ್ಮರಂಧ್ರವು ಶಿಂಶುಫಲದಂತಾಗಲಿ' ಎಂದು ಶಾಪವಿತ್ತು ತಿರಿಗಿ ಸಮಿತ್ಕುಶಿಗಳನ್ನು ಸಂಗ್ರಹಿಸಿ, ಆಶ್ರಮವನ್ನು ಹೊಕ್ಕನು. "ಮುಟ್ಟಿದರೆ ಮುನಿವರು" ಎಂಬುದು ಮುನಿಗಳ ಬಿರುದಲ್ಲವೇ?

ಈಮಾತನ್ನಾಲಿಸಿದ ರಾಜನು ಗೋಡೆಯ ಚಿತ್ತಾರ ಬೊಂಬೆಯಂತಾದನು. ಮೋಹಿನಿಯು ಸಿಡಿಲುಬಡಿದು ಬುಡಬಿಟ್ಟ ಬಾಳೆಯ ಗಿಡದಂತೆ, ನೆಲದಮೇಲೆಬಿದ್ದಳು. ಅವಳ ಆಶೆಯ ಪರಿಪಾಕವು, ತಿನ್ನಲಿರುವುದೆಂದು ಆಶೆಯಿಂದ, ಹಾವಾಡಿಗನ ಬುಟ್ಟಿಯನ್ನು ತರಿದು ಒಳಹೊಕ್ಕ ಇಲಿಯ ಪರಿಮಾಣದಂತಾಯಿತು. ಶೂರನಾದ ರಾಜನು ಚೇತರಿಸಿ ಕೊಂಡು, ಮೋಹಿನಿಯ ಕಣ್ಣುಗಳಿಗೆ ನೀರು ತೊಡೆಯಿಸಿ, ಕೈಪಿಡಿದೆತ್ತಿ ಕುಳ್ಳಿರಿಸಿದನು. ಎದೆಗುಂದಿ, ಮುಂದಿನ ಕರ್ತವ್ಯಕಾಣದೆ 'ಬಾಲೇ ಮುಂದೇನು ಗತಿ? ಮನುಷ್ಯರ ಒಡನಾಟವು ಮರುಳುತನವೆಂದು ಈಗತಾನೇ ಹೇಳಿದೆ ನಲ್ಲಾ. ಕಂಡೆಯಾ! ಇನ್ನೇನುಮಾಡುವ? ನೀನು ಹುಟ್ಟಿದ ಅಂದಿನಿಂದ ಯೋಗಿನಿಯೇ ಆಗಿದ್ದರೆ, ಈ ಶಾಪೋಕ್ತಿಗಳಿಗೆ ಅಂಜಬೇಕಾಗಿರಲಿಲ್ಲ. ಸುಖಸಾಮ್ರಾಜ್ಯದಲ್ಲಿ ಪಟ್ಟಾಭಿಷಿಕ್ತಳಾಗಿದ್ದು, ಮುಂದೆ ಕೈಯೊಡ್ಡಿದರೂ ಭಿಕ್ಷೆದೊರೆಯದ ಪರಿಯಾಯಿತು! ನಡು ಜವ್ವನದಲ್ಲಿ ಕಣ್ಣು ಕಳಕೊಂಡವನ ದುಃಖಕ್ಕೆ, ಹುಟ್ಟುಕುರುಡನ ಕಷ್ಟವು ಸರಿಯಾಗುವುದೇ?' ಎಂದು ಬಹುತರದಿಂದ ಪಶ್ಚಾತ್ತಾಪ ಗೊಂಡನು.

ಮೋಹಿನಿಯು 'ರಾಜನೇ ಸುಮ್ಮನಿರು. ಸಂದಮೇಲೆ ನೊಂದ ಫಲವೇ? ತಕ್ಕಯುಕ್ತಿಯು ಎಷ್ಟೋ ಹೊಳೆಯುತ್ತಿರುವುದು. ಆಶ್ರಮದಲ್ಲಿ ಈ ಕುಮರನನ್ನು ಸಾಕಿಸಲಹಿದ, ಇವನ ಮಾತಾಮಹನೋರ್ವನಿರುವನು. ಆತನು ತಪಸ್ಸಿನಿಂದಲೂ ವಯಸ್ಸಿನಿಂದಲೂ ಪರಬ್ರಹ್ಮನೆಂದೇ ಹೇಳಿದರೂ ಅತಿಶಯೋಕ್ತಿಯಾಗದು. ನನಗಾಗಿ ನೀನು ಅಲ್ಲಿಗೆ ಚಿತ್ತೈಸಿ, ಮುನಿಯನ್ನು ಪ್ರಾರ್ಥಿಸಿ. ನನ್ನನ್ನು ಬಿಡುಗಡೆ ಮಾಡಿಸಿದರೆ, ಆಶ್ರಿತಪಾಲಕನೆಂಬ ಬಿರಿದು ನಿನ್ನಬೆನ್ನುಬಿಡದು' ಎಂದು ಹೇಳಿ ರಾಜನನ್ನು ಕರೆದುಕೊಂಡು ಆಶ್ರಮಕ್ಕೆ ಅಭಿಮುಖಿಯಾದಳು.

# ೬. ಆಶ್ರಮ.

ಸ್ವಲ್ಪ ದೂರದಲ್ಲಿಯೇ ಕಿರಿದಾದ ಒಂದು ಕಾಡು ಅದಕ್ಕೆಸುತ್ತಾಗಿ ಅಚ್ಛೋದಸರಸ್ಸಿನಿಂದಿಳಿದುಬಂದ, ಸಣ್ಣದೊಂದು ತೊರೆಯು ಪ್ರವಹಿಸುತಲಿತ್ತು. ಎರಳೆಗಳು ಮರಿಗಳೊಂದಿಗೆ ಆ ಚಿಕ್ಕನದಿಯನ್ನು, ಒಂದೇ ಧುಮುಕಾಟದಿಂದ ಅತ್ತಿತ್ತ ಹಾರಿ ಓಡುತಲಿದ್ದುವು. ಅದೇ ಆ ಮಹರ್ಷಿ ಕುಲಪತಿಯ ಆಶ್ರಮವಾಗಿತ್ತು.

ಶುಕಸಾರಿಕೆಯೇ ಮೊದಲಾದ ಪಕ್ಷಿಗಳು ಆಹಾರಕ್ಕಾಗಿ ತಂದು, ಕೋಟರ ದ್ವಾರಗಳಲ್ಲಿಟ್ಟಿರುವ ತೃಣಧಾನ್ಯಗಳ ತೆನೆಗಳು, ಸುತ್ತಲೂ ಮೋಲ್ಗಟ್ಟಿಸಂತೆ ಜೋಲಿದಾಡುತ್ತಾ ಆನಂದಗೊಳಿಸುತ್ತಿದ್ದುವು. ಬಂದವರನ್ನು ಮುಂದಾಗಿ ಉಪಚರಿಸುವವರಂತೆ, ಫಲಭಾರದಿಂದ ಬಾಗಿದ ಮರಗಳು ತಲೆಬಾಗಿಸಿ ಕೈಗಳಿಂದ ಪಕ್ವ ಫಲಗಳನ್ನು ಎದುರು ಹಿಡಿದು, ಅತಿಥಿಗಳ ತಲೆಯಮೇಲೆ ಹೂಮಳೆಗರೆಸುವುವು. ವಿಟಪಗಳೆಂಬ ಚಾಮರಗಳಿಂದ ಬೀಸುವುವು, ಇಲ್ಲಿ ಪರಿಚಾರಕರು ಮೃಗಪಕ್ಷಿಗಳು:—ಚಮರಿಮೃಗವು ಕಸಗುಡಿಸುವುದು, ಹುಲಿಯು ಕಾವಲುಗಾರ, ಸಿಂಹವು ಕಪರ್ದಾರ, ಎರಳೆಗಳು ಅನುಚರರು, ಹೋಮಧೇನುವೇ ಮಕ್ಕಳಿಗುಣ್ಣಿಸುವಳು. ಪಿಕಪಕ್ಷಿಯು ಗಾನಮಾಡುವವನು. ಸಾರಿಕೆಯು ತಕ್ಕಮಾತುಗಳಿಂದ ಅಭ್ಯಾಗತರ ಮನಸ್ಸನ್ನು ಸಂತೋಷಪಡಿಸುವಂತೆ, ಮೃದುಮಧುರವಾಗಿ ಮಾತಾಡಿಸುವುದು. ಸ್ವಾಗತೋಕ್ತಿಯನ್ನು ಮುಂದಾಗಿ ಹೇಳುವುದೇ ಅರಗಿಳಿಯು, ಲೋಕದ ದೃಷ್ಟಿಭಾದೆಯು ತಟ್ಟದಹಾಗೆ ಋಷಿವರ್ಯನಿಂದ ಮಂತ್ರಿಸಿ ಕಟ್ಟಲ್ಪಟ್ಟ ಗೌರೀದಾರದಂತೆ, ಇದರ ಕುತ್ತಿಗೆಯಲ್ಲಿ ಪಂಚವರ್ಣದರೇಖೆಯು ಕಾಣುತ್ತಿತ್ತು. ಭ್ರಮರಗಳು ಸೌಗಂಧಿಕ ಪುಷ್ಪವೆಂದು ಇದರ ಕೊಕ್ಕನ್ನು ಮುತ್ತುವುವು. ಅರಗಿಳಿಯು ತನಗಾಹಾರವಾದ ನೇರಳೆಯ ತನಿಹಣ್ಣುಗಳು ಅನಾಯಾಸದಿಂದ ದೊರೆದುವೆಂದು ಅಲುಗದೆ ನಿಂದಿರುವುವು. ಪುಣ್ಯಸ್ವರೂಪಿಯಾದ ಋಷಿಯ

ಪರ್ಣಶಾಲೆಯಲ್ಲಿ ಯಾರು ಉಪಚರಿಸರು? ಮುನಿಯ ದಯೆಯನ್ನ ಪೇಕ್ಷಿಸದವರಾರು? ಬೆಟ್ಟಮರಗಳಲ್ಲಿ ಹುಟ್ಟಿಬೆಳೆದ ವಿಜಾತೀಯ ಕೋತಿಗಳೂ ಕುಲಲಲಾಮನಾದ ಆ ರಾಮಚಂದ್ರನನ್ನು ಸೇವಿಸುವುದಕ್ಕಾಗಿ ಊರು ಬಿಟ್ಟವು, ಕಷ್ಟಪಟ್ಟು ಕಡಲನ್ನು ಕಟ್ಟಿದವು, ಕಡೆಗೆ ಪ್ರಾಣದಾಶೆಯನ್ನೇ ತೊರೆದವು, ವಿಭೀಷಣನು ಒಡಹುಟ್ಟಿದ್ದರೂ ಕುಲಕಲಂಕನಾದ ರಾವಣನಿಗೆ ಅನುಕೂಲನಾಗಿರದೆ ಅವನ ಪಕ್ಷವನ್ನೂ ಪಟ್ಟಣವನ್ನೂ ಬಿಟ್ಟು ಕಟ್ಟಕಡೆಗೆ ಅಣ್ಣನ ಪ್ರಾಣಕ್ಕೆ ಸಂಚುಗಾರನಾದನು; ಹಾಗೆ ಇಲ್ಲಿಯೂ ಸ್ವಕೀಯ ಪರಕೀಯರೆಂಬ ಭೇದವಿರಲಿಲ್ಲ.

ಆದರೆ ಇಲ್ಲಿ ಅಂತಹ ಅಕೃತ್ಯವೂ ದ್ವೇಷವೂ ತೊಳೆದೋರವು. ನಿರ್ವೈರ ಸ್ಥಳ. ಕರುಗಳು ಹುಲಿಗಳ ಮರಿಗಳನ್ನು ಆಟಕ್ಕಾಗಿ ತಲೆಯಿಂದ ಹಾಯುವುವು. ಸರ್ಪಗಳು ಕುಣಿತಕ್ಕಾಗಿ ಬಿಚ್ಚಿದ, ನೋಗೆ ಬಾಲದ ಗರಿಗಳೆಡೆಯಲ್ಲಿ ಚಂದ್ರಕಗಳಂತೆ ಜೆಡೆದೋರುವುವು. ಹೆಬ್ಬುಲಿಗಳು ಆಕಳುಗಳ ಮೈಮೇಲೆ, ತಲೆಯೊಡ್ಡಿ ಸಿದ್ದೆಹೋಗುತ್ತಿರುವುವು. ಜಿಂಕೆಗಳು ಹುಲಿಗಳನ್ನು ಮುಟ್ಟುತ್ತಾ ಅತ್ತಿತ್ತ ತಿರುಗುವುವು. ನಾಗರ ಹಾವುಗಳೊಡನೆ ನಲಿದಾಡುವ ಇಲಿಗಳು, ಚಮತ್ಕಾರಕ್ಕಾಗಿ 'ಅಕೋ! ನೋಗೆಗಳು ಸಾರಿಬಂದವೆಂದು ಸುಳ್ಳಾಡುವುವು' ಸರ್ಪಗಳು 'ಎಲೋ, ಮೂಷಿಕವೇ! ಬಂದುದು ನವಿಲುಗಳಲ್ಲವು ಸರಿನೋಡು! ಪರಿವಾರದೊಡನೆ ಹಸಿದು ಬಂದ ಮಾರ್ಜಾಲ ರಾಜನು, ಕಣ್ಣು ಬಿಡುತ್ತಾ ನಿನ್ನನ್ನೇ ನೋಡುತ್ತಿರುವನು. ಜಾಗ್ರತೆ' ಎಂದನ್ನುವುವು. ಹೀಗೆ ಜಾತಿವೈರವನ್ನು ತೊರೆದು ಆಡುವ ಪ್ರಾಣಿಗಳ ಸವಿನುಡಿಗಳು ನೋಟಕರ ಮನಸ್ಸಿಗೆ ಬ್ರಹ್ಮಾನಂದವನ್ನು ಬೀರುತ್ತಲಿದ್ದುವು.

ಆಶ್ರಮದಲ್ಲಿ ಅಲ್ಲಲ್ಲಿ ಕೃಷ್ಣಾಜಿನಗಳು ಆಸನವಾಗಿ ಬಿಡಿಸಲ್ಪಟ್ಟಿದ್ದುವು. ವ್ಯಾಘ್ರಾಜಿನಗಳು ಹರಡಲ್ಪಟ್ಟಿದ್ದುವು. ನಯವಾದ ಶಿಲಾತಲಗಳು ಪೀಠಗಳಂತೆ ಎತ್ತರವಾಗಿ, ಸುಖಾರೋಹಣಕ್ಕೆ ತಕ್ಕವುಗಳಾಗಿದ್ದುವು. ವ್ಯತ್ಯಾಸವಿಲ್ಲದ ಸಮತಟ್ಟು ಭೂಭಾಗದಲ್ಲಿ ಹುಟ್ಟಿ ಬೆಳೆದ ಪುಟ್ಟಪುಟ್ಟಹುಲ್ಲುಗಳು ಒಂದಾಗಿ ಬಿಳಿವಸ್ತ್ರವನ್ನು ಮೇಲಕ್ಕೆ ಹಾಸಿದ ಹಾಸುಗೆಯಂತೆ ಮೆತ್ತಗಾಗಿ ಮುಟ್ಟುವುವು.

ವೀರಪುರುಷನಾದ ಕ್ಷತ್ರಿಯನನ್ನು ನೋಡಿದೊಡನೆ ಎರಳೆಗಳು ದಿಕ್ಕೆಟ್ಟು ಓಡುತ್ತಲಿದ್ದುವು. ಸಾಯಂತನ ಹೋಮಪಾತ್ರೆಗಳನ್ನು ಬೆಳಗುತ್ತಾ ಆ ನದಿಯ ಬದಿಯಲ್ಲಿದ್ದ ಆದೇ ಋಷಿಕುಮಾರನು-ರಾಜನೇ! ನಮ್ಮ ಅಚಿರ ಪ್ರಸೂತೆಯಾದ ಹುಲ್ಲೆಯನ್ನು ಸಂಹರಿಸಿದ ಅಪರಾಧವನ್ನು ಇಳೆಯಾಳ್ವನೆಂಬ ಕಾರಣದಿಂದ ಒಂದೊವ್ಮೆಗೆ ಕ್ಷಮಿಸಿರುವೆನು. ಮುಂದೆ ಅತಿಕ್ರಮಿಸದಿರು. ಅತ್ಯಾಚಾರವು ಆಶ್ರಮದಲ್ಲಿ ಆಗಲಾರದು, ಆಲೋಚಿಸು, ಜಾಗ್ರತೆ! – ಎಂದು ಗದರಿಸಿದನು. ಅರಸನೂ ವೋಹಿನಿಯೂ ನಸುನಗುತ್ತಾ, ಬಾಲನನ್ನು ಸಂತೈಸಿ, ಋಷಿದರ್ಶನದಲ್ಲಿ ಆತುರಪಟ್ಟು, ಕಾಲಿವೆಯನ್ನುದಾಟಿ, ಈರ್ವರೂ ಆ ಮಹರ್ಷಿಯ ಸಮೀಪಕ್ಕೆ ಸಾರಿದರು.

ಕುಲಪತಿಯು ದರ್ಭಾಸನದ ಮೇಲೆ ಕುಳ್ಳಿರ್ದು, ದೇವರನ್ನು ಸ್ಮರಿಸುತ್ತಾ ಧ್ಯಾನಾಸಕ್ತನಾಗಿದ್ದನು. ಜೀರ್ಣವಾದ ನಾರುಬಟ್ಟೆ ಸವೆದು ಸಣ್ಣದಾದ ಜಪಮಾಲೆ, ಸೊರೆಬುರುಡೆಯ ಕಮಂಡಲು, ಮೇಲುಮೇಲಾಗಿ ಸುತ್ತುಕಟ್ಟಿದ್ದ ಜಡೆಸಾಲು, ಭಸ್ಮಪೂಸಿದ ಸರ್ವಾಂಗ ದೇಹದ ಸಂದುಸಂದುಗಳಲ್ಲಿ ಶೋಭಿಸುವ ತುಳಸೀಗುಚ್ಛ; ಎವೆನಿಲ್ಲದ ಕಣ್ಣು, ಉದ್ದುದ್ದವಾದ ಉಗುರು, ನರೆಸೆರೆತೆರೆಗಳಿಂದ ವಯಸ್ಸು ನಿಶ್ಚಯಿಸಲಾಗದು. ಶಿಶಿರ ಶುಭ್ರವಾದ ಮೈಚರ್ಮದಲ್ಲಿ ಸುತ್ತಲೂ ಜೋಲ್ಬಿದ್ದಿರುವುದು. ಈತಗೆ ಸ್ನಾನ ಪಾನಗಳಿಲ್ಲದೆ ಎಷ್ಟುವರ್ಷಗಳು ಸಂದುಹೋದವೋ ತಿಳಿಯದು. ದಾಕ್ಷಾಯಿಣಿಯ ವಿರಹವ್ಯಥೆಯನ್ನು ತಾಳಲಾರದೆ, ಮಹಾ ಮೇರುಪರ್ವತದ ಕೋಡುಗಲ್ಲಿನಲ್ಲಿ ತಪಸ್ಸು ಮಾಡುತ್ತಿದ್ದ ಸಾಕ್ಷಾತ್ ಪರಮೇಶ್ವರನೇ, ಈ ಮಹಾತ್ಮನೆಂದರೂ ಹೆಚ್ಚಿಗೆಯಾಗದು. ಆತನ ತಲೆಜಡೆಯ ಎಡೆಯಲ್ಲಿ ಕಟ್ಟಿದ ಗೂಡುಗಳಲ್ಲಿ ಹುಟ್ಟಿಬೆಳೆದ ಪಕ್ಷಿಗಳೆಲ್ಲವೂ ಆತನ ಅಂಗೋಪಾಂಗಗಳಲ್ಲಿಯೇ ಮುಸುಕಾಡುತ್ತಿರುವುವು. ಆಶ್ರಮ ಪ್ರವೇಶಮಾತ್ರದಿಂದ ದುರ್ವೃತ್ತನ ಮನೋರೂಪವೂ ಬದಲಾಯಿಸುವುದು. ಬೇರೆ ದೃಷ್ಟಾಂತವೇಕೆ? ಅಲ್ಲಿರುವ ಜಂತುಗಳ ಚರ್ಯದಿಂದ ಸರ್ವವೂ ಅರಿತ ಪ್ರಾಯವಲ್ಲವೇ?

ಇಲ್ಲಿ ಮೂರು ತರಗತಿಯ ವಿಧ್ಯಾರ್ಥಿಗಳು ಕಾಣಿಸಿಕೊಂಬರು. ಉತ್ತಮ ತರದ ಶಿಷ್ಯರು ಗಾಳಿಯನ್ನು ಸಹ ಭಕ್ಷಿಸುವರೋ ಇಲ್ಲವೋ ತಿಳಿಯದು. ಇವರ ವಯಸ್ಸು ಮಾತ್ರ ಚಿಕ್ಕದಲ್ಲದೆ, ಇತರ ಯಾವತ್ತು ವಿಧದಿಂದ ಮಹರ್ಷಿಯನ್ನು ಸರಿಹೋಲುತ್ತಲಿರುವರು. ಇವರೆಲ್ಲರೂ ಅಪರೋಕ್ಷಿಗಳು, ಕರ್ಮಬಾಹ್ಯರು, ಜ್ಞಾನಪೂರ್ಣರು. ಮನಸ್ಸಿನಲ್ಲಿ ಏನೇನೋ ಯೋಚಿಸುತ್ತಾ ತಿರುಗುವ ಹುಚ್ಚರಂತೆ, ಬಟ್ಟೆಬಿಟ್ಟು ತಿರುಗಾಡುತ್ತಾ ಜ್ಞಾನದೃಷ್ಟಿಯಿಂದ ದೇವರನ್ನೇ ಕಾಣುತ್ತಿರುವರು. ಜಗತ್ತನ್ನೇ ಪರಮಾತ್ಮನೆಂದು ನೋಡುವ, ಈ ಪುಣ್ಯಾರ್ಷಿಗಳ ಅಭಿಪ್ರಾಯವನ್ನು ತಿಳಿಯಲ್ಲೇಗೆ?

ಪ್ರಥಮ ಕಕ್ಷೆಯವರು ಕುಲಪತಿಯನ್ನು ಸುತ್ತುಗಟ್ಟಿ ಕುಳಿತಿರುವರು. ತಮ್ಮ ಮುಂದಿನ ಜ್ಞಾನೋದಯಕ್ಕಾಗಿ ಆತನ ಮುಖದಿಂದ, ವೇದವಾಕ್ಯದಂತುದುರುವ ಮಾತಿನಲ್ಲಿಯೇ ಕಿವಿಕೊಟ್ಟಿರುವರು. ಅವರಿಗೆ ಕುಶಾಸ್ತರಣದ ಮೇಲೆ ಯೋಗಾಸನದಿಂದ ವೇದವ್ಯಾಸರಂತೆ ಕುಳಿತಿರುವ ಖುಷಿಯು – ಕರ್ಮವೇ ಮುಖ್ಯಸಾಧನ. ಇದರಿಂದಲೇ ಶರೀರ ಶುದ್ಧಿ. ಹಾಗೆಯೇ ಮುಕ್ತಿಯಾಗುವುದು. ಶೌಚಾಚಾರಾದಿ ಕರ್ಮಗಳೇ ಕಾರ್ಯಕಾರಿಗಳು. ಆದುದರಿಂದ ನಿತ್ಯಾಗ್ನಿಹೋತ್ರ, ಗುರುಹಿರಿಯರ ಸೇವೆ, ಇವೇ ಮೊದಲಾದ ಕರ್ಮಗಳನ್ನು ಜಡದೆ ನಡಿಸತಕ್ಕದ್ದು; ಪತಿಯ ಮಾತನ್ನು ಮೀರದೆ "ಗಂಡನೇ ತನ್ನ ಗತಿ" ಯೆಂದು' ಅವನ ಸೇವೆಯಲ್ಲಿರುವುದೇ ಸ್ತ್ರೀಯರಿಗೆ ಪ್ರಧಾನವಾದ ಮೋಕ್ಷಮಾರ್ಗವೆಂಬದು. 'ತದರ್ಥಂ ಕರ್ಮಕೌಂತೇಯ ಮುಕ್ತಸಂಗಸ್ಸಮಾಚರ' ಇತ್ಯಾದಿ ಭಗವಂತನ ವಾಕ್ಯಗಳನ್ನು ಪ್ರಮಾಣವಾಗಿ ತೋರಿಸಿ, ಈ ಅರ್ಥವನ್ನೇ ಶಿಷ್ಯರ ಮನ್ಸಿನಲ್ಲಿ ಈಗ ನೆಲೆನಿಲ್ಲಿಸುವನು. ಇದನ್ನುಕೇಳಿದ ಬಾಲಕರು ಕೇವಲಕರ್ಮದಲ್ಲಿ ಮನವಿಟ್ಟಿರುವರು. "ಗುರೂಪದೇಶೋ ಬಲವಾನ್" ಎಂಬಂತೆ ಆ ಗುರುವಿನಿಂದ ಕಟ್ಟಲ್ಪಟ್ಟ ನಿಯಮದಲ್ಲಿ ಎಳ್ಳಷ್ಟು ಕುಂದು ಕೊರತೆ ಬಾರದಂತೆ ಅತಿ ಜಾಗ್ರತೆಯಾಗಿ ನಡೆವರು ಗುರುಹಿರಿಯರೇ ದೇವರ ವಿಗ್ರಹವೆಂದು ಭಾವಿಸುವರು. ಗುರುಗಳ ಆಜ್ಞೆ

ಯನ್ನು ಉಲ್ಲಂಘಿಸದಿರುವುದೇ ಮೋಕ್ಷವೃಕ್ಷಕ್ಕೆ ಪೇರ್ಬೇರೆಂದು ದೃಢ ನಂಬಿರುವರು. ಆಹಾ ಬಾಲಕರಿರಾ! ಈಗಲೇ ನಿಮಗಿಂತಹ ದೃಢವಾದ ಶ್ರದ್ಧೆಯು ಇಲ್ಲದಿದ್ದರೆ, ಮುಂದೆ ಬೇಗ ಅಜ್ಞಾನವು ನಿವೃತ್ತಿಯಾಗುವ ಬಗೆಹೇಗೆ? ಸಮಸ್ತಭಾರವನ್ನು ಗುರುಚರಣಗಳ ಮೇಲೊಪ್ಪಿಸಿ ಅವರ ಅನುಜ್ಞೆಯಂತೆ ನಡೆದು ಸಂದೇಹಗಳಿಗೆಡೆಕೊಡದಿರೆ ಭವಭೀತಿಯು ಭಸ್ಮ ಶೇಷವಾಗುವುದು. ಒಂದು ಸಂದೇಹವು ಒಂಭತ್ತು ಸಂಶಯಗಳಿಗೆ ತಂದೆಯಾಗಿಯೇ ಹುಟ್ಟುವುದು. ಇದರ ಸಮೂಲವನ್ನು ಕಿತ್ತುಹಾಕು ವುದರಲ್ಲಿ ಗುರುಗಳ ಮುಖವೇ ಮುಖ್ಯವಾದ ಆಯುಧ. ಸಂದೇಹವು ಘಾತಕಾಗದೆ ಇರದೆಂಬುದರಲ್ಲಿ 'ಸಂಶಯಾತ್ಮಾ ವಿನಶ್ಯತಿ' ಎಂಬ ಭಗ ವದ್ವಾಕ್ಯವೇ ಶ್ರೇಷ್ಠವಾದ ಪ್ರಮಾಣ.

ಮಧ್ಯಮಕಕ್ಷೆಯವರು ಕೇಳಿಕೊಳ್ಳುವಾಗ, ಬಲತ್ಕಾರದಿಂದ ಅರ್ಥ ವೆತ್ತಿದ ಎವೆಯು ಇನ್ನೂ ಜಾರಿಬೀಳದಿರಲು, ಕೈಯಿಂದ ಎತ್ತಿಹಿಡಿದು ಅವರ ಮುಖವನ್ನು ನೋಡುತ್ತಾ ಆ ಮಹಾತ್ಮನು ನಿರೂಪಿಸುವ ಪಾರಿ ಯೇ ಪ್ರತ್ಯೈಕ – ಶಿಷ್ಯರೇ, ನಿಮ್ಮ ಶರೀರವು ಪವಿತ್ರವಾಯಿತು. ಮುಂದೆ ನೀವು ಕರ್ಮಮಾರ್ಗದಲ್ಲಿದ್ದ ಅಡಿಯನ್ನುತೆಗೆದು ಜ್ಞಾನಮಾರ್ಗದಲ್ಲಿಡಿರಿ. ಕರ್ಮವು ಕರ್ಮಾಂತರದಲ್ಲಿ ಕಾರಣವಾಗುವುದು. ಇದರಿಂದ ಮುಕ್ತಿ ಯನ್ನು ಪಡೆಯುವುದು ಚಿರಸಾಧ್ಯವಾದಕೆಲಸ. ಜ್ಞಾನ ಮಾರ್ಗವು ಸುಲಭವು. ಸ್ವರೂಪಾನಂದಾವಿರ್ಭಾವವೆಂಬ ಮೋಕ್ಷಕ್ಕೆ ಇದು ಬಹಳ ಹತ್ತಿರ. ನೋಡಿ ತಿಳಿಯಿರಿ. ಸಾವಿರಾರು ಪ್ರಾಣಿಗಳನ್ನು ಕೊಲ್ಲುತಿರುವ ಹುಲಿಯನ್ನು ಕೊಲ್ಲಲು, ಆ ಪ್ರಾಣಿಗಳನ್ನುಳಿಸಿದ ಫಲವು ನಮಗೊದಗಿ ದಂತೆಯೇ ಹಿಂಸಾದೋಷವೂ ನಮ್ಮ ಪಾಲಿಗಿಲ್ಲವೇ? ಹೀಗೆಯೇ ಅಶ್ವ ಮೇಧಾದಿ ಯಜ್ಞಗಳೂ ಕರ್ಮಾಂತರಗಳಲ್ಲಿ ಕಾರಣಗಳೇ ಆದಮೇಲೆ, ಇವುಗಳನ್ನನುಭವಿಸಲು ಎಷ್ಟೋಸಮಯ. ಇಂತಹ ಕರ್ಮಾಂತರಗಳ ನ್ನು ಹೋಗಲಾಡಿಸಲು ಜ್ಞಾನವೇ ಮುಖ್ಯವಾದುದು. 'ಜ್ಞಾನಾಗ್ನಿಸ್ಸರ್ವ ಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ' ಎಂಬ ಗೀತೆಯ ಮಾತಿನ ಆಶ ಯವೂ, ಒಳ್ಳೇಕರ್ಮದಿಂದ ಹುಟ್ಟಿದ ಕರ್ಮವನ್ನೇ ಎತ್ತಿಕೊಡುವು ದಲ್ಲದೆ, ಎಲ್ಲಾ ಕರ್ಮಗಳೆಂಬ ಅರ್ಥವನ್ನು ಒಳಕರಿಸುವುದಿಲ್ಲ.

ಈ ಜ್ಞಾನವು ಹಿಂಸೆಯಿಂದುಂಟಾದ ಕರ್ಮವನ್ನು ನಾಶಮಾಡದು ಇದನ್ನು ಅನುಭವಿಸಲೇಬೇಕು.

ಋಷಿಯು – 'ಚಾಂದ್ರಾಯಣ, ಕೃಚ್ಛ್ರ ಇವೇ ಮೊದಲಾದ ವ್ರತಗಳಿಂದ ಕಾಯವನ್ನು ಕ್ಲೇಶಪಡಿಸಿದರೇನು ಫಲವೆಂದು' ಜ್ಞಾನೋಪಾಯಗಳನ್ನೇ ಸಾಧಿಸಿಕೊಡುವನು. ಹುತ್ತಕ್ಕೆಹೊಡೆದ ಹೊಡೆತದಿಂದ ಹಾವು ಹತವಾಗುವುದೇ? ಸರ್ವದಾ ತೀರ್ಥಜಲದಲ್ಲಿಯೇ ವಾಸಿಸುವ ಜಲಜಂತುಗಳಿಗೂ ಇದರಿಂದ ಮೋಕ್ಷವು ಸಂಭವಿಸುವುದೇ?' ಎಂದು ಸಾರುವನು. ಸರ್ವಾಂಗಗಳಿಗೆ ಬೂದಿ, ಮಣ್ಣು ತೊಡೆಯಿಸಿದರೂ ಫಲವಿಲ್ಲ' ಎಂದೆನ್ನುವನು. ಪರ ಮತವನ್ನು ಕಣ್ಣೆತ್ತಿ ನೋಡಕೂಡದೆಂದು ಕಟ್ಟಪ್ಪಣೆಮಾಡುವನು. ಕಲ್ಲೊತ್ತುವುದೆಂದು, ಹಿಡಿದ ದಾರಿಯನ್ನು ಬಿಟ್ಟು ನಡೆದರೆ, ಮುಳ್ಳು ಚುಚ್ಚಿ ಮುಂದಿನ ಮಜಲಿಗೆ ಹೋಗಿ ಸೇರದಂತಾಗುವುದೆಂದು ಗಟ್ಟಿಹೇಳುವನು.

ಇನ್ನು, ಮೂಗಿನ ಮೇಲೆ ಕೈಯಿಟ್ಟು, ಸರೋವರದ ಕಲ್ಲಮೇಲೆ ಆಕಳಿಸಿ, ತೂಕಳಿಸಿ, ದಿನಕ್ಕೆರಡು ತಾಸು ಕಳೆದೂ, ಕೈಯುದ್ದ ಓಲೆ ಸಂಚಿಕೆಯನ್ನು ಬಿಡಿಸಿ, ತಲೆ ತೂಗುತ್ತಾ ಸ್ವಲ್ಪ ಕೂತಿದ್ದು 'ನಾನೂ ಪರಮ ಯೋಗೀಶ್ವರ ಚಕ್ರವರ್ತಿ' ಎಂಬ ಕೆಲವರು ಮಾತ್ರ, ಈ ಸುರಪಾನಾದಿ ಪಂಚಪಾತಕಗಳಿಗೂ ಹೆದರದೆ ಇರುವರು. ಸಾಮಾನ್ಯರು ದೋಷಗಳನ್ನು ತೋರಿಸಿ ಹೇಳಿದರೂ, "ತೇಜೀಯಸಾಂ ನ ದೋಷಾಯ" ಎಂದೆನ್ನುವರು. ಇವರ ಜ್ಞಾನತೇಜಸ್ಸು ಎಂತಹ ಪ್ರಚಂಡವೋ, ಅವರಿಗೆನೇ ಗೊತ್ತು!

ಈ ಶಿಷ್ಯರು, ಗುರುವು ಉಪದೇಶವಿತ್ತ ಭಗವದ್ರೂಪವನ್ನು ನೆನೆಯುತ್ತಾ ಈ ವರೆಗೆ ತಾವು ಕಾಲಾತಿಪಾತವಿಲ್ಲದಂತೆ ಜಾಗ್ರತೆಯಾಗಿ ನಡೆಯಿಸಿಬಂದ ನಿತ್ಯಕರ್ಮಗಳಲ್ಲಿ, ಈಗ ಅಲ್ಪಸ್ವಲ್ಪ ಕಾಲವ್ಯತ್ಯಾಸವಾದರೂ ಲೆಕ್ಕಿಸರು. ಇವರಿಗಿದ್ದ ಕರ್ಮಶ್ರದ್ಧೆಯು ಸಡಲುತ್ತಾ ಬಂದದೆ. ಮುಂದಡಿಯನ್ನೊತ್ತಿಡಲು, ಕಾಲಡಿಯನ್ನು ಸರಿನೋಡುತ್ತಾ ಹಿಂದಡಿಯನ್ನಲುಕಿಸ ತೊಡಗಿರುವರು.

'ಮಹರ್ಷಿಯೇ – ಈ ದಿನ ಪಾತಕರೊಂದಿಗೆ ನಿನ್ನನ್ನು ನೋಡಿದ ನಾವೂ ಪರಮ ಪವಿತ್ರರಾದೆವು. ನಿನ್ನ ಮಾತುಗಳ ರಹಸ್ಯವೂ ತಕ್ಕಷ್ಟು ತಿಳಿಯಿತು. ನೀನು ಒಲಿದು ಮುಂದೆ ನಮ್ಮನ್ನೂ ಶಿಷ್ಯರ ಗೋಷ್ಠಿಯಲ್ಲಿರಿಸಿಕೊ. ಆದರದಿಂದ ಮರೆಹೊಕ್ಕಿರುವ ನಮ್ಮ ಬಿನ್ನಹವನ್ನು ಆಲಿಸು. ಷಡ್ವೈರಿಗಳೆಂಬ ಅಂಧಕಾರದಿಂದ, ಕುರುಡರಾದ ನಮ್ಮ ಕಣ್ಣುಗಳಿಗೂ ಜ್ಞಾನಾಂಜನವನ್ನು ತೊಡೆಯಿಸು. ಕಾಮ-ಕ್ರೋಧಗಳು ಕರಗಿ ಹೋಗಲಿ. ಶುದ್ಧವಾದ ದೃಷ್ಟಿಯು ಬೆಳಗಲಿ. ನಿನ್ನ ಅನುಗ್ರಹವಲ್ಲದೆ ಧನಕನಕ ಧಾನ್ಯಾದಿಗಳಲ್ಲಿ ನಮಗಿರುವ ಮಮತೆಯ ಬಲುಮೆಯು ನಾಶವಾಗಲು ಉಪಾಯವಾವುದು?

## ೭. ಮಹಾರಾಜನ ಬಿನ್ನಹ.

ಮಹಾರಾಜನೂ ಮೋಹಿನಿಯೂ, ಮಹರ್ಷಿಯನ್ನು ನಮಿಸಿ ತಾವಾಗಿಯೇ ಕ್ಷಮಾಪಣೆಯನ್ನು ಬೇಡಿಕೊಂಡರು. ತಮ್ಮ ಅಪರಾಧಗಳನ್ನು ಸ್ಪಷ್ಟವಾಗಿ ಅರಿಕೆಮಾಡಿಕೊಂಡರು. ಪೊಡವಿಪತಿಯು ವೃದ್ಧ ತಾಪಸನ ಕಾಲನ್ನು ಬಿಗಿಹಿಡಿದು, ತನಗಾಗಿ ವಿಪತ್ತಿನಲ್ಲಿ ಮುಳುಗಿರುವ ಈ ವನಿತೆಯನ್ನು ವಿಮೋಚನೆ ಮಾಡುವಂತೆ ಬೇಡಿಕೊಂಡನು. ತಾಪಸನು ಕನಿಕರದೋರಿ – ಕಾಮಿನಿಯೇ, ಬಾಲಭಾಷಿತವು ಪುಸಿಯಾಗುವುದೆಂದು ತಿಳಿಯದಿರು. ಇನ್ನುಮುಂದೆ ನಿನಗೆ ಸಾಕ್ಷಾಚ್ಛರೀರದಿಂದ ಪುರುಷ ಸಂಸರ್ಗವು ದೊರೆಯಲಾಗದು. ನಿನ್ನ ಸಖಿಯರಲ್ಲಿಯೇ ಸೇರಿ ಸುಖವನ್ನುಹೊಂದು. ಅದರಿಂದಲೇ ನಿನಗೆ ಪೂರ್ಣ ಸುಖವು ದೊರೆಯಲಿ. ಆಶ್ರಮ ಭೂಭಾಗಗಳಲ್ಲಿ ಮೈಮರೆತಿರಬೇಡ. ಪ್ರಮಾದವು ಶಾಸ್ತ್ರನಿಷಿದ್ಧವು. ನಡೆ. – ಎಂದೀರ್ವರಿಗೂ ಹರಸಿ ಕಳುಹಿದನು. ಪುನಃ ರಾಜಮೋಹಿನಿಯರು ಈ ತಮ್ಮ ಹೂದೋಟಕ್ಕೆ ತಿರುಗಿದರು.

ಮುಂದೆ ತನ್ನನ್ನು ಕಾಡಲಾರಳೆಂದು ಧೈರ್ಯಗೊಂಡ ಅರಸನು 'ದೈವಗತಿಯನ್ನು ಹೇಳಲಾಗುವುದಿಲ್ಲಾ. ಹತ್ತೈವತ್ತು ನಿಮಿಷಗಳೊಳಗೆ ಎಷ್ಟು ಕೆಲಸಗಳು, ಎನು ಆಶ್ಚರ್ಯಗಳು ನಡೆದು ಹೋದುವು. ಆಹಾ!

ಕ್ಷಣಿಕಗಳಾದ ಸುಖಕಷ್ಟಗಳೇ!' 'ಎಂದು ಭಾವಿಸುತ್ತಾ ಅದೇ ಹಾಸಿಗೆಯಲ್ಲಿ ಕುಳಿತನು. ಸಾಹಸಿಕರಾದ ಅಂಗನೆಯರು ಉತ್ಸಾಹದಿಂದ ತೊಡಗಿದ ಕಾರ್ಯಗಳಿಗಡ್ಡಿಮಾಡಲು ಬೊಮ್ಮನೂ ಭಯಪಡುವನೆಂಬ ಭರ್ತೃಹರಿಯ ಮಾತನ್ನು ಅವನು ಮರೆತಿದ್ದನು. ರಾಜನ ಬುದ್ಧಿಯು ಮುಂದೇನೆಂದರೂ ಕುಟಿಲವಾಗುವುದು ಸಂದೇಹವೆಂದು, ಸೀಮಂತಿನಿಯು ರಾಜನ ತಲೆಯ ಮೇಲೆ, ಮಂತ್ರಿಸಿದ ಕುಸುಮಗಳನ್ನು ಚೆಲ್ಲಿದಳು. ಪೊಡವಿಯೊಡೆಯನು ಆಗಲೇ ಮೋಹಗೊಂಡು ಮಲಗಿ ಮೂರ್ಛಿತನಾದನು.

ಮೋಹಿನಿಯು ಅಲ್ಲಿ ನಿಲ್ಲದೆ ಸ್ವರ್ಗವೇರಿ, ಮಲಗಿ ನಿದ್ರಿಸಿದ್ದ ಉರ್ವಶಿಯು ಸ್ವಪ್ನದೊಳಹೊಕ್ಕು, ಅಶುಭ ಸ್ವಪ್ನಗಳನ್ನು ತೋರಿಸಿ ಆಕೆಯ ಮನಸ್ಸಿನಲ್ಲಿ ವ್ಯಾಕುಲತೆಯನ್ನುಂಟು ಮಾಡಲು ಉದ್ಯುಕ್ತಳಾಯಿತು.

ದಮನನೂ ಮಂತ್ರಿಯೂ ರಾಜಪರಿವಾರವೂ ಏನಾದುವೆಂಬುದು ವಾಚಕರ ಮನಸ್ಸಿನಲ್ಲಿ ಔತ್ಸುಕ್ಯವನ್ನು ಹೆಚ್ಚಿಸದಿರದು. ಇಪ್ಪತ್ತೈದು ಯೋಜನ ಹಿಂದಾದ ಪರಿವಾರದ ಸಮಾಚಾರವನ್ನು ಮುಂದೆ ತಿಳಿಯೋಣ!

# ೮. ಅಮಾತ್ಯನ ಯೋಚನೆ.

ಸೇನಾನಿಯು ಸೈನ್ಯವನ್ನು ಒಟ್ಟುಮಾಡಿ, ಪಟ್ಟಣಕ್ಕೆ ಕಳುಹಿಸಿ ಕೊಟ್ಟು ಇಂದಿಗೆ ಬಹಳ ದಿನಗಳು ಸಂದುಹೋಗಿದ್ದವು. ಆತನು ರಾಜಮಂತ್ರಿಗಳನ್ನರಸುತ್ತಾ, ಕಾಡಿನಲ್ಲಿಯೇ ಅಲೆದಾಡುವನು. ಈ ದಿನ ತಿರಿತಿರಿಗಿ ಬೇಸತ್ತು ಒಂದು ಮರದಡಿಯಲ್ಲಿ ಕುಳಿತು ಯೋಚಿಸತೊಡಗಿದ್ದನು. ಮತ್ತು 'ರಾಜನು ಯಾವಮಾರ್ಗಹಿಡಿದು ಎಲ್ಲಿಹೋದನೋ ತಿಳಿಯದು. ಮಂತ್ರಿವರ್ಯನು ಇನ್ನೂ ಗೋಚರಿಸನು. ಇನ್ನೇನು ಗೈಯಲಿ; ಈವರೇಗೆ ವ್ಯರ್ಥವಾಗಿ ನಿದ್ರಾಹಾರಗಳನ್ನು ವರ್ಜಿಸಿ ಕಾಡಿನಲ್ಲಿ ತಿರುಗಿದಂತಾಯಿತು. ಇನ್ನಾದರೂ ಪಟ್ಟಣವನ್ನು ಸೇರಿ ರಾಜ್ಯತಂತ್ರಗಳನ್ನು ವಹಿಸಲೇ? ನನ್ನ ಆಗಮನವನ್ನು ಅರಿತೊಡನೆಯೇ ಅಂತಃಪುರದ ಸ್ತ್ರೀಯರು "ರಾಜನೆಲ್ಲಿರುವನು? ಎಂದು ಪದೇ ಪದೇ ಕೇಳುವರು, ಅವರಿಗೇನುತ್ತರ ಕೊಡಲಿ! ಅವರನ್ನು ಸಮಾಧಾನಪಡಿಸುವ ಬಗೆ ಹೇಗೆ? ಆದ ಕಾರಣ ಹುಡುಕಿನೋಡುವೆನು. ಈರ್ವರ ಭೇಟಿಯೂ ಲಭಿಸದೇ ಹೋದರೆ ಪ್ರಾಯೋಪವೇಶಮಾಡಿ ದೇಹವನ್ನು ಬಿಡುವೆನು ಇನ್ನು ಈ ದಿನ ಕುದುರೆಯ ಕಾಲಗುರುತು ಕೂಡಾ ಕಾಣಿಸದು. ಕತ್ತಲೆಯಾಯಿತು. ಮುಂದಿನ ಹಾದಿ ಕಾಣಿಸದು ಎಂದು ಪರಿತಪಿಸುತ್ತಿರುವಷ್ಟರಲ್ಲಿ—

ಸೂರ್ಯನು ಪರಜೀವನವನ್ನು ಹೀರಿದುದಕ್ಕೆ ತಕ್ಕ ಫಲವನ್ನನುಭವಿಸುವಂತೆ ಕಾಂತಿಗುಂದಿ ಕ್ಷೀಣಸತ್ವನಾಗಿ, ಉಪ್ಪುಕಡಲಲ್ಲಿ ಬಿದ್ದು ಮುಳುಗಲು ಸಿದ್ಧನಾಗಿರುವನು. ಪರರ ಹಿತಕ್ಕಾಗಿಯೇ ಜನ್ಮವೆತ್ತಿದ ಬೆಟ್ಟ ಮರಗಳ ತುದಿಯನ್ನು ಕೈಗಳಿಂದ ಬಿಗಿಯಪ್ಪಿದರೂ, ಆ ಮರಗಳು ಆಶ್ರಯಕೊಡದೆ ಸುಮ್ಮನೆ ನಿಂತು ಮುಳುಗುವುದನ್ನು ನೋಡಿಬಿಟ್ಟವು. ಪರದ್ರೋಹಿಗಳಿಗೆ ಉಪಕರಿಸುವವರಾರು ದೊರೆಯುವರು? ಅಥವಾ ಕೆಳದಿಯರ ಶರೀರವನ್ನೊಣಗಿಸಿ, ಮಾನಾಪಹಾರಮಾಡಿದ ಕ್ರೂರ ಮನುಷ್ಯರನ್ನು ಸಂಪನ್ನರಾದ ಅವರ ಗಂಡಂದಿರು ತಮ್ಮ ಸೆರೆಮನೆಯಲ್ಲಿ

ಹಿಡಿದಡಗಿಸುವುದೇನು ತಪ್ಪೆನಲಾಗುವುದೇ? ಪಶ್ಚಿಮಾಕಾಶವು ಕೆಲವು ಕಡೆಯಲ್ಲಿ ಅರಸಿನವಾಗಿಯೂ ಕೆಲವೆಡೆಯಲ್ಲಿ ಕೆಂಬಣ್ಣಮಿಶ್ರವಾಗಿಯೂ ಕಾಣಿಸಿಕೊಳ್ಳುತ್ತಿತ್ತು. ಮೂಡಣ ಬಾಂದಳವು ಕಾರ್ಮುಗಿಲಂತೆ ಕಣ್ಗೆಸೆಯುತ್ತಿತ್ತು. ಪಕ್ಷಿಗಳು ತಂತಮ್ಮ ನೀಡಗಳನ್ನು ಸೇರಿ ಮರಿಮೊಟ್ಟೆಗಳನ್ನು ಮೃದುವಾದ ತುಪ್ಪಳೊಳಗೆ ಬಚ್ಚಿಟ್ಟುಕೊಂಡು ಮುದುರಿಕುವುವು. ಗೂಬೆಯು ಮಾತ್ರ ಅತ್ತಿತ್ತ ಹಾರಾಡುತ್ತಾ ರೆಕ್ಕೆಬಡಿಯುವುದು. ಕೊಳಗಳ ದೊಡ್ಡದಾದ ಕೆಂದಾವರೆಗಳಲ್ಲಿ ಬಂದಿಯಾಗಿ ಸಿಲುಕಿದ ಆರಡಿಗಳು ಬವಣೆಯಲ್ಲಿ ಭಗವಂತನನ್ನು ಮೊರೆ ಇಡುವಂತೆ ಗಟ್ಟಿಯಾಗಿ ಝೇಂಕರಿಸುವುವು. ಗರತಿಮುತ್ತೈದೆಯರು ಗಂಡನ ಸೇವೆಯಲ್ಲಿ ಐದಾದರರಾಗಿ ಮಲಗಿರುವ ಪತಿಯ ಪಾದವನ್ನು ತೊಡೆಯ ಮೇಲಿರಿಸಿಕೊಂಡು ಒತ್ತುತ್ತಾ ನಿದ್ದೆ ಹತ್ತಿಸುವರು. ಪಶುಪಕ್ಷಿಗಳೂ ಬಾಲವೃದ್ಧರೂ ಈಗ ನಿದ್ದೆಹೋಗಿದ್ದರು. ಸ್ವೈರಿಣಿಯರು ಅಂಗೋಪಾಂಗಗಳನ್ನು ಸಿಂಗರಿಸಿ ಪತಿಗೆ ನಿದ್ದೆ ಹತ್ತಲೋಸುಗ ಎಡಗೈಯಲ್ಲಿ ಸೆರಗಿಂದ ಗಾಳಿಬೀಸುತ್ತಾ ಬಲಗೈಯೊಳು ತಾಂಬೂಲ ವೀಟಿಕೆಯನ್ನು ಮಡಿದು ಹಿಡಿದುಕೊಂಡಿರುವರು. ಕಳ್ಳಜನರು ಹರುಷದಿಂದ ತಂತಮ್ಮ ಕನ್ನಕತ್ತರಿಗಳನ್ನು ಸರಿಪಡಿಸಿಕೊಳ್ಳುತ್ತಾ ಊರಿಗೆ ಮೋರೆಯಾಗಿ ನಡೆವರು. ವಿಟಪುರುಷರು ಗೆಳತಿಯರ ಮೇಲನದ ಉಪಾಯವನ್ನು ಕಲ್ಪಿಸುತ್ತಾ ಗುರುಜನರ ಕಣ್ಮರೆಯಾಗುವ ಪ್ರಯತ್ನದಲ್ಲಿದ್ದರು. ಗಬ್ಬಿಲಗಳು ಬಗೆಬಗೆಯ ಹಣ್ಣುಕಾಯಿಗಳನ್ನು ತಂದು ಸೇನಾನಿಯ ಎದುರಿನಲ್ಲಿ ಅರ್ಪಿಸುವವು. ಈ ಹಣ್ಣುಹಂಪಲಗಳು ಶಾಖೋಪಶಾಖೆಗಳಿಗೆ ತಟ್ಟುತ್ತಾ ದಂಡೊಡೆಯನ ಅಡಿಯೆಡೆಯಲ್ಲಿ ಬೀಳುವುವು. ಇದರ ಸಣ್ಣ ಸಣ್ಣ ಶಬ್ದ: ಹರಿದಾಡುವ ಮರದೆಲೆಗಳ ಚಿಕ್ಕ ಚಿಕ್ಕ ಮರ್ಮರ, ಕಾಡು ಮೃಗಗಳ ಕುಣಿದಾಟ, ಮದ್ದಾನೆಗಳ ಚಿತ್ಕಾರ-ದಬ್ಬರ, ಅತವಿಭೂತಗಳ ಆರ್ಭಟ, ದೂರದಲ್ಲಿ ಕಾಡ್ಕಿಚ್ಚಿಯು ಹಬ್ಬಿ, ಬಿದಿರ ಹಿಂಡಿಲನ್ನು ಸುಡುವ ಠಳಠಳಾತ್ಕಾರ; ಕಗ್ಗಲ್ಲುಗಳಿಂದ ಕೆಳಕ್ಕೆ ಹಾರುವ ಹಿಂಸಪ್ರಾಣಿಗಳ ಸಪ್ಪಳ; ರೆಕ್ಕೆಬತ್ತಿದ ರಣಹದ್ದುಗಳು ಗರಿಗಳನ್ನು ಬಿಚ್ಚಿಮುಚ್ಚುವ ಸದ್ದು, ಇದರೆಡೆ ಝಾಮ ಹಕ್ಕಿಯು ಪ್ರಹರಕೊಮ್ಮೆ ಮೂರು ನಾಲ್ಕು ಕೂಗುವುದು, ಕೊಳಗಳೊಳ್ತಾವರೆಗಳ

ಮುನಿವರ್ಯರಂತೆ ತಮಗೆ ಇಷ್ಟದೇವತೆಯಾದ ಹಗಲೊಡೆಯನನ್ನು ಸ್ಮರಿಸುವಂತಿದ್ದು ಕುತ್ತಿಗೆವರೆಗೆ ನೀರೊಳು ಮುಳುಗಿನಿಂದಿರುವುವು. ತಮ್ಮೊಳಗಿರುವ ತುಂಬಿಗಳ ಧ್ವನಿಯು ಉಚ್ಚರಿಸುವ ಓಂಕಾರದಂತೆ ಕೇಳುವುದು. ಮಂತ್ರದ ಅವಧಾರಣೆಯಿಂದ ತಲೆಯು ತೂಗಾಡುವಂತಿತ್ತು. ನಾಳದ ಚಿಕ್ಕ ಚಿಕ್ಕ ಮುಳ್ಳುಗಳು ರೋಮಾಂಚದಂತೆ ಕಂಗೊಳಿಸುವುವು. ಪರಮಹಂಸ ಸಮೂಹದಿಂದ ಯಾವಾಗಲೂ ಸುತ್ತಿರಲ್ಪಡುವುವು. ಲೋಕಕ್ಕೆ ಹರ್ಷವಾದೊಡನೆ ಇವುಗಳ ಮುಖವೂ ಅರಳುವುದು.

ಸೇನಾನಿಯು ಮನಕುಗ್ಗಿ ಕಣ್ಣು ಕುಕ್ಕಿದರೂ ಕಾಣದ ಕಗ್ಗತ್ತಲೆಯಲ್ಲಿ ಅಲುಕದೆ ಅರೆಇರುಳು ಕಳೆದನು. ಮನಸ್ಸಿನಲ್ಲಿ ದೇವರೇ ಎಂದು ರಾಜಮಂತ್ರಿಗಳನ್ನು ಧ್ಯಾನಿಸುವನು. ಹೀಗೆ ವ್ಯಥೆಪಡುತ್ತಾ 'ಇನ್ನೆಷ್ಟು ಹೊತ್ತು ಕಳೆಯಲು, ಮೂಡಣ ದೆಸೆಯು ಕೆಂಪಾಯಿತು. ಕತ್ತಲೆಯು ಬಂದಂತೆಯೇ ಸಂದುಮೂಲೆ ಸೇರಿ ಅಡಗಿತು ಪ್ರಕಾಶವೇರಿತು. ಕಂಡು ಕಂಡಂತೆ ಕಾಡಿನಲ್ಲಿ ತನಗೆಷ್ಟು ದಿನಗಳು ಕಳೆದುಹೋದವೆನ್ನುತ್ತಾ ಸೇನಾನಿಯು ಎದ್ದು ನಿಂತನು. ಹತ್ತಿಪ್ಪತ್ತಡಿ ದೂರದಲ್ಲಿ ಇನ್ನೊಂದು ಮರದಡಿಯಲ್ಲಿರುವ ಬಂಡೆಕಲ್ಲಿನ ಮೇಲಿದ್ದು ತನ್ನಂತೆಯೇ ಸಂಕಲ್ಪಶತಗಳಿಂದ ರಾತ್ರಿಕಳೆದ ಅಮಾತ್ಯವರ್ಯನು. 'ಇನ್ನೆಲ್ಲಿ ಹುಡುಕಲಿ ಮುಂದೆಲ್ಲಿ ಹೋಗಲಪ್ಪಾ' ಎಂದು ತಲೆಬಾಗಿ ಕುಳಿತಿರುವನು. ಚಮೂಪತಿಯು ಹರ್ಷೋತ್ಫುಲ್ಲವದನನಾಗಿ ಸಮೀಪಕ್ಕೈದಿ ಮಡಿಕಾಲಿನಿಂದ ನಿಂತು ಪ್ರಧಾನಿಯ ಅಡಿದಾವರೆಗಳಿಗೆರಗಿದನು. ಇಬ್ಬರೂ ತಮ್ಮೊಳು ಸಂಭಾಷಣೆ ತೀರಿಸಿ ಧನಿಯನ್ನು ಹುಡುಕಲು ಮುಂದಾದರು.

# ೯. ಪ್ರೇಮಾಂಕುರ.

**ಮಹಾರಾಜನು** ಮೂರ್ಛೆಹೋಗಿ ಬಹು ಸಮಯವಾಯಿತು. ಎಷ್ಟು ದಣಿದನೋ? ಆತನನ್ನು ಎಚ್ಚರಿಸುವ ಉಪಾಯವನ್ನು ಹುಡುಕೋಣ! ಮೋಹಿನಿಯು ಏನು ಮಾರ್ಗವನ್ನು ಹಿಡಿದಿರುವಳೋ ನೋಡುವ! ಊರ್ವಶಿಯನ್ನು ಮುಂದಾಗಿ ನೋಡಿ ಮಾತಾಡಿಕೊಳ್ಳುವ.

ಊರ್ವಶಿಯು ಎಚ್ಚತ್ತು ಭಯದಿಂದ ಕಣ್ದೆರೆಯಲು, ದೇವಿಯಂತೆ ಮೋಹಿನಿಯು ಕಾಣಿಸಿಕೊಂಡಳು.

**ಊರ್ವಶಿ**— 'ಸಖಿ! ನಾನು ಕೆಟ್ಟ ಕನಸು ಕಂಡು ಭೀತಿ ಹೊಂದಿರುವೆನು. ಹಗಲು ಕಾಣಿಸಿದ ಸ್ವಪ್ನವು ಫಲಿಸುವುದೇ! ಗುರುಗಳಾದ ಬೃಹಸ್ಪತ್ಯಾಚಾರ್ಯರನ್ನು ಕೇಳು. ತೀವ್ರವಾಗಿನಡೆ.

**ಮೋಹಿನಿ**— 'ಪ್ರಿಯೆ! ಸ್ವರ್ಗದಲ್ಲಿ ಯಾವುದಾದರೂ ವ್ಯರ್ಥವಾಗಿ ಜನಿಸುವುದಿದೆಯೇ? ಸ್ವಲ್ಪವಾದರೂ ಅನಿಷ್ಟಸಂಭವಿಸದೆ ಇರುವುದು ಹೇಗೋ. ಹೇಳೆನು. ಮುಂದಿನಕೆಡುಕನ್ನು ಪರಿಮಾಡಲಾರದಲ್ಲವೇ?

**ಊರ್ವಶಿ**— (ಬಿಸುಸುಯ್ದು) ಮದಿರಾಕ್ಷಿ! ನಮಗೊದಗುವ ಸುಖದುಃಖಗಳು ಸಮಪಾಲಲ್ಲವೇ? ಇದಕ್ಕೆ ತಕ್ಕ ಉಪಾಯವನ್ನು ಚಿಂತಿಸು.

**ಮೋಹಿನಿ**— 'ಗೆಳತಿ! ಚಪಲೆ! ಇದೇನು ಚಿಂತಿಸುವೆ? ನಮ್ಮಂತಹ ದೇವಸ್ತ್ರೀಯರಿಗಿದೊಂದೆದುರೇ? ದೇವರ್ಕಳ ಒಲ್ಮೆಯಿಂದ ಇಷ್ಟಬಂದೆಡೆ ತೆರಳಲನುಕೂಲವಾಗುವಂತೆ ನಮಗೆ ಪಕ್ಕಗಳಿರುವುವು. ನೀನೀಗಲೇ ಹೊರಟು ಭೂಪ್ರದಕ್ಷಿಣೆ ಗೈಯುತ್ತಾ ಪುಣ್ಯಾಶ್ರಮಗಳನ್ನೂ, ತೀರ್ಥಕ್ಷೇತ್ರಗಳನ್ನೂ ನೋಡು. ಪ್ರಾಯಶ್ಚಿತ್ತವು ಪಾಪದಿಂದ ಪಾರಗಾಣಿಸುವುದು ಅನಿಷ್ಟವೆತ್ತಣದು? ಎಂದು ಉಪದೇಶ ಕೊಟ್ಟು 'ಸಖಿ, ತ್ವರೆಯಿಂದ ನಾನು ನನ್ನ ಉದ್ಯಾನದಲ್ಲಿ ಮರೆತು ಬಿಟ್ಟ ನನ್ನ ಪ್ರೀತಿಪಾತ್ರವಾದ ಮುಖವಸ್ತ್ರವನ್ನು ತರುವವಳಾಗು. ಘೃತಾಚಿಯು ಕಸೂತಿಯನ್ನು ಹಾಕಿ

ನಿನ್ನೆಯೋ ನನಗೆ ಕೊಟ್ಟಿರುವಳಷ್ಟೆ! ಮರೆಯದಿರು. ನೀನು ಬರುವ ವರೆಗೂ ಇಲ್ಲಿಯೇ ಕಾದಿರುವೆನೆಂದು' ಹೇಳಿ ಊರ್ವಶಿಯನ್ನು ಅಟ್ಟಿದಳು.

ಊರ್ವಶಿಯು ತೀರ್ಥಕ್ಷೇತ್ರ ಸಂದರ್ಶನೆಯನ್ನು ಪೂರೈಸಿ ಮೋಹಿನಿಯ ಉಪವನವನ್ನು ಸಾರಲು, ಮಲಗಿದ್ದ ರಾಜನನ್ನು ಕಂಡು ಬೆರಗಾಗಿ ಗುರುತಿಸಲು ಉಪಕ್ರಮಿಸಿದಳು. ಕುದುರೆಯನ್ನು ಪರಿಕಿಸಿದಳು. ರಾಜನ ಸರ್ವಾಂಗವನ್ನೂ ಸಮೀಕ್ಷಿಸಿದಳು. ಪೋಷಕ್ಕುಗಳನ್ನು ತಿರಿತಿರಿಗಿ ನೋಡುವಳು. ಪರಿಚಯವಾಗಲಿಲ್ಲ. ಯಾರಾಗಿರಬಹುದು? ಸಾಮಾನ್ಯ ಮನುಷ್ಯನಾಗಿರಬಹುದೇ? ಇಂತಹ ತೇಜಃಪುಂಜವು ಹಾಗಿರದು. ಕಂಡವರ ಮನಸ್ಸನ್ನು ಸೆಳೆವನು. ಕೃಷ್ಣನೇ? ಅಲ್ಲ; ಬಿಳಿದಾದ ರೂಪರಾಶಿಯು ಮೆರೆಯುವುದು! ಮಣಿದೀಪದಂತೆ ಉಜ್ವಲಿಸುವನು; ದಿನಮಣಿಯೇ? ಸಲ್ಲದು, ಬಲು ಶಾಂತಮೂರ್ತಿಯು ಆನಂದವನ್ನು ಬೀರುವನು? ಚಂದ್ರನೇ! ಇರದು, ನಿಷ್ಕಳಂಕನು! ದೇವೇಂದ್ರನೇ? ಹೇಗದು, ಕಣ್ಣೆರಡಲ್ಲವೇ; ಸಾವಿರ ಕಣ್ಣುಗಳೆಲ್ಲಿ' ರಾರಾಜಿಸುವನು. ಆದಿನಾರಾಯಣನೇ? ಅದೂ ಕೂಡದು, ತೋಳೆರಡಲ್ಲವೇ; ನಾಲ್ಕು ತೋಳುಗಳೆಲ್ಲಿ? ತ್ರಿಲೋಕ ಸುಂದರನು! ಮನ್ಮಥನೇ? ಆತಗೆ ಈ ಮನಮೋಹನದ ಶರೀರವೆತ್ತಣದು, ಕಬ್ಬಿನ ಧನುಸ್ಸೆಲ್ಲಿ? ವೇಷ ಧರಿಸಿದ ಕುಬೇರನೇ? ಹೇಳಲರಿಯದು. ಸಕಲ ಸಂಪನ್ನನಾದ ಪ್ರೌಢವಿಯಾಳ್ಮನೇ? ಅರಿಯಲ್ಕೇಗೆ? ಕಪೋಲತಲಗಳಲ್ಲಿ ವರ್ತುಲಾಕಾರವಾಗಿ ಸುತ್ತಿರುವ ಶ್ಮಶ್ರುರೇಖೆ. ಉದ್ದವಾದ ಭ್ರೂಯುಗ್ಮ, ವಿಶಾಲವಾದ ಕಣ್ಣು, ಉರುಟಾದ ಮುಖಮಂಡಲ. ಎರಡು ಕಿವಿಗಳನ್ನೂ ಅಳಕಾವಳಿಯು ಆವರಿಸಿರುವುದು. ಕರಿದಾದ ಆ ಚೂರ್ಣಕುಂತಲಗಳ ಎಡೆಯಲ್ಲಿ ವಜ್ರದ ಕರ್ಣಕುಂಡಲಗಳು ಕತ್ತಲೆಯ ಮಣಿದೀಪದಂತೆ ದೇದೀಪ್ಯಮಾನವಾಗಿ ಥಳಥಳಿಸುತ್ತಿರುವುವು. ಚಂದ್ರನ ಇಕ್ಕಡೆಯೊಳಿರುವ ನಕ್ಷತ್ರಗಳೆಂದರೂ ಎನ್ನಬಹುದು. ಈ ಕರ್ಣರತ್ನಗಳ ಪ್ರಭೆಯನ್ನು ಸಮೀಕ್ಷಿಸಿದ ದೀಪಗಳು ಸಹಾ 'ವಹ ವಹ' ಎಂದು ಈಗಲೂ ತಲೆದೂಗುತ್ತಲಿರುವುವು. ಉತ್ತರದಿಕ್ಕಿನ ಕ್ಷೌರಕರ್ಮಕ್ಕನುಸಾರವಾಗಿ ಮಸ್ತಕದ ಮೇಲುಭಾಗವು ಸ್ಪಷ್ಟವಾಗಿ ಕಾಣಿಸುವುದು.

ಆಹಾ! ಮೃದುಲಾಂಗನೇ! ಸ್ತುತಿಪಾಠಕರು ಈ ಮಹಾಪುರುಷನ ಪ್ರತಾಪವನ್ನು ಕೊಂಡಾಡಲು, ಯಾವ ಅಭಿಧಾನದಿಂದ ಸೊಲ್ಲೆತ್ತುವರೋ? ಯಾವ ಸಾಮಂತ ಅರಸರುಗಳ ಕಿರೀಟಮಣಿಗಳಿಂದ ಹೊರಹೊರಡುವ ಕಾಂತಿಯಿಂದ, ಈ ಮಹಾತ್ಮನ ಚರಣನಖಾಂಶುಗಳು ಸಮ್ಮಿಶ್ರಗಳಾಗಿ ಇಮ್ಮಡಿಯಾದ ತೇಜಸ್ಸನ್ನು ಉಗುಳ್ವುವೋ, ಯಾವ ಅಂತಃಪುರವು ಈಗ ತಲ್ಲಣಿಸಿ ಹರಿವ್ರತವನ್ನಾಚರಿಸುವುದೋ, ಎಲ್ಲಿ ಪ್ರಧಾನಿ ಸೇನಾನಿಯೇ ಮೊದಲಾದ ಅಧಿಕಾರಿಗಳು ತಂತಮ್ಮ ಚಿನ್ಹವನ್ನು ಒಪ್ಪಿಸಲು ದೊರೆಯ ಸಮಾಗಮವನ್ನು ಕಾದಿರುವರೋ, ಅಂತಹ ಈ ಕೋಮಲಾಂಗನ ವಿವರವನ್ನರಿಯುವ ಬಗೆ ಹೇಗೆ? ಒಹೋ! ಅರಿತೆನು. ಮಹಾರಾಜರ ಬೆರಳಲ್ಲಿ ಪಟ್ಟದ ಉಂಗುರವು ನಿಯತವಾಗಿರಲೇಬೇಕು. ಅದರಿಂದ ಸರ್ವವೂ ಸುಗಮ ಎಂದು ಕೈಯೆತ್ತಿ ಮುದ್ರೆಯುಂಗುರವನ್ನು ತೆಗೆದೋದಿದಳು. ಕಟ್ಟಿದ ವಜ್ರದ ತುಂಡಿನಲ್ಲಿ ದೇವನಾಗರ ಲಿಪಿಯಿಂದ 'ಮೃಗಾಂಕ ಕುಲತಿಲಕ ಶ್ರೀಮದ್ರಾಜಾಧಿರಾಜ ಪುರೂರವ ಮಹಾರಾಜ' ಎಂದು ಕೆತ್ತಲ್ಪಟ್ಟಿತ್ತು. ಊರ್ವಶಿಯು ಆಶ್ಚರ್ಯಗೊಂಡು ಈ ಮಹಾರಾಜನು ಶೌರ್ಯೋದಾರ್ಯಗಳಿಂದ ಸ್ವರ್ಗದಲ್ಲಿಯೂ ಹೆಸರು ಹೊತ್ತಿರುವನು. ಈತನ ಸಂದರ್ಶನವು ಪುಣ್ಯೋದಯದಿಂದ ಲಭಿಸಿತು. ಪ್ರಾಯಶ್ಚಿತ್ತ ಬಲದಿಂದ ಸ್ವಪ್ನಫಲವು ವ್ಯತ್ಯಾಸವಾಗಿ ಪರಿಣಮಿಸಿತು. ಮೋಹಿನಿಗೆ ಎಷ್ಟು ಧನ್ಯವಾದಗಳನ್ನು ಹೇಳಿದರೂ ಸಾಲದು. ಈತನಲ್ಲಿ ಸಲ್ಲಾಪವಾಡಿ ಸುಖಸೂಸುವ ವಾಕ್ಯಗಳಿಂದ ಷಡಿಂದ್ರಿಯಗಳಿಗೆ ತೃಪ್ತಿಯನ್ನೀಡುವೆನೆಂದು, ಕಾಲ್ಗಡವಿನ ಕಿರುಗೆಜ್ಜೆಯು ಶಿಂಜಿತವನ್ನು ಪಡುವಂತೆ ಅಲುಕಿಸುತ್ತಾ ಸಮೀಪಿಸಿದಳು.

ರಾಜನು ಎಚ್ಚತ್ತಿಲ್ಲ. ಚೇಟಿಯಾಡಿ ಅಸಪಳಿದು ನಿದ್ರಿಸಿರಬೇಕೆಂದು, ಬೀಸಣಿಗೆಗೆ ಪನ್ನೀರುತಳಿದು ಮೆಲ್ಲಮೆಲ್ಲನೆ ಬೀಸಿದಳು. ಪನ್ನೀರ ಬಿಂದುಗಳು ರಾಜನ ಮೈಗೆ ತಗಲಿದುವು. ಬೋಧ ಬರಲಿಲ್ಲ. ಕಾಲೊತ್ತಿ, ಎಚ್ಚರಿಸುವೆನೆಂದು ಯೋಚಿಸುವುದರೊಳಗಾಗಿ ಆಕಾಶಮಾರ್ಗದಲ್ಲಿ 'ಎಲೌ ಊರ್ವಶಿ'! ಎಂಬ ಸಂಬೋಧನೆಯು ಕೇಳಿಸಿತು. ಭಯವಿಹ್ವಲ

ಳಾಗಿ ಮೇಲೆ ನೋಡಿದಳು. ಪುನಃ ಮೇಘಗಂಭೀರವಾದ ಅದೇ ಧ್ವನಿಯಿಂದ 'ಸಭೆಯಲ್ಲಿ ಸಿದ್ಧಳಾಗಿರುವಂತೆ ದೇವೇಂದ್ರನ ಅಪ್ಪಣೆ' ಎಂದು ಕೇಳಿಸಿತು. ಇವನು ದೇವರಾಜನ ಸಭೆಯಿಂದ ಊರ್ವಶಿಯನ್ನು ಕರೆತರಲು ಅಂದು ಹೊರಟಿದ್ದ ದೂತನು! 'ಅಲಂಕಾರಪೂರ್ತಳಾಗಿ ಕೂಡಲೇ ಬರುವೆ'ನೆಂಬ ಊರ್ವಶಿಯ ಉತ್ತರವನ್ನು ಪಡೆದು ತನ್ನ ಲೋಕಕ್ಕೆ ಹಿಂದಿರುಗಿದನು.

ರಾಜನು ಇನ್ನೂ ಎಚ್ಚತ್ತಿಲ್ಲ, ಕಾಲೊತ್ತಿದಳು. ಕಣ್ದೆರೆಯನು. ಮಾತನಾಡಿಸಿದಳು. ಮರುಮಾತಿಲ್ಲ; ಕಾತರಳಾದಳು. ನಿದ್ರೆಯಲ್ಲವೆಂದು ಗೊತ್ತಾಯಿತು. ವೀರನಾದ ರಾಜನಿಗೆ ಮೂರ್ಛೆ ಬರಲು ಕಾರಣವೇನೆಂದೂಹಿಸಿದಳು. ತಪೋವನವು ಸಮೀಪವಿರುವುದು. ಮುನಿಗಳು ಶಾಪಾನುಗ್ರಹಶಕ್ತಿವಂತರು. ಋಷಿಕೋಪಕ್ಕೆ ಪಾತ್ರನಾಗಿರಬಹುದೇ! ಸುಕುಮಾರ ಶರೀರವನ್ನು ಭೂತಗಳು ಆವರಿಸಿರಬಹುದೇ! ಜಯಮೋಹಿತನಾಗಿ ಬಿದ್ದಿರಬಹುದೇ! ಇದಕ್ಕೆ ಮಹಾರಾಜನಲ್ಲಿ ಎಡೆದೊರೆಯದು. ಮೈಬೆಚ್ಚಗೆ ಇರುವುದು; ಉಸುರು ಕ್ರಮದಂತಾಡುವುದು; ಅಂಗಚೇಷ್ಟೆಗಳಿಗೆ ಕುಂದಿಲ್ಲವು. ಇರಲಿ! 'ಗುರುಗಳಾದ ದೂರ್ವಾಸರು ನನಗೆ ಪ್ರಸನ್ನರಾಗಿ ಉಪದೇಶವಿತ್ತ ಮಂತ್ರಬಲದಿಂದ ಮಲಗಿರುವ ಮಂಚದೊಡನೆ ರಾಜನನ್ನು ನಂದನವನಕೊಯ್ದು, ಮುಂದಿನ ಕರ್ತವ್ಯವನ್ನು ಅಲ್ಲಿಯೇ ಯೋಚಿಸುವೆನು' ಎಂದು ಭಾವಿಸಿ ಕುದುರೆಯನ್ನು ಬಿಚ್ಚಿ ಆಶ್ರಮಮುಖವಾಗಿ ನಡೆಯಲಟ್ಟಿದಳು. ಮಹರ್ಷಿದೂರ್ವಾಸರನ್ನು ನೆನವರಿಸಿ ಮಂತ್ರವನ್ನು ಜಪಿಸುತ್ತಾ ಮಂಚಕ್ಕೆ ಪ್ರದಕ್ಷಿಣೆಯಾಗಿ ಹಾರಿದಳು. ಪರ್ಯಂಕವು ಬೆಂಬಿಡದೆ ನಡೆಯಿತು.

ನಂದನವನದ ಹರಿಚಂದನದ ಮರದಡಿಯಲ್ಲಿ ತಲ್ಪವನ್ನು ಇರಗೊಡಿಸಿದಳು. ವಿಶ್ರಮಿಸಿಕೊಳ್ಳುವುದಕ್ಕಾಗಿ ಅಲ್ಲಲ್ಲಿ ಇಟ್ಟಿರುವ ಮಣಿಮಯವಾದ ಒರಗುಜಗುಲಿಯನ್ನು ನೋಡಿದಳು. ಯಾರೂ ಇಲ್ಲದಿರಲು ರಾಜನ ಕಾಲ್ದೆಸೆಯಲ್ಲಿ ಕುಳಿತು ಚಿಂತಿಸಿದಳು. 'ದೇವೇಂದ್ರನ ಸಭೆಯು ನೆರೆಯಲು ಸಮಯವಾಯಿತು. ತ್ರಿಜಗದೊಡೆಯನು ಒಡ್ಡೋಲಗಕ್ಕೆ ಈಗಾಗಲೇ ಬಿಜಯಂಗೈದಿರಬೇಕು. ನನ್ನ ಗೆಳತಿಯರಾದ ಮೋಹಿನ್ಯಾದಿ ಮಹಿಳೆಯರು ತಮ್ಮ ಕರ್ತವ್ಯಗಳಲ್ಲಿ ಕೊರತೆಬಾರದಂತೆ ಸಭೆಯಲ್ಲಿ ನೆರೆ

ಯದಿರರು. ದೇವತೆಗಳ ಒಡೆಯನು ನನ್ನಲ್ಲಿ ಬೇಸರಗೊಂಡು ದಂಡನೆಯನ್ನು ವಿಧಿಸಿದರೂ ಏತಕ್ಕೆ ಕೂಡದು? ರಾಜಶಾಸನವನ್ನು ಮೀರಲಾಗುವುದೇ? ಹಾಗೆಂದು ಸುಕೃತವಶದಿಂದ ದೊರೆತ ರಾಜನನ್ನು ಕರೆತಂದು ಮಾತನಾಡಿಸದೆ ಹೋಗುವುದು ತರವೇ? ಹಾ! ತ್ರಿಶಂಕು ಮಹಾರಾಜನೇ ನೀನು ಎಂತಹ ದುರವಸ್ಥೆಯಲ್ಲಿದ್ದೆಯೋ! ಅದನ್ನು ಕೇಳಿದರೂ ನನಗೆ ಆ ನಿನ್ನ ಕಷ್ಟವು ಅನುಭವಕ್ಕೆ ಬರಲಿಲ್ಲ. ಇಂದೀಗ ಚಂದದಿಂದ ಅನುಭವಿಸಿದೆನು. ಹ್ಯಾಗಾದರೂ ಆಗಲಿ, ಈ ಶೃಂಗಾರ ಪುರುಷನನ್ನು ಇಲ್ಲಿಗೆ ಬರಮಾಡಿಸಿ ಮಾತನಾಡಿಸದೆ ಕಾಡಿನಲ್ಲಿ ತೊರೆದುಹೋದರೆ ದೇವತೆಗಳ ದೃಷ್ಟಿಗೆ ಸಿಲುಕಿ ಅನರ್ಥಕ್ಕೀಡಾಗಬೇಕಾದ ಸಂದರ್ಭ ಒದಗುವುದು'. ಎಂದೂಹಿಸಿ ಮಂತ್ರಪೂತವಾದ ಜಲವನ್ನು ರಾಜನ ಮೇಲೆ ತಳಿದು ಅದೂರವಾದ ಬಳ್ಳಿಯ ಅಡ್ಡವಾಗಿ ಕಣ್ಮರೆಯಾದಳು.

## ೧೦. ವಿಸ್ಮಯ.

ಮಹಾರಾಜನು ಎಚ್ಚತ್ತು ಚತುರ್ದಿಕ್ಕುಗಳನ್ನು ನೋಡಿದನು. ಮೋಹಿನಿಯು ಕಾಣಿಸಲಿಲ್ಲ. ಆ ಲತಾಗೃಹಗಳು ಕಾಣಿಸವು! ತಪೋವನವು ಎಲ್ಲಿಯೋ! ಆ ತಿಳಿಗೊಳದ ಸಮಾಚಾರವೇ ದೂರ. ಕುದುರೆಯು ಕಂಗೊಳಿಸದು; ಪಾದರಕ್ಷೆಯು ತೋರದು. ಗುರ್ತಿಸಿದರೆ ತಾನು ಮಲಗಿದ್ದ ಆ ಆರಾಮವೇ ಇದಲ್ಲವೆಂದು ಕಂಡುಬಂತು. ಈಗ ತಾನಿರುವ ಸ್ಥಳದ ಪರಿಚಯವಾಗಿಲ್ಲ. ಸಾಲುಸಾಲಾಗಿ ಬರುವ ಎಳೆದುಂಬಿಗಳ ಝೇಂಕಾರ, ಓಡಾಡುವ ಪಕ್ಷಿಗಳ ಚೀತ್ಕಾರ, ಪುಷ್ಪಗಳ ಪರಿಪರಿ ಪರಿಮಳ, ಕೆಂಪಾದ ಚಿಗುರೆಲೆ, ಮಂದವಾದ ಗಾಳಿ, ಮರಕ್ಕೆ ಹಬ್ಬಿದ ಬಗೆಬಣ್ಣದ ಬಳ್ಳಿ, ಜೋತಾಡುವ ಹಣ್ಣುಗಳ ಗೊಲ್ಲೆ, ಸುವಾಸನೆಯಾದ ಹೂಗಳ ಗೊಂಚಲು, ಮೆದುಹುಲ್ಲಿನ ಭೂಬಾಗ, ಅಲ್ಲಲ್ಲಿ ಕಂಡುಬರುವ ಕ್ರೀಡಾಶೈಲ, ತನಿಹಣ್ಣುಗಳ ಭಾರದಿಂದಬಾಗಿದ ಬಾಳೆಯಗಿಡ, ಫಲವನ್ನು ಸುರಿಸುತ್ತಿರುವ ದ್ರಾಕ್ಷೆಯ ಬಳ್ಳಿ, ಇವು ರಾಯನ ವ್ಯಥೆಯನ್ನು ಕುಗ್ಗಿಸಿದುವು. ಮುಂದಿನ ಸರಣಿಯನ್ನು ಯೋಚಿಸುತ್ತ ಸುತ್ತಲೂ ನೋಡತೊಡಗಿದನು.

ಒಂದೆಡೆಯಲ್ಲಿ ಥರ್ರನೆ ಮಿಂಚು ಚಿಮ್ಮಿಸಿದಂತೆ ಕಾಣಿಸಿತು! ಅಕಾಲದಲ್ಲಿ ಸೌದಾಮಿನಿಯು ಚಿಮ್ಮಿಸಲು ಕಾರಣವೇನು? ಮೇಘಾಡಂಬರವೇನೂ ಕೇಳಿಸದು. ಹಗಲಲ್ಲಿ ಕ್ಷಣಪ್ರಭೆಗೆ ಇಂತಹ ತೇಜಃಪುಂಜವು ಕಾಣದೊರೆಯುವುದೇ? ನೆಲದಲ್ಲಿ ಸೌದಾಮಿನಿಗೆ ಸಂಭವ ಕೂಡುವುದೇ, ಎಂದೆನ್ನುತ್ತಾ ಅದೇ ಕಡೆಯನ್ನು ಎವೆಯಿಕ್ಕದೆ ನೋಡಲಾರಂಭಿಸಿದನು.

ಮರೆಯಾಗಿದ್ದ ಊರ್ವಶಿಯು ಕಣ್ಣಾರಳಿದ ರಾಜನ ಮುಖರಸಪಾನದಿಂದ ಮತ್ತಳಾಗಿ ಸಭೆಯ ಸುದ್ದಿಯನ್ನೇ ಮರೆತುಬಿಟ್ಟಳು ಈತನ ಕಾಂತಿರಾಶಿಯಲ್ಲಿಯೇ ಮುಳುಗಿ ಏಳುತ್ತಲಿದ್ದು ಸಮೀಪಸಾರಲು ಅಡಿತ್ತೆಗೆದಳು. ಎರಡಡಿ ಮುಂದಾಗಲು ರಾಜನು ಭ್ರಮೆಗೊಂಡವನಾಗಿ – ಅಹೊ! ಏನಿದು! ಕಾಂತಿರಾಶಿಯು ಕಣ್ಣಿಗೆ ತಂಪಾಗಿರುವುದು. ಬೆಳದಿಂಗಳೋ? ಅಲ್ಲ; ಇದು ಹಗಲಲ್ಲವೇ! ಹೊಳೆವ ಮಿಂಚಾಗಿರುವುದೇ? ಇರದು, ಬೇಸಿಗೆಯಲ್ಲವೇ! ಬಂಗಾರದ ಬೊಂಬೆಯೋ? ಹೇಗದು, ಹಂದಾಡುವುದಲ್ಲವೇ! ಹೊಂಬಳ್ಳಿಯೋ? ಆಗದು, ಸರಿಯುತ್ತಿರುವುದಲ್ಲವೇ! ಬರೆದ ಚಿತ್ತಾರವೇ? ಕೂಡದು, ಮಾತೆತ್ತುವಂತಿರದು. ಒಲ್ಲದ ಎನ್ನನು ಮೋಸಗೊಳಿಸಲು ಮೋಹಿಸಿಯು ತಾಳಿದ ರೂಪಾಂತರವೇ? ಹೇಗೆ ಗೊತ್ತು? – ಇವಳಾರೆಂದು ನಿರ್ಧರಿಸಲು ಉಪಾಯವನ್ನು ತಾನಾಗಿಯೇ ಹುಡುಕುತ್ತಾ ಕಂಗೆಟ್ಟವನಂತೆ ನಿರ್ನಿಮೇಷನಾಗಿ ಪರಿಕಿಸಿದನು.

ಇದೇನು? ಭೃಗುಮುನಿಯಿಂದಾಗಿ ಭೂಮಿಗಿಳಿದ ಮಾಲಕುಮಿಯೋ? ಪತಿಯಲ್ಲಿ ಕೋಪಗೊಂಡು ಪೃಥ್ವಿಯಲ್ಲಿ ಅವತಾರವೆತ್ತಿದ ಪಾರ್ವತಿ ದೇವಿಯೋ! ಇದಕ್ಕೂ ಕಾರಣವಿಲ್ಲ; ಪದ್ಮಾಸನವೂ ಶ್ಯಾಮಲವರ್ಣವೂ ಕಾಣಿಸವು. ಇಂತಹ ಹೋಲ್ಕೆ ಇಲ್ಲದ ನಗೆಮೊಗದ ಮಾನಿನಿಯು ಕಾಣಲೊದಗುವುದು ಸ್ವಲ್ಪ ಸುಕೃತದ ಫಲವಿರುವುದೇ? ಎಂದನ್ನುವಷ್ಟರಲ್ಲಿ ಸಮೀಪಿಸಿದ ಊರ್ವಶಿಯು ತಲೆಬಾಗಿ 'ಪ್ರಾಣವಲ್ಲಭನೇ! ನಮಿಪೆ'ನೆಂದೆರಗಿದಳು.

ರಾಜನು ಕಾಣತಕ್ಕುದನ್ನು ಇಂದಿಗೆ ಕಂಡಂತಾಯಿತು! ಇದಕ್ಕೆ ಮಿಗಿಲಾದ ನಯನಸುಖವಿರುವುದೇ! ಸಾವಿರಮೋರೆಯ ಶೇಷನು, ಇವಳನ್ನು ಹೊಗಳಲೂ, ಈ ರೂಪರಾಶಿಯನ್ನು ಸಾಕಲ್ಯವಾಗಿ ನೋಡಲೂ

ಸಮರ್ಥನಾಗಲಾರನು, ಬ್ರಹ್ಮನೇ ನನಗೆರಡು ಕಣ್ಣುಗಳನ್ನುಂಟುಮಾಡಿದ ನೀನು ಇಂತಹ ಸೌಂದರ್ಯ ಸಮುದ್ರವನ್ನು ತೋರಿಸಿ ಏನು ಕೃತಾರ್ಥನಾದೆಯೋ? ಅರಿಯೆ ಎಂದೊದರಿ ಸರ್ವಾಂಗಗಳ ಲಾವಣ್ಯವನ್ನು ನೋಡಲ್ಬಯಸಿ ನೋಡತೊಡಗಿದನು; ಕೊನೆಮುಟ್ಟದು!

ಮದಭರಿತವಾದ ಆನೆಯ ಮೆಲ್ಲಮೆಲ್ಲವಾದ ನಡೆ! ರಂಭೆಯ ಲಾವಣ್ಯವನ್ನು ಮೆಟ್ಟುವ ಅಡಿ, ಮಂದಾರ ತುಂಬಿದ ಮುಡಿ! ಕೋಗಿಲೆಯ ಕೊರಳಿಗೂ ಮಿಗಿಲಾದ ವಾಗ್ವಿಲಸ! ಮುಖರದಲ್ಲಿ ಮಿಣುಗುವ ಮುತ್ತಿನ ಸಾಲು, ಹಿಡಿಗೆ ಅಮರುವ ಸೂಕ್ಷ್ಮವಾದ ಕಟಿ, ಸ್ವರ್ಣಕುಂಭದಂತಿರುವ ಕುಚಮಂಡಲ, ಅಷ್ಟಮಿಚಂದ್ರನಂತಿರುವ ಲಲಾಟ, ಅಪೂರ್ವವಾದ ಗಂಭೀರ ವಾಗ್ಝರಿ! ಗಾಳಿಗೆ ಹೆರಳುತಪ್ಪಿ ಗುಂಗುರುಗುಂಗುರಾದ ಮುಂಗುರುಳು; ಅದು ತುದಿಮೊದಲು ಕಾಣದೆ ವಿಶಾಲವಾದ ಹಣೆಯ ಮೇಲೆ ಕರಿದಾಗಿ ಜೇವರೇಖೆಯಂತೆ ಒಪ್ಪುವ ಸೋಜಿಗ! ಮನ್ಮಥನ ಬಿಲ್ಲಿನಂತಿರುವ ಹುಬ್ಬು! ತರುಣರ ಎದೆಯನ್ನು ತಿವಿಯುವ ಕಡೆಗಣ್ಣೋಟ, ಹೊಂಗನ್ನಡಿಯಂತೆ ಝಗಝಗಿಸುತ್ತಿರುವ ಕಪೋಲಗಳಲ್ಲಿ ಚಿಕ್ಕ ಚಿಕ್ಕ ಜಾತೀಮಣಿಗಳಂತೆ ಎಸೆವ ಬೆವರ್ತುಂತುರುಗಳ ಹೊದಪು! ಅಗರುರಸ ಲೇಪನದಿಂದ ಕೆಂಪೇರಿದ ಪಾದಪದ್ಮ! ಕಾಲ್ಗಡವುಗಳಲ್ಲಿ ಹೊಳೆವ ಅರಗುರಾಗ, ಒಡ್ಯಾಣದ ಶಿಂಜಿತ, ದುಂಡುದುಂಡಾದ ಕೈಕಾಲು, ಕೊರಳಲ್ಲಿ ಧರಿಸಿದ ಮುತ್ತಿನ ಕಂಠಿ! ರತ್ನಪವಣಿಸಿದ ಮುಂದಲೆಗಟ್ಟು, ಬೆರಳಲ್ಲಿರುವ ಮುದ್ರೆಯುಂಗುರ, ಚೆಂದುಟಿಯ ಎಡೆಯಲ್ಲಿ ದಾಡಿಮಬೀಜದಂತೆಸೆವ ದಂತಾಂಕುರುಗುಳೊಳ್ಮಿಣುಗುವ ಮುಗುಳ್ನಗೆ, ಬಳಕುವ ಬಡನಡು! ತಾಮರಸದಂತೆ ಸರಸವಾದ ಮುಖಮಂಡಲ; ಇದನ್ನು ಕಮಲಗಳ ಸಂಗಡಿಗನಾಗಿ ಹುಟ್ಟಿಸಲು ಮರೆತ ಬ್ರಹ್ಮನು ಬರೆದಿರುವ ಹಂಸಪಾದದ ಗುರುತುಗಳು ಈಗಲೂ ತಾವರೆಹೂಗಳು ಇರುವ ಕೊಳಗಳ ಬದಿಯಲ್ಲಿ ಕಂಡುಬರುವುವು; ಈ ಮುಖಮಂಡಲಕ್ಕೆ ತನ್ನಂತೆಯೋ ಚಂದ್ರಬಿಂಬವನ್ನು ಹೋಲಿಸುವರೆಂಬ ಅತಿ ಸ್ಪರ್ಧೆಯಿಂದ ತಾವರೆಗಳು ಆ ಚಂದ್ರನನ್ನು ಮುಖವೆತ್ತಿ ನೋಡವು. ಮತ್ತು ಇರುಳೊಡೆಯನ ಅಳ್ವಿಕೆಗೆ ಒಳಪಟ್ಟ ರಾತ್ರಿಕಾಲವು ಸಮೀಪಿಸಲು ಮುಚ್ಚಿ ಮುದುರಿಕೊಳ್ಳುವುವು.

ರಾಜನು ಇವುಗಳನ್ನು ನೋಡಿ ನೋಡಿ ತುದಿಗಾಣದೆ, ಭ್ರಾಂತ ನಂತೆ ಬಾಯಿಯಿಂದ ಹೊಗಳತೊಡಗಿದನು; ಉದ್ಭ್ರಮೆಯಿಂದ ಎದ್ದು ನಿಂದನು. ಎವೆಮುಚ್ಚದಂತೆ ಜಾಗ್ರತೆಯಾಗಿದ್ದನು. ಮನಸ್ಸಿನ ಆಧ್ಯಾತ್ಮಿಕ ವಿಚಾರ, ನೀತಿಮಾರ್ಗ, ಮಾನಭೀತಿ, ಇವು ಒಂದೊಂದಾಗಿ ಅಡಗುತ್ತ ಸಂಪೂರ್ಣ ಕಿತ್ತುಹಾಕಲ್ಪಟ್ಟವು.

ಆಹಾ! ಈ ಲಲನಾಲಲಾಮೆಯ ಶೋಣಾಧರದ ಅಮೃತವನ್ನು ಸವಿವ ಮಹಾತ್ಮನ ಮನಸ್ಸಿಗೆ ಸ್ವರ್ಗಸುಖವು ಮೆಚ್ಚುವುದೇ? ಶಡಕಿನ ಮಾತಿಗೆ ವಲ್ಲಭನು ಇವಳಲ್ಲಿ ದುಡುಕು ತೋರುವನೇ? ಮನ್ಮಥನು ಈಕೆಯ ಗಂಡನಾಗಿರುವನೇ? ಚಲ್ವೆಯಾದ ರಮಣಿಗೆ ಆ ನಲ್ಲನ ಅಂದ ಚಂದವು ಸಾಕಾಗುವುದೇ? ಇವಳ ಮುಖವನ್ನು ನೋಡಿದ ಚಂದ್ರನಲ್ಲಿ ನಾಚಿಕೆಯೇ ಕಳಂಕವಾಗಿರುವುದಲ್ಲವೇ? ಈ ಮಹಿಳಾಮಣಿಯನು ಹೆತ್ತಾಕೆ ಆರಾಗಿರುವಳೋ? ಸ್ವಪ್ನದಲ್ಲಿ ಇಂತಹ ಅಬಲೆಯರ ಓರೆ ನೋಟಕ್ಕೆ ಈಡಾದರೆ ಸಾಲದೇ? ನೋಡಿಹೇಳಲು ಮಿತಿಮೀರಿದ ಸೌಂದರ್ಯದಿಂದೊಪ್ಪುವ ಈ ಶೃಂಗಾರವಲ್ಲರಿಯ ಸರಿಸಾಟಿಯು ಮೂಲೋಕದಲ್ಲಿರದೆಂದು ಘಂಟಾಘೋಷವಾಗಿ ಹೇಳುವೆನು! ಹೇಳುವುದೇನು? ಸಕ್ಕರೆಯ ಶಕಲದ ಯಾವ ಭಾಗವು ಸಪ್ಪೆಯಾದೀತು? ಕಹಿಯಾದ ಅಂಶವು, ಕಾಣದೊರಕೀತೇ ಎಂದು ಯೋಚಿಸುವಷ್ಟರೊಳು:—

**ಉರ್ವಶಿ:**— ಕಾಂತನೆ! ಅಬಲೆಯ ಅಪರಾಧವನ್ನು ಮನ್ನಿಸಿ ಕಾಪಾಡು.

**ರಾಜ:**— (ಮಾತು ಮುಂದುವರಿಸಲೋಸುಗ) ರಮಣೀಮಣಿ! ಅಪರಾಧಕ್ಕೆ ದಂಡನೆಯು ರಾಜಧರ್ಮವೆಂದರಿಯೆಯಾ?

**ಉರ್ವಶಿ:**— ಅರಿತಿರುವೆನು. ಅಬಲೆಯರ ಅಪರಾಧವು ಕ್ಷಮಿಸತಕ್ಕುದಲ್ಲವೇ?

**ರಾಜ:** — ತಪ್ಪಿಗೆ ತಕ್ಕದಾದ ಶಿಕ್ಷೆಯನ್ನು ವಿಧಿಸದವನು ರಾಜನೆಂದಾಗುವನೇ!

**ಊರ್ವಶಿ:**— ಹಾಗಾದರೆ ಪ್ರಥಮಾಪರಾಧವೆಂದು ಕ್ಷಮಿಸು, ಅಲ್ಲದೆ ಪರಪ್ರೇರಣೆಯಿಂದ ನಡೆಯಿಸಿದ ತಪ್ಪಿತಕ್ಕೆ ಪರನಲ್ಲವೇ ಮುಖ್ಯಾಪರಾಧಿಯು!

**ರಾಜ:**— ಅಹುದು. ಅದವರೀರ್ವರ ಬುದ್ಧಿಚಾತುರ್ಯವನ್ನರಿತ ಮೇಲೆ—

**ಊರ್ವಶಿ:**— ಹಾಗಾದರೆ ಅಂತಹಾ ಪ್ರೇರಕನು ನಿನ್ನಂತೆ ಧನುರ್ಧಾರಿ ದಿಗ್ವಿಜಯಿಯೇ! ಆದರೆ–

**ರಾಜ:**— ಶಿಕ್ಷೆಯು ಆತನನ್ನೇ ಸೇರದಿರದು. ಅಬಲೆಯಾದ ನೀನು ದಂಡಕ್ಕೊಳಗಾಗಲಾರೆ. ಅದಾರು? ನಿನಗೆ ಬೆಂಬಲನಾದ ಪ್ರೇರಕನು ಹೇಳು?

**ಊರ್ವಶಿ:** — ಇದ್ದದ್ದಿದ್ದಂತೆ ಜಗತನ್ನೇ ಅಸ್ತವ್ಯಸ್ತವನ್ನಾಗಿ ಮಾಡುವ ಆ ಶೂರನನ್ನು ನಿಗ್ರಹಿಸದೆ ಇರಲಾರೆನೆಂದು ಭಾಷೆಕೊಡುವಿಯಾದರೆ ಹೇಳುವೆನು.

ರಾಜನು ಈ ವಾಗ್ವೈಖರಿಯಿಂದ ಈಕೆಯು ಅಭಿಸಾರಿಕೆಯಾದ ವೇಶ್ಯೆಯೆಂದೂ ಬೆಂಬಲನಾದವನು ಮನ್ಮಥನೆಂದೂ ಪರಿಭಾವಿಸಿ, 'ಕಂಬುಕಂಠಿ' ಎಂದೆನ್ನುತ್ತಾ, ಆಕೆಯ ಕೊರಳನ್ನು ಎಡಗೈಯಿಂದ ಬಿಗಿದಪ್ಪಿ ಬಲಗೈಯನ್ನು ಎದೆಯ ಮೇಲೆ ಚಾಚಿ 'ಆತ್ಮಸಾಕ್ಷಿಯಾಗಿಯೂ ನಿನ್ನ ಮಾತಿಗೆದುರಾಡಲು ಮಾತುದುರುವುದೇ? ಅಪರಾಧವನ್ನು ಶತಶಃ ತೆಗೆದೊಗೆದಿರುವೆನು. ಹುಸಿ ಮಾತನ್ನು ಆಡಿಸಿದ ಎನ್ನನ್ನು ಮನ್ನಿಸು. ನೀನು ಯಾರು? ನಿನ್ನ ತಂದೆ ಯಾರು? ನಿನ್ನ ಹಡದಾಕೆ ಯಾರು? ನೀನಿರುವ ದಿಕ್ಕಾವುದು? ಇದನ್ನು ತಿಳಿಯದೆ ಮನಸ್ಸು ತಬ್ಬುವುದಿಲ್ಲ'ವೆಂದನು.

**ಊರ್ವಶಿ:**— ವಲ್ಲಭನೇ! ನಾನು ಸ್ವರ್ಗದ ಅಪ್ಸರೆ. ನನ್ನ ಜನಕನು ಆ ನರನಾರಾಯಣ ದೇವನು. ನಾನು ಹುಟ್ಟಿದುದು ಆತನ ಊರುಗಳಿಂದ; ಕಾರಣ ನನ್ನ ಹೆಸರು ಊರ್ವಶಿಯೆಂದು. ನಾನಿರುವ ಊರು ಇದೇ.

**ರಾಜ:**— ಪ್ರಿಯತಮೆ! ಇದು ಮನುಷ್ಯಲೋಕದಂತೆ ಕಾಣಿಸದು. ನಾನು ಮರ್ತ್ಯಲೋಕದ ಕ್ಷತ್ರಿಯ ಅರಸನು. ಮೋಹಿನಿಯ ಉದ್ಯಾನ ದಲ್ಲಿ ಸುಖಸುಪ್ತನಾಗಿದ್ದ ನನ್ನನ್ನು ಇಲ್ಲಿಗೆ ತಂದವರಾರು! ನಾನು ಬಂದ ಪರಿ ಹೇಗೆ?

ರಾಜನ ಈವಾಕ್ಯವನ್ನು ಕೇಳಿ ಉರ್ವಶಿಯು ನಡೆದ ಉದಂತವನ್ನು ಆಮೂಲಾಗ್ರವಾಗಿ ವಿವರಿಸಿದಳು. ಹರ್ಷ ಉತ್ಕಟವ ಮನಸ್ಸನ್ನು ತೋರ್ಪಡಿಸುವ ಮುಖವಿಕಾಸದಿಂದ ತನ್ನಕೈಯ್ಯಲ್ಲಿದ್ದ ರಾಜನ ಮುದ್ರೆ ಯುಂಗುರವನ್ನೊಪ್ಪಿಸಿ,– ರಾಜನೇ! ಈ ಅಪರಾಧವನ್ನೇ ಕ್ಷಮೆಬೇಡಿ ದೆನು – ಎಂದು ಹೇಳಿ- 'ನಾನು ಸುಧರ್ಮೆಯನ್ನು ಹೋಗಿಸೇರುವ ಸಮ ಯವು ತಪ್ಪಬಾರದು. ದೇವಸಭೆಗೆಹೋಗಿ ಆಗಲೇ ತಿರುಗಿಬರುವೆನು. ಆವರಿವಿಗೂ ನೀನು ಅದೂರದಲ್ಲಿ ಕಂಗೊಳಿಪ ಬೀಳುಮನೆಯಲ್ಲಿರಬೇಕು. ದೇವತೆಗಳು ಸಂಚರಿಸುವ ಸ್ಥಳದಲ್ಲಿ ಧೀರಭಾವದಿಂದ ಇರಕೂಡದು ಜಾಗರೂಕತೆಯಿಂದಿರು' ಎಂದನ್ನುತ್ತಾ ನಂಬಿಗೆಯನ್ನಿತ್ತು ಪ್ರಸ್ಥಾನೋ ದ್ಯೋಗವನ್ನು ಕೈಕೊಂಡಳು.

ಬೈತಲೆತಿದ್ದಿ ಸೂಸಲಲ್ಲಿ ಕುಂಕುಮದ ತಿಲಕಪಿಟ್ಟಳು. ಸೀರೆಯ ನಿರಿಯನ್ನು ಸರಿಪಡಿಸಿಕೊಂಡಳು. ಮುಡಿಯುಡಗುವಂತೆ ಜರತಾರಿಯ, ಮೇಲು ಹೊದಿಕೆಯನ್ನು ಹೊದ್ದುಕೊಂಡಳು.

ರಾಜನು ವಿರಹವ್ಯಥೆಯನ್ನು ತಾಳಲೊಲ್ಲದೆ ತಾನೂ ಜೊತೆಯಿಂದ ಬರುವೆನೆಂದು ಚಲವಿಡಿದು ಹೇಳಿಕೊಂಡನು. ಊರ್ವಶಿಯು ಬಹುಬಗೆ ಯಾದ ಕೆಡುಕುಗಳನ್ನು ಹೇಳಿ ತೋರಿಸಿದಳು; ನಾನು ಬರುವೆನೆಂಬೊಂದು ಮಾತಲ್ಲದೆ, ಬೇರೆ ಮಾತಿಲ್ಲವು. ಊರ್ವಸಿಯು — ನೀನು ಸಬೆಗೆ ಬರ ಲಾಗದು ಸ್ವರ್ಗನಗರದ ಗೋಪುರಮಹಾದ್ವಾರಗಳನ್ನು ಮಾತ್ರ ನೋಡಲ್ಪಯಕೆಯಾದರೆ ಸಮಗ್ರವಾಗಿ ತೋರಿಸುವೆನು. ಬಾ ಎಂದು ಕರೆದು ಕೊಂಡು ಒಳಬಾರಿ ಹಿಡಿದು, ಪುರದ್ವಾರದೆದುರು ಸ್ವಲ್ಪ ದೂರದಲ್ಲಿರುವ ಮಾವಿನ ತೋಪಿನಲ್ಲಿ ನಿಲ್ಲಿಸಿ, ತಾನು ಸಭೆಗೆ ಹೋದಳು.

# ೧೧. ಸ್ವಾಮಿಭಕ್ತಿ.

ಹುಡುಕುತ್ತಾ ಮಂತ್ರಿಸೇನಾನಿಗಳು ಕಾಲ್ಗೊರಸಿನ ಗುರುತನ್ನು ಅರಿತು ಅಚ್ಛೋದದ ಮಾರ್ಗವಾಗಿಯೇ ನಡೆದರು. ಮೋಹಿನಿಯ ವನವನ್ನು ಸೇರಿ ಪಾದರಕ್ಷೆಯನ್ನು ಮಾತ್ರ ನೋಡಿದರು. ಅತ್ತಿತ್ತ ಬಿದ್ದಿತ್ತು. ಶುಭಾಶುಭ ತರ್ಕವಿತರ್ಕದಿಂದ ದುಃಖಮಗ್ನರಾದರು. ಅದೇ ಸ್ವಲ್ಪ ದೂರದಲ್ಲಿರುವ ಆಶ್ರಮದಲ್ಲಿ ಹೇಷೆಯು ಕೇಳಿಸಿತು. 'ಕಾಡಿನಲ್ಲಿ ಜೀರಿ ಕುದುರೆಗಳ ಇರವು ಅಸಂಭವ; ಇದ್ದರೆ ನಮ್ಮೊಡೆಯನೇ ಬರಬೇಕು' ಎಂದೀರ್ವರೂ ಆಶ್ರಮದ ಬದಿಗೆಸಾರಲು, ಸಂತೋಷದಿಂದ ವಾಜಿಯು ಪರಿಚಿತರಾದ ಮಂತ್ರಿ ಸೇನಾನಿಗಳಿಗೆ ಮೈಚಾಚಿ ನಿಂದಿತು.

ಪರ್ಣಶಾಲೆಯಲ್ಲಿ ಸಾಯಂತನದ ಅಗ್ನಿಹೋತ್ರವು ನಡೆಯುತಲಿತ್ತು. ಆ ವೇದಧ್ವನಿಯನ್ನು ಕೇಳಿ ಎಲೆಮನೆಯನ್ನು ಹೊಕ್ಕರು. ಬಹುಮಾನ ಪುರಸ್ಸರವಾಗಿ ಮಹರ್ಷಿಗಭಿವಾದನೆಯನ್ನು ಮಾಡಿ, 'ಹಯವು ತಮಗೆಲ್ಲಿ ದೊರಕಿತು?' ಎಂದು ಕೇಳಿಕೊಂಡರು. ವೃದ್ಧನಾದ ಋಷಿಯು ಆ ಅಶ್ವದ ಮೂಲಕ ಮೋಹಿನಿಯ ಆಗಮನ, ರಾಜಸಂದರ್ಶನ, ಶಾಪ ವಿಮೋಚನ, ಮೋಹಿನಿಗೂ ರಾಜನಿಗೂ ಸಂಭವಿಸಿದಘಟನಾವಳಿ, ಇವನ್ನು ಸಮಗ್ರವಾಗಿ ವಿವರಿಸಿ ಹೇಳಿದನು. ರಾಜನು ಮುಂದೆಲ್ಲಿಹೋದನೆಂದು ಹೇಳಲು ಋಷಿಯು ಹಿಂದಾದನು. 'ಪ್ರಧಾನಿ ಸೇನಾನಿಗಳು ದೇವಸ್ತ್ರೀಯ ಸಮಾಗಮದಮೇಲೆ ಮುಂದೆಂದಿಗೂ ಅಪಾಯಕೂಡದು' ಎಂದು ಧೈರ್ಯ ತಾಳಿದರು. ಅಚ್ಛೋದ ಸರೋವರಕ್ಕೆ ಹೋಗಿ ಸಾಯಾಹ್ನಿಕವನ್ನು ಮುಗಿಸಿಕೊಂಡು, ಋಷಿಪತ್ನಿಗಳಿಂದ ಕೊಡಲ್ಪಟ್ಟ ಪುರೋಡಾಶದ ಶೇಷ ವನ್ನು ಶ್ರದ್ಧೆಯಿಂದ ಭುಂಜಿಸಿ, ವ್ಯಾಘ್ರಾಜಿನದ ಮೇಲೊರಗಿ ನಿದ್ರಿಸಿದರು. ಸುಖದಿಂದ ನಿದ್ರೆಹತ್ತಿತು. ರಾತ್ರಿಯ ಮೂರುಪಾಲು ಕಳೆಯಿತು.

ನಾಲ್ಕನೆಯ ಯಾಮದ ಆರಂಭದಲ್ಲಿ ಋಷಿಗಳೆದ್ದು ಪಾಲ್ಗಡಲ ಶಯನನ ನಾಮಗಳನ್ನೋದುತ್ತ ಕೊಂಡಾಡತೊಡಗಿದರು. ಅವರ ಪತ್ನಿಯರು ಇಂಪಾದ ರಾಗಗಳಿಂದ ಕೃಷ್ಣಲೀಲೆಗಳನ್ನು ಹಾಡುತ್ತಿದರು.

ರಾಜಪುರುಷರೆಚ್ಚೆತ್ತು ಕುಳಿತರು. ಋಷಿಶಿಷ್ಯರು ಕಮಂಡಲುಗಳನ್ನು ಹಿಡಿದು ಸ್ನಾನಕ್ಕಾಗಿ ಗುಂಪು ಕಟ್ಟಿ ನಡೆದರು. ಹೋಮಧೇನುಗಳೂ, ಎರಳೆಗಳೂ, ತಾಪಸನ ಎಡೆಯಲ್ಲಿ ಮಲಗಿದ್ದುವು.

ಕೇವಲವಾಗಿ ತಪಸ್ಸಿನ ಪ್ರಭಾವದಿಂದುಂಟಾದ ವೈಭವವನ್ನು ನೋಡಿ ಮರುಳಾದ ಸಚಿವಸೇನಾನಿಗಳು ಕೆಲವು ದಿನಗಳನ್ನು ಆಶ್ರಮದಲ್ಲಿಯೇ ಕಳೆದರು. ರಾಯನೀಕಡೆ ಬಾರದಿರಲಾರನೆಂದು ನಿಶ್ಚಯಿಸಿದರು. ರಾಜ್ಯತಂತ್ರವನ್ನು ಕರ್ಮಸಚಿವರು ನಡಿಸದೆ ಇರರೆಂದು ನಂಬಿದ್ದರು.

ಯಾವಾಗಲೂ ರಾಜನ ಹಿತವನ್ನು ಹಂಬಲಿಸುತ್ತಿರುವ ಮಂತ್ರಿಯು, 'ಮೋಹಿನಿಯನ್ನು ಶಪಿಸಿದ ಋಷಿವಟುವಿನ ಆಗ್ರಹವು ರಾಜನಲ್ಲಿಯೂ ಬಿದ್ದಿರಬಹುದೇ?" ಎಂಬ ಸಂದೇಹದಿಂದ ಕ್ಷಮೆ ಕೇಳಿಕೊಳ್ಳುವುದಕ್ಕಾಗಿ ಆ ಕುಮಾರನನ್ನು ಮಾತನಾಡಿಸಿದನು. 'ಓ! ಬ್ರಹ್ಮಚಾರಿಯೇ! ತತ್ವವನ್ನು ಅರಿಯಲೋಸುಗ ಒಂದು ಪ್ರಶ್ನೆಯನ್ನು ಮಾಡುವೆನು. ಶಾಂತಚಿತ್ತನಾಗಿ ಉತ್ತರವನ್ನು ಕೊಡುವೆಯಾ?' ಎಂದನು. ಅದಕ್ಕೆ ವಟುವು, 'ಮಂತ್ರಿಯೇ ಇದೇನೆಂದು ಕೇಳುವೆ! ತತ್ವದ ಮಾರ್ಗವನ್ನುಪದೇಶಿಸುವುದು ನಮ್ಮ ಧರ್ಮವೆಂದು ತಿಳಿಯೆಯಾ?' ಎನಲು, ಮಂತ್ರಿಯು 'ಬ್ರಾಹ್ಮಣನೇ! ಷಡ್ವೈರಿಗಳಲ್ಲಿ ಕ್ರೋಧಕ್ಕೆ ಸರಿಯಾದುದು ಎರಡನೆಯದಿಲ್ಲವಲ್ಲಾ. ಅದನ್ನು ನೀನು ನಿಗ್ರಹಿಸಬಲ್ಲೆಯಾ?' ಎಂದು ಕೇಳಿದನು. ವಟುವು 'ಓಹೋ! ಇದಕ್ಕೇನು? ನಿಗ್ರಹಿಸಿರುವೆನು' ಎಂದು ಹೇಳಲು, ಅಮಾತ್ಯನು 'ಹಾಗಾದರೆ ನಮ್ಮ ರಾಜನಲ್ಲಿ ನೀನು ಸಿಟ್ಟುಗೊಳ್ಳಲು ಕಾರಣವೇನು? ರಾಜನು ಧರ್ಮಿಷ್ಠನಾದರೆ ಲೋಕವೇ ಸುಖ – ಸುಕೃತ್ಯಗಳಲ್ಲಿರುವುದಲ್ಲವೇ?' ಎಂದನು. ವಟುವು 'ಸಚಿವನೇ! ಹೀಗೆಯೇ ಭಾವಿಸಿ ನಮ್ಮ ಅಚಿರ ಪ್ರಸೂತೆಯಾದ ಕುರಂಗವನ್ನು ಕೊಂದ ಅಪರಾಧವನ್ನು ಮನ್ನಿಸಿರುವೆನು. ಇರಲಿ, ನಿಮ್ಮ ಮನಸ್ಸಿನ ತಾತ್ಪರ್ಯವು ತಿಳಿಯಿತು. ಕೇಳು, ಶೂರರಾದ ಅರಸರು ಸದ್ಬುದ್ಧಿಯಿಂದ ಗುರುದೇವರುಗಳಲ್ಲಿ ಭಕ್ತಿ ತುಂಬಿದವರಾಗಿ, ರಾಜ್ಯಭಾರವನ್ನು ವಹಿಸದೆ ಇದ್ದಲ್ಲಿ ನಮಗೆ ಕಾಡಿನಲ್ಲಿ ಕಾಲ ಕಳೆಯಲಾದೀತೇ? ಅದು ಕಾರಣ ಅವನಂತೆಯೇ ಮುಂದೆ ರಾಜ್ಯವನ್ನು ಆಳಲಿಕ್ಕೆ ತಕ್ಕವನಾದ ಚಕ್ರವರ್ತಿ ಲಕ್ಷಣಗಳಿಂದ ಮೆರೆವ ಮಗನನ್ನು ಸ್ವಲ್ಪದಿನಗಳಲ್ಲಿಯೇ

ಪಡೆವನು. ಈಗ ಮನಸ್ಸಿನಲ್ಲಿ ಯಾವಾಕೆಯನ್ನು ಚಿಂತಿಸುತ್ತಿರುವನೋ ಆಕೆಯಲ್ಲಿ ಪುತ್ರನು ಹುಟ್ಟಲಿ, ಮುಂದೆ ತಂದೆಮಕ್ಕಳಿರ್ವರಿಗೂ ಶ್ರೇಯಸ್ಸುಂಟಾಗಲಿ' ಎಂದು ಅನುಗ್ರಹಿಸಿದನು.

ವಿವೇಕಿಗಳು ಸಿಟ್ಟುಗೊಂಡರೂ ಅವರನ್ನು ಸಮಾಧಾನಪಡಿಸುವುದು ಸುಲಭ. ದೀರ್ಘದ್ವೇಷಿಗಳಾದ ನೀಚರಂತಲ್ಲ. ಮಣ್ಣಿನ ಮಡಿಕೆಯು ಫಕ್ಕನೆ ಒಡೆಯುವುದು. ಕಷ್ಟಪಟ್ಟರೂ ಕೂಡಿಸಲಾಗದು. ಹೊಂಗಳಸವು ಗಟ್ಟಿತಾಗಿದರೂ ಬಿರಿಯದು. ಬಿರಿದರೂ ಸುಲಭದಿಂದ ಜೊತೆಗೂಡಿಸಬಹುದಲ್ಲವೇ?

## ೧೨. ಸ್ವರ್ಗದ ಸೊಬಗು.

ತೋಪಿನ ಅಲ್ಲಲ್ಲಿ ಸಣ್ಣ ಸಣ್ಣ ಇಳಿಬಾವಿ. ಹಲವು ಜಾತಿಯ ತಾವರೆನೈದಿಲೆಗಳು ವಿಕಸನ ಮುಕುಗಳು ಕಣ್ಣಿಗುಲ್ಲಾಸ ತುಂಬುತ್ತಲಿದ್ದವು. ಹಣ್ಣು ಹಂಪಲುಗಳಿಂದ ತೃಪ್ತಿಗೊಂಡು ಹಾರಾಡುವ ಪಕ್ಷಿಗಳಗಲಭೆ. ರಾಜನು ಎತ್ತರವಾದ ಸ್ಥಳದಲ್ಲಿ ಕುಳಿತು ಪುರದ್ವಾರವನ್ನು ನೋಡತೊಡಗಿದನು.

ಅಲಂಕಾರಕ್ಕಾಗಿ ಸಾಲುಸಾಲಾಗಿ ನಟ್ಟಿರುವ ದೀಪಸ್ತಂಭಗಳು. ನಾಲ್ಕು ಬೀದಿಗಳು ಸೇರಿದೆಡೆಯಲ್ಲಿ ಕಟ್ಟಿದ ಶೃಂಗಾಟಕ. ಇದರ ನಾಲ್ಕು ಭಾಗಗಳಲ್ಲಿಯೂ ರಾಜಭಟರು ನಿಂದಿರುವರು. ಮೇಲ್ಭಾಗದಲ್ಲಿ ಸುತ್ತಲೂ ಇಟ್ಟಿರುವ ವಜ್ರಕನ್ನಡಿಯೊಳಗೆ ಹೊಳೆಯುವ ಮಹಾತ್ಮರ ಪಟಗಳು. ತೂಗಾಡಿಸಿದ ಕಾಚದೀಪಗಳಹೊಳಪು. ಅದರ ಮಾಳಿಗೆಯಲ್ಲಿ ದೇವ ದುಂಧುಭಿಯು ತ್ರಿಸಂಧ್ಯೆಯಲ್ಲಿಯೂ ಬಾರಿಸಲ್ಪಡುವುದು. ಜನರ ಕಾಲ ನಿರ್ಣಯಕ್ಕಾಗಿ ಪ್ರತೀ ಪ್ರಹರದಲ್ಲಿಯೂ ಕಾಲಚಕ್ರವು ಹೊಡೆಯುವ ಧ್ವನಿ. ಈ ಶೃಂಗಾಟಕದ ಒಳಹೊಕ್ಕು ಹೊರಡುವ ಯಾನಗಳ ಚಕ್ರದ ಶಬ್ದವು, ಅಡಗಿ ಇಮ್ಮಡಿಯಾಗಿ ಕೇಳಿಸುವುದು. ಋತುವನ್ನು ನಿಶ್ಚಯಿಸಲಿಕ್ಕೆ ರಾಜನಿಂದ ಶಕ್ಯವಾಗಲಿಲ್ಲ. ಇದರ ಎದುರಾಗಿ ನಾಲ್ಕುಮಹಾದ್ವಾರಗಳಿಂದೊಪ್ಪುವ ಆಕಾಶದ ಒತ್ತಿನೆಂತೆಸೆವ ಉನ್ನತವಾದ ಗೋಪುರ.

ಇದರ ಪ್ರತೀಯೊಂದು ಹೊಂಗದಗಳಲ್ಲಿಯೂ ಹಿಡಿಸಿದ ಬೊಂಬೆಗಳು ದ್ವಾರಪಾಲಕರಂತೆ ಕಂಡುಬರುವುವು. ದ್ವಾರಗಳ ಮೇಲುಭಾಗಗಳಲ್ಲಿ ನವರತ್ನಗಳಿಂದ ಚಿತ್ರಿಸಿದ ದಶಾವತಾರದ ಪುತ್ತಲಿಕೆಗಳು. ಮುಂಭಾಗದಲ್ಲಿ ಪಂಕ್ತಿಪಂಕ್ತಿಯಾಗಿ ಇಟ್ಟಿರುವ ತುಂಬಿದ ಸುವರ್ಣ ಕುಂಭಗಳ ಅಂದ. ಗೋಡೆಯುಸಾಲಲ್ಲಿಯೂ, ರತ್ನಸ್ತಂಭದ ಬುಡದಲ್ಲಿಯೂ, ನಿಲ್ಲಿಸಿರುವ ಚಿನ್ನದ ಬೊಂಬೆಗಳು. ಅವುಗಳ ಕೈಯಲ್ಲಿ ಗಂಧದ ಎಣ್ಣೆ ಎರದು ಹಚ್ಚಿರುವ ದೀಪಗಳ ಬೆಳಕು. ಸ್ವರ್ಗಸ್ತ್ರೀಯರ ಮುಖಮಂಡಲದ ಕಾಂತಿ ತಟ್ಟಿದ ಚಂದ್ರಕಾಂತಮಣಿಗಳು ನೀರು ಒಸರುವುವು. ಇದರಿಂದ "ಚಂದ್ರಮುಖಿ" ಎಂಬ ಸಂಬೋಧನೆಯು ಸ್ವರ್ಗದ ಹೆಂಗಸರಿಗೆ ಒಪ್ಪಿದುದು. ಈ ಮಣಿಗಳು ಗೆಳೆಯನಾದ ಚಂದ್ರನನ್ನು ನೋಡಿದ ಮಾತ್ರ ನೀರು ಸೂಸುವುದಲ್ಲದೆ ಬೇರೆ ವಿಧದಿಂದ ಸುರಿಸಲೊಲ್ಲವು, ಎಂಬುದೇ ನಿಯಮವಾಗಿದ್ದರೆ ಗೆಳೆಯನಿಂದ ಮಿಗಿಲಾಗಿ ಶೋಭಿಸುವ ಮುಖವನ್ನೀಕ್ಷಿಸಿ ಹೊಟ್ಟೆಗಿಚ್ಚು ತುಂಬಿ ಶೋಕದಿಂದ ನೀರು ಬಿಡುವುವೆಂದೇಕಾಗಕೂಡದು?

ಇಲ್ಲಿಯ ಕೈಗಾರಿಕೆ ಕೆಲಸಗಳನ್ನು 'ಕಪಟವಿದೆಂ'ದು ಮಾಡಿದ ಮಹಾತ್ಮನಿಗೂ ತಿಳುವಳಿಕೆ ಇರುವುದೋ ಎಂಬುದನ್ನು ಆತನನ್ನೇ ಕೇಳಿತಿಳಿಯಬೇಕಾದ ವಿಷಯ. ಮನುಷ್ಯರಾದ ನಾವೇನರಿವೆವು. ಅಲ್ಲಲ್ಲಿ ಶ್ರೇಣಿಯಾಗಿ ಪನ್ನೀರುತುಂಬಿಟ್ಟಿದ್ದ ಪನ್ನೀರದಾನಿಗಳು. ಚಿನ್ನದಬಾವಡೆಗಳಲ್ಲಿ ಹೊರಡುವ ದಶಾಂಗದಧೂಪ. ಅಲಂಕರಿಸಿದ ಹೂವಿನಸಾಲೆ. ಹಚ್ಚಿಸಿದ ಊದುಬತ್ತಿಯಸುವಾಸನೆ. ಚಿತ್ತಾರದ ಪುಷ್ಪಗಳಲ್ಲಿ ಪಕ್ಷಿಗಳು ಮುತ್ತಿತಿವಿದು ಮಕರಂದವನ್ನು ಸವಿಸಲಾಗದೆ ಕೈಕಾಲುಬಚ್ಚುತ್ತಾ ನಿರಾಶೆಯಿಂದ ಹಿಂದಿರುಗುತ್ತಿದ್ದುವು. ಚಿನ್ನದತಟ್ಟೆಯಲ್ಲಿ ಪಾರಿಜಾತ, ಮಂದಾರ, ಮಲ್ಲಿಗೆ ಇವೇ ಮೊದಲಾದ ಬಗೆಬಣ್ಣದ ಹೂಗಳು ತುಂಬಿದ್ದುವು. ಮಣಿಶಿಲೆಯು ಇಟ್ಟಿಗೆಯಾಗಿ ಕಟ್ಟಲ್ಪಟ್ಟಿತ್ತು. ಚಂದ್ರಕಾಂತಮಣಿಯಪಾವಟಿಗೆ, ವಜ್ರದಕಂಬ, ಪುಷ್ಯರಾಗದ ಗೋಡೆ, ಗೋಮೇದಿಕದಜಂತೆ, ನೀಲದ ಹಲಿಗೆ, ಹವಳದ ತೊಲೆ, ವೈಡೂರ್ಯದ ಬೋದಿಗೆ, ತೂಕಾಡುವ ಮಾಣಿಕ್ಯದದೀಪ. ಜೋಲಿದಾಡುವ ಮುತ್ತಿನ

ಮಾಲೆ. ಸೂರ್ಯಕಾಂತದ ನೆಲೆಕಟ್ಟು. ಮರಕತದ ಮೇಲುಸಾಮಾಗ್ರಿ, ಚಿನ್ನದ ಚಾವಣಿ. ಜಲತಾರೆಯ ಮೇಲುಕಟ್ಟು. ಕಿಟಕಿಗಳಲ್ಲಿ ದೃಷ್ಟಿ ಸಂಚಾರಕ್ಕೆ ತಡೆಯಾಗದಂತೆ ಕಟ್ಟಿದ ತೆಳುವಾದ ಪಟ್ಟೆಯ ಪರದೆ. ನಾಲ್ಬಾಗಿಲುಗಳಿಂದ 'ಮಹೇಂದ್ರ ಸ್ವಾಮಿ ಜಯ ಪರಾಕ್' ಎಂಬ ಬಂದಿಗಳ ಸ್ತುತಿಪಾಠಗಳು, ಬೊಮ್ಮನ ಮುಖದಿಂದ ಚತುರ್ವೇದಗಳಂತೆ ಹೊರಹೊರಡುವುವು. ಕೆಲಪರಿದನ್ನು ಬಾಗಿಲೊಳಿರುವ ಚಿತ್ರಬಿಂಬಗಳೇ ಉಸುರುವುವೋ ಎಂದು ಪ್ರತರ್ಕಿಸುವರು. ಇದರ ವಿವೇಚನೆಯು ಸಾಮಾನ್ಯರಿಂದ ದುರ್ಗಮ. ಒಂದರ ಮುಂದೊಂದಾಗಿ ನಿಲ್ಲಿಸಿರುವ ಮಕರತೋರಣ, ಕೀರ್ತಿಮುಖ, ಶ್ವೇತಛತ್ರ, ಇವುಗಳ ಚೆಲ್ವಿಕೆ. ನಟ್ಟಿರುವ ಧ್ವಜಪಟಗಳ ಪಂಕ್ತಿ.

ಗೋಪುರದ ಒಂದನೇ ಅಂತಸ್ತಿನಲ್ಲಿ ಮನುಷ್ಯರಿಗೆ ಮೂಲಪುರುಷನಾದ ಸ್ವಾಯಂಭುವ ಮನುವನ್ನು ಮೊದಲ್ಗೊಂಡು ಉಭಯ ವಂಶದ ರಾಯರ ಚಿತ್ರಗಳು. ಎರಡನೆಯ ಅಂತಸ್ತಿನಲ್ಲಿ ದಶರಥರಾಯನ ಪುತ್ರ ಕಾಮೇಷ್ಟಿಯನ್ನಾರಂಭಿಸಿ, ನಡೆದ ಸಾರ್ವಭೌಮ ರಾಮಚಂದ್ರ ದೇವರ ಪಟ್ಟಾಭಿಷೇಕದ ವರೆಗಿನ ರಾಮಾಯಣದ ಬೊಂಬೆಗಳು. ಮೂರನೆಯದರಲ್ಲಿ ಪಾಂಡವರ ಕಥೆ. ನಾಲ್ಕನೇಯದರಲ್ಲಿ ದ್ವಾರಕಾನಾಥನಾದ ಶ್ರೀಕೃಷ್ಣದೇವರ ಚರಿತ್ರೆ. ಇವು ರಾಜನಾದ ನಮ್ಮ ಪುರೂರವಗೆ ತತ್ಕಾಲದಲ್ಲಿ ನಡೆಯುವ ಕಥೆಯೆಂದು ಭ್ರಮೆಯುಂಟಾಯಿತು. ಬಾಯಿಯಿಂದ ಹೇಳತೊಡಗಿದನು.

'ರಾಮರಾವಣರ ಯುದ್ಧದ ಕೊನೆ ಏನಾಗುವುದೋ? ಉಪವಾಸದಿಂದ ಕೃಶೆಯಾದ ಸೀತಾದೇವಿಯು ರಾಕ್ಷಸರ ಮಧ್ಯದಿಂದ ತಪ್ಪದೆ ಹೋದರೆ ಮುಂದೆ ಇನ್ನೂ ಎಂತಹ ಕಷ್ಟಕ್ಕೆ ಗುರಿಯಾಗುವಳೋ?' (ದೃಷ್ಟಿ ತಿರುಗಿಸಿ),

'ಚಂದ್ರಮತಿಯನ್ನು ಕಡಿಯಲೆತ್ತಿದ ಕೈಯನ್ನು ಹರಿಶ್ಚಂದ್ರ ಮಹಾರಾಜನು ಅಧರ್ಮಭೀತನಾಗಿ ಹಿಂದೆಗೆಯದಿರುವನೇ?'

'ಅಯ್ಯೋ! ಮೈಮರೆತು ಬಿದ್ದಿರುವ ರಾಜಮಹಿಷಿ ದಮಯಂತಿಯನ್ನು ಹೆಬ್ಬಾವು ನುಂಗತೊಡಗಿತೇ? ಹಾ! ಮಹಾರಾಣಿಯೇ?'

'ಕುಂತೀವಿದುರರ ಮುಖದಿಂದ ತನ್ನ ಹುಟ್ಟನ್ನರಿತ ಕರ್ಣನು ಹರ್ಷ ರೋಷ ಕರುಣಾಸಂಕಟದಲ್ಲಿ ಮುಳುಗೆದ್ದು ನಿಂದುದನ್ನು ನೋಡಕೂಡದು. ಕುಂತೀದೇವಿಯೇ! ಹೆತ್ತ ಬಾಲಕನನ್ನು ಬಿಸುಟು ಹೇಗೆ ಜೀವಿಸಿದೆಯೌ? ತಿರಿಗಿ ಮಗನು ಅತುಲಬಲಶಾಲಿಯಾಗಿ ನಿನ್ನ ಕಣ್ಣೆದುರಾದರೂ, ನಿನಗೆ ಹೇಗೆ ಮನಕುಂದದೆಯೂ, ಕರುಣೆ ತೋರದೆಯೂ ಇತ್ತು? ದೈವತಂತ್ರವು ಹೇಳಲಾಗದು'

'ಅರ್ಜುನನೇ ಪರಿಕಿಸು! ಕಿರಾತನೆಂದರಿತೆಯಾ? ಆ ಮಹಾತ್ಮನ ಕಂಠವನ್ನು ಸರಿ ನೋಡು. ಉದ್ದಂಡ ನಮಸ್ಕಾರವನ್ನು ಮಾಡಿ ಈಗಲೇ ಧನ್ಯನಾಗು.'

'ಹಾ! ದುರುಳ ಕೀಚಕ! ಪರನಾರಿಯರ ಹಿಂದೋಡಿ, ಮುಡಿ ಹಿಡಿದು, ಎಳೆದು, ಕುಕ್ಕಿಸುವೆಯಾ? ಕೆಟ್ಟು ಹೋಗುವೆ. ಬಿಟ್ಟುಬಿಡು. ಸುದೇಷ್ಣೆಯಂತೆ ಗೌರವಿಸು. ಈಕೆಯು ನಿಮ್ಮೆಲ್ಲರ ಪರಿಚಾರಿಣಿಯಲ್ಲವೇ? ಮುಂದತಿಕ್ರಮಿಸದಿರು'

'ದೇವತೆಗಳಿರಾ! ಹಿರಣ್ಯಕಶಿಪುವಿನ ಉಪದ್ರವವು ಇಂದಿಗೆ ಕೊನೆ ಮುಟ್ಟಿತು. ತಪಸ್ಸಿನಲ್ಲಿಯೇ ಮಣ್ಣುಪಾಲಾದನು. ಬೆದರದಿರಿ!'

'ದಿತಿಕುಮಾರರೇ! ಅಮೃತದ ಧಾರೆಯನ್ನೆರವಳೆಂದು ಕಣ್ಣುಮುಚ್ಚಿ ಬಾಯ್ದೆರದು ಮುಖವೆತ್ತಿ ಹುಚ್ಚು ಬಾಲಕರಂತೆ ಕುಳ್ಳಿರುವಿರಾ? ಅಹಹಾ! ಇದು ಎಂತಹ ಆಟ! ಮರುಳಾಗದಿರಿ. 'ಬಯಸಲು ತಕ್ಕುದಲ್ಲದರ ಬಯಕೆಯು ಇದ್ದುದನ್ನು ಕಳೆವುದು.' ಕಣ್ದೆರೆಯಿರಿ. ಸ್ತ್ರೀರೂಪವೆಲ್ಲಿ? ಕೈಯಲ್ಲಿ ಸಹಸ್ರಾರಗಳಿಂದ ಸೂರ್ಯಸಂತೆಸೆವ ಚಕ್ರವನ್ನು ಧರಿ- ರಾಹುಮುಖವನ್ನು ನೋಡುವ ಭಗವಂತನ ರೂಪವನ್ನು ನೋಡಿರಿ. ಅಮೃತಾಶನದ ಆಶೆಯು ನಿಶ್ಶೇಷವಾಗಲಿ! ಜೀವ ಬಚಾಯಿಸಲು ಪಲಾಯನ ಮಾಡಿರಿ!'

'ಛೀ! ಛಿ! ದುಷ್ಟರಾದ ಕೌರವರು ಅಬಲೆ ಪತಿವ್ರತಾಶಿರೋಮಣಿಯಾದ ದ್ರೌಪದಿಯ ಶೀರೆಯ ನೆರಿಯನ್ನಿಳಿಸುವುದನ್ನು ಕಾಣುವ ಈ ದ್ರೋಣ ಭೀಷ್ಮಾದಿಗಳು ನೀತಿಯರಿತವರೇ? ವೃದ್ಧರೇ? ತಲೆಯಲ್ಲಿ ಕೈ ಚಾಚಿ ಲಂಡಿಗಳಂತೆ ಕುಳಿತಿರುವ ಪಾಂಡವರು ಗಂಡಸರೇ? ರಣಧೀರರೇ?'

ಭೀಮಸೇನನೇ? ಶಹಬಾಸ್, ನೀನು ದ್ರೌಪದಿಗೆ ತಕ್ಕ ವರನು! ಕಣ್ಣಿಂದ ಕಿಡಿಗಳನ್ನುಗುಳುತ್ತಾ ಅಣ್ಣನ ಮೋರೆಯನ್ನೇನೆಂದು ನೋಡುವೆ? ಗದೆ ಎತ್ತು. ಕಷ್ಟದಿಂದ ಕಡೆಹಾಯಿಸು. ಶಕುನಿಯು ಲತ್ತದಲ್ಲಿ ಮೋಸ ಮಾಡಿದುದನ್ನು ನಾನು ಈಗ ತಾನೇ ಕಂಡಿರುವೆನು.'

'ಆಹಾ! ಯುದ್ಧಾಂಗಣದಲ್ಲಿ ಮಡಿದುಬಿದ್ದ ಹಿರಿಯರೇ! ರಣಾಂಗಣದಲ್ಲಿ ನಿಮ್ಮನ್ನು ಕೆಡಹಾಕಿದ ಆ ಶತ್ರುಗಳನ್ನು ಸದೆವಡೆಯದೆ ನಾನೆಂತು ನಿಮ್ಮಗಳ ಋಣದಿಂದ ಪಾರಾಗುವೆನು? ನಾನು ಕುಲದಲ್ಲಿ ಜನಿಸಿದುದರಿಂದ ನಿಮಗೇನು ದೊರೆತಂತಾಯಿತು? ಅಮಮಾ!' ಎಂದು ಗೋಡೆಯಲ್ಲಿ ಕಾಣುವ ಬೊಂಬೆಗಳನ್ನು ನೋಡುತ್ತಾ ಶೋಕಿಸಿದನು.

ಮುಂದೆ ನೋಡುವಷ್ಟರಲ್ಲಿ ಶ್ರೀ ಕೃಷ್ಣನ ಬಾಲಲೀಲೆಯು ಕಣ್ಗೆಸೆಯಿತು. ಕಂಡವರ ಕಣ್ಣನ್ನು ಆಕರ್ಷಿಸುವಂತಿತ್ತು.

'ಅಕೋ! ಕಳ್ಳಕೃಷ್ಣನು ಆ ಬಾಲೆಯರ ಬಟ್ಟೆಯನ್ನೆಳೆದು, ತಲೆಯೊಳು ಹೊತ್ತಿದ್ದ ಪಾತ್ರೆಗಳನ್ನು ಕೆಡಹಾಕಿ, ಬೆಣ್ಣೆಯನ್ನು ಕಸರಿಕೊಂಡು ಓಡ ತೊಡಗಿರುವನಷ್ಟೋ! ಬೆನ್ನಟ್ಟಿರಿ. ರಟ್ಟೆಹಿಡಿಯಿರಿ. ಕಂಬಕ್ಕೆಕಟ್ಟಿರಿ' ಎಂದು ನಕ್ಕನು. ಆ ಬಾಲಕಿಯರ ಮೊಗವನ್ನುನೋಡಿ ಕನಿಕರಪಟ್ಟನು.

ಗದರಿಸಿದ ಯಶೋದೆಗೆ ಬಾಯ್ದೆರೆದು ತೋರಿಸುವ ಕೃಷ್ಣನ ಬಾಯೊಳಗೆ ಹದಿನಾಲ್ಕು ಲೋಕಗಳೂ ಪ್ರತ್ಯಕ್ಷವಾಗಿ ಕಾಣುವಂತಿದ್ದುವು. ರಾಜನು ತಿರಿತಿರಿಗಿ ತುದಿಕಾಲಿನಲ್ಲಿ ನಿಂದು ನೋಡತೊಡಗಿದನು.

'ಸಕಲ ಲೋಕ ಲೋಚನಾನಂದದಾಯಕನಾದ ಶ್ರೀ ಕೃಷ್ಣನೇ! ಬಟ್ಟೆವಾಸಿಟ್ಟು ನೀರಲ್ಲಿ ಆಟಕ್ಕಿಳಿದಿರುವ ಮಹಿಳೆಯರು ಸೀರೆಯನ್ನು ಬೇಡಿದರೂ ನೀಡಬಾರದೇ! ನಿನಗೇಕೆಂದಬಲೆಯರಲ್ಲಿ ದಯೆತೋರದು?'

'ಅಹೋ! ಇದೇನು ಈ ಗೋಪಿಯು ಕಾಲಂದುಗೆಯನ್ನು ಕೈಗೆ ತೊಡಿಸಿರುವಳು. ಒಡ್ಯಾಣವನ್ನು ಕತ್ತಿಗಿಟ್ಟಿರ್ಪವಳು ಇವಳಾರು! ಇನಳೋರ್ವಳು ಮಗುವೆಂದು ಗಂಡನನ್ನು ಎತ್ತುವಳು. ಮತ್ತೊಬ್ಬಳು ಅನ್ನ ಬಡಿಸಿ ಓಗರದ ತಟ್ಟೆಯನ್ನು ಕೈಯಲ್ಲಿಯೇ ತಂದಿರುವಳು. ಇನ್ನೋರ್ವಳು ಕೈಕಾಲುಗಳ ಉಂಗುರುಗಳನ್ನು ಬದಲಾಯಿಸಿಟ್ಟಿರುವಳು.

ಈಕೆಯು ಪುಷ್ಪಮಾಲಿಕೆಯನ್ನು ಕಟಿಗೆ ಬಿಗಿದು ಅಂಜನವನ್ನು ತಿಲಕವಿಡುತ್ತಾ ಕುಂಕುಮವನ್ನು ಕಣ್ಣಿಗೆ ಕಾಡಿಗೆಯಾಗಿ ಎಳೆಯುವಳು. ಹೀಗೆಯೇ ಮುಂದುನೋಡಲು ಕೃಷ್ಣನು ಕಂಡುಬಂದನು. ಊದುವ ಕೊಳಲಿನ ಶಬ್ದವು ರಾಜನಿಗೂ ಕೇಳಿಸಿದಂತಾಯಿತು. ಸ್ತ್ರೀಯರ ಈ ಕೋಲಾಹಲಗಳೆಲ್ಲಾ ಈ ಕೃಷ್ಣನ ಮಾಯೆಯೆಂದಂದುಕೊಂಡನು.

ಸರ್ವಸಮರ್ಥನಾದ ರಾಜನು ಪಿಡಿಸಿದ ಇಂತಹ ಬೊಂಬೆಗಳನ್ನು ನೋಡಿ ಈಗ ಮೈಮರೆತಿರುವನು. ಆ ಸಾಕ್ಷಾತ್ ಕೃಷ್ಣಮೂರ್ತಿಯನ್ನು ನೋಡುವ ಪ್ರೌಢೆಯರಾದ ಅಬಲೆಯರ ಪಾಡೇನು?

'ಖದ್ಯೋತ ಕುಲತಿಲಕ ರಾಮಚಂದ್ರನೇ ನಿಷ್ಕಲ್ಮಷೆಯಾದ ಸತಿಯ ವಿಪತ್ತನ್ನು ಕಾಣುವೆಯಾ? ಅಗ್ನಿಕೊಂಡವನ್ನು ಹಾರಿ, ತಾಯಿಯನ್ನು ಸೇರಲು ಮುಕ್ತಕಂಠೆಯಾಗಿ, "ವಸುಧೇ, ದೇಹಿಮೇ ವಿವರಂ" ಎಂದುಚ್ಚರಿಸುವಳು. ನೋಡು ಅಹಹಾ!'

'ಓಹೋ! ಆ ಕಂಸನ ಜುಟ್ಟು ಒಯ್ದು ನೆಲಕ್ಕೆ ಉರುಳಿಸಿ, ಅಪ್ಪಳಿಸಬೇಕೆಂಬ ಈ ಚಿಕ್ಕ ಮಕ್ಕಳ ಕೋರಿಕೆಯು ಕೊನೆಸಾಗುವುದೇ?'

'ರಾಮನೇ! ಕ್ಷತ್ರಿಯನೇ! ರಣಶೂರನೇ? ಕೋಡಗನಾದ ಈ ವಾಲಿಯ ಮುಖದಿಂದ ಎಡೆಬಿಡದೆ ಹೊರಡುವ ಜರೆದಾಟದ ಉಚ್ಚಾವಚವಾದ ಮಾತನ್ನು ಎದುರುಸುರದೆ ಒಪ್ಪಿ ನಿಂದಿರುವೆಯಾ? ನೀನು ಭಕ್ತರ ದಾಸನೆಂದು ಬೇರೆ ಹೇಳುವುದೇನು?' ಎಂದು ಯೋಚಿಸುವ ರಾಜನು ತಾನು ಓದಿಕೇಳಿದ್ದ ಕಥೆಯ ಸ್ಮರಣೆಯಿಂದ ತಕ್ಕ ಸಮಾಧಾನಗಳನ್ನು ತಾನಾಗಿಯೇ ಸ್ಮರಿಸಿಕೊಂಬನು.'

ಇನ್ನು ಮುಂದುಮುಂದಾಗಿ ನೋಡಲು, ಮೇಲುಮೇಲಾಗಿ ಎಷ್ಟೋ ಅಂತಸ್ತುಗಳು ಮಾತ್ರ ಕಾಣುತ್ತಿದ್ದುವು. ಅವುಗಳಲ್ಲಿರುವ ಚಿತ್ರಗಳ ವಿವರವನ್ನರಿಯುವಷ್ಟು ಮನುಷ್ಯನಾದ ರಾಜನ ದೃಷ್ಟಿಯು ಹರಿಯುತ್ತಿದ್ದಿಲ್ಲ. ಹೀಗೆಂದು ಎಷ್ಟೋ ಸಮಯವು ಕಳೆದುಹೋಗಲು ಹೊತ್ತು ತಿಳಿಯುವುದಕ್ಕಾಗಿ ಸೂರ್ಯನನ್ನು ನೋಡಲಿಚ್ಛೆಯಿಂದ ಮೇಲೆ ನೋಡಿದನು. ಸೂರ್ಯನು ಇರಲಿಲ್ಲ. ಚಂದ್ರನೂ ಕಾಣಿಸನು ಚುಕ್ಕೆ

ಗಳೂ ಮಿಣುಕವು. ಪ್ರಕಾಶವೆತ್ತಣದೆಂದು ಪರೀಕ್ಷಿಸಿನೋಡಿದನು. ಆಕಾಶವೇ ಕಂಡಂತಿಲ್ಲ! ಆಶ್ಚರ್ಯಪಟ್ಟು ಸ್ತಬ್ಧದೃಷ್ಟಿಯಾಗಿ ತನ್ನ ಸಮಾಚಾರಗಳನ್ನು ಸ್ಮರಿಸ ತೊಡಗಿದನು. ಬೇಂಟೆಯನ್ನು ಮೊದಲ್ಗೊಂಡು ಒಂದೊಂದನ್ನಾಗಿ ನೆನವರಿಸಿ 'ಈಗ ತಾನಿರುವುದು ಸ್ವರ್ಗ' ಇವೆಲ್ಲವೂ ಕೃತಕದ ಬೊಂಬೆಗಳು, ಚಂದ್ರಸೂರ್ಯರು ಇಲ್ಲಿ ಉದಯಿಸರು ಎಂದು ತಾನಾಗಿ ಸುಮ್ಮಗಾದನು.

ರಾಜನು ಸೊಗಸಾದ ಚಿತ್ರಗಳಲ್ಲಿ ಭ್ರಮೆಗೊಂಡು ಶೋಕರೋಷಗಳಿಂದ ಸುರಿದ ಮಾತನ್ನು, ಸ್ವಲ್ಪ ದೂರ ಇನ್ನೊಂದು ಮರದಡಿಯಲ್ಲಿ ಕುಳಿತಿರ್ಪ ಅದೇ ಅಗ್ನಿಹೋತ್ರಿಯು ಕೇಳಿ, ಇವನ್ಯಾರೆಂದು ಗುರ್ತಿಸಲು ಅಲ್ಲಿಯೇ ಮರೆಯಾಗಿದ್ದನು. ಈತನ ವೇಷಭಾಷೆಗಳಿಂದಲೂ ಪ್ರಕೃತಿ ವಿಕೃತಿಗಳಿಂದಲೂ ಬುದ್ಧಿಶಕ್ತಿಯಿಂದಲೂ ಮನುಷ್ಯನೆಂದರಿತು, ಈತನಿಲ್ಲಿಗೆ ಬಂದ ಪರಿಹೇಗೆಂದು ತಿಳಿಯಲು, ಮುಂದುಸುರುವ ಮಾತುಕೇಳುವುದಕ್ಕಾಗಿ ಸುಮ್ಮನಾದನು.

ರಾಜನು, ಊರ್ವಶಿಯಂತೆ ಇಲ್ಲಿ ಇನ್ನಪ್ಸರೆಯರಿದ್ದರೂ ಇರಬಹುದು. ಅಂಥವರಲ್ಲಿ ಊರ್ವಶಿಯೆಂದು ಮಾತೆತ್ತಿದರೆ, ಅಪಾಯಕ್ಕೊಳಗಾಗುವೆ. ಜಾಗ್ರತೆಯಿಂದಿರಬೇಕೆಂದನ್ನುತ್ತ, ಅವಳ ಅಂದಚಂದದ ಗುರ್ತನ್ನೆಣಿಸುತ್ತಿದ್ದನು.

ಈ ರಮಣೀಮಣಿಯು ಸಾಮಾನ್ಯಳಲ್ಲ. ಮಾನ್ಯಳೇ ಇಂತಹ ಸ್ತ್ರೀಯು ಇನ್ನಿಲ್ಲದ ಕಾರಣ ಬ್ರಹ್ಮನು ತನ್ನ ಬುದ್ಧಿಚಾತುರ್ಯದಿಂದ ಇವಳನ್ನು ಸೃಷ್ಟಿಸಿದನೆಂದು ಹೇಳಲಾಗುವುದಿಲ್ಲ. ಕೀಟಾಕ್ಷರದಂತೆ ಹುಟ್ಟಿರಬೇಕು. ಈ ಶರೀರಕಾಂತಿಯನ್ನು ಅಲ್ಪಸ್ವಲ್ಪ ಕದ್ದ ಮೋಡಗಳು ಕ್ಷಣ ಕ್ಷಣಮಾತ್ರ ತೋರಿ ಅಡಗಿಸುವ ಆ ಪ್ರಕಾಶವೇ ಮಿಂಚೆಂದು ಹೇಳಲ್ಪಡುವುದು. ಕರಿದಾದ ಮೇಘಗಳು ಈ ಶೋಭೆಯನ್ನು ಅಷ್ಟೈಶ್ವರ್ಯವೆಂದು ಭಾವಿಸಿ, ಕೆಲವು ಕಾಲಗಳಲ್ಲಿ ಮಾತ್ರ ಸಣ್ಣ ಬಾಲಕರಂತೆ ಲವಕಾಲ ಹೊರಕಾಣಿಸುವುವು. ಚಿಕ್ಕ ಮಕ್ಕಳು ಕೈಯ್ಯಲ್ಲಿ ಸಿಕ್ಕಿದ ನಾಣ್ಯವನ್ನು ತೋರ್ಪಡಿಸಲು, ಆಗಾಗ ಕೈಬಿಚ್ಚಿ, ಮುಚ್ಚುವುದು ಅವುಗಳ ಪದ್ಧತಿಯಷ್ಟೆ.

ಇವಳ ಅಂಗಗಳೇ ಚಿತ್ತಾರದವರಿಗೆ ಮೇಲುಪಂಕ್ತಿ. ಕಾದಂಬಿನಿಯಂತೆ ಕದ್ದುಜೀವಿಸುವವರೇ ಹೆಚ್ಚು. ಕೂದಲಿನ ಬಣ್ಣವನ್ನು ಅಪಹರಿಸಿದ ಕಾರ್ಮುಗಿಲು ಭೂಗರ್ಭವು ಬಿರಿಯುವಂತೆ ಗರ್ಜಿಸುತ್ತಿರುವುದು. ಜಡೆಯ ಚಂದವನ್ನು ಕದ್ದಿರುವ ಕೃಷ್ಣಸರ್ಪವು ಬುಸುಗುಟ್ಟುತ್ತಾ ಕಂಡವರ ಕಡಿಯಲು ಹಾರಿಬೀಳುವುದು. ಲಲಾಟದ ಸೊಬಗನ್ನು ಕೊಂಡು ಜೀವಿಸುವ ಅಷ್ಟಮೀ ಚಂದ್ರನು ಏರು ಸೇರಿ, ಆಗಾಗ ಕೈತಪ್ಪಿದೆನೆಂದು ಚಂದ್ರಿಕೆ ಎಂಬ ನಗುವಂತೋರುವನು. ಹುಬ್ಬುಗಳ ಸರ್ವಸ್ವವನ್ನು ಕೈಕೊಂಡ ಬಿಲ್ಲುಗಳು ಬಂದವರ ಸೀಳಲು ಬಾಣವಂಗುರಿಹಿಡಿದಿರುವುವು. ಕಣ್ಣುಗಳ ಚಮತ್ಕಾರವನ್ನು ಕದ್ದೊಯಿದ ಎರಳೆಗಳು ಕಾಡುಸೇರಿಯೂ ಮನುಷ್ಯರನ್ನು ಕಂಡೊಡನೆ ದಿಕ್ಕೆಟ್ಟು ಓಡತೊಡಗುವುವು. ಮೂಗಿನ ಸೌಭಾಗ್ಯವನ್ನು ಇರಿಸಿಕೊಂಡ ಸಂಪಿಗೆಯ ಮೊಗ್ಗೆಗಳು ಹತ್ತಿರನಾರಲು ಮಕ್ಷಿಕಗಳಿಗೂ ಸಮ್ಮತಿಯೀಯವು ಕಪೋಲದ ಆಕಾರವನ್ನು ಅಪಹರಿಸಿದ ಆವೆಯು ನೀರೊಳು ಮುಳುಗಿ ತಲೆಸೇರಿರುವುದು. ತುಟಿಯ ಚಲ್ವಿಕೆಯನ್ನು ಕಸರಿಗೊಂಡ ಬಿಂಬಫಲಗಳು, 'ತಾವು ಅಪವಿತ್ರರು' ಉನ್ಮಾದಕರು ಎಂದು ಹೆಸರು ಹೊತ್ತಿರುವುವು. ಹಲ್ಲುಗಳ ಸೌಂದರ್ಯವನ್ನು ಬಲಕಾರದಿಂದ ದಾಟಿಸು ಪಿಡಿಗಳು, ಗಿಡಗಳ ತುದಿಸೇರಿ ಹೊದ್ದಿರುವ ದಟ್ಟವಾದ ತೊಗಟೆಯಲ್ಲಿ ಸ್ವಲ್ಪ ಬಿಡುಬಿಡದೆ ಹೊರಕಾಣುವುವು. ಕುತ್ತಿಗೆಯ ಆಕೃತಿಯನ್ನು ತಿರುಗಿ ಕೊಡಲೊಲ್ಲದ ಶಂಖವು, ತಾನು ದರಿದ್ರನೆಂದು ತಿಳಿಸುವಂತೆ ಪ್ರತಿ ಮನೆಗಳಲ್ಲಿ ತಿರುಗಾಡುತ್ತಾ 'ಭಿಕ್ಷಾರ್ಥಿ' ಎಂದು ಬಿಡರುತ್ತಿರುವುದು. ಬಾಹುಗಳ ಹೊಂದವನ್ನು ಸೆರೆಹಿಡಿದಿರುವ ಸನಾಳಕಮಲವು ಅಗಗಳಾದ ಕೆರೆಮಡುಗಳ ನಡುಸೇರಿರುವುದು. ಕುಚಗಳ ಅಂದವನ್ನಿಟ್ಟುಕೊಂಡ ಸ್ವರ್ಣಕುಂಭಗಳು ಸದಾ ಗೋಪ್ಯದಲ್ಲಿಯೇ ವಾಸಿಸುತ್ತಿವೆ. ಮಧ್ಯಭಾಗದ ಶೋಭೆಯನ್ನು ಸ್ವೀಕರಿಸಿದ ಸಿಂಹವು ಊರು ಬಿಟ್ಟು ಮೃಗರಾಜನೆಂದಾರ್ಭಟಿಸುತ್ತಾ ಕಣ್ಣು ಕೆಂಚರಿಸುವುದು. ನಿತಂಬದ ಘನತೆಯನ್ನು ಪಡೆಕೊಂಡ ಪರ್ವತಗಳು ಕಲ್ಲುಮುಳ್ಳುಗಳಿಂದ ಸುತ್ತುಗಟ್ಟಿರುವುವು! ತೊಡೆಗಳ ಸೌಕುಮಾರ್ಯವನ್ನಳಿಸಿಕೊಂಡ ರಂಭಾಸ್ತಂಭಗಳು ಸಾವಿರಾರು ಓಲಿಯ ಆದರಣಗಳಿಂದ ಸುತ್ತಿರಲ್ಪಡುವುವು. ಪಾದ

ಪದ್ಮಗಳ ಕಾಂತಿಯನ್ನು ಕಾಡಿಕಸೆದುಕೊಂಡ ಕೆನ್ನೈದಲೆಯು ಹಗಲಾದೊಡನೆ ಗಟ್ಟಿಯಾಗಿ ಮುಚ್ಚಿಕೊಳ್ಳುವುದು. ನಗೆಯ ಶೋಭೆಯನ್ನು ಸೆಳದುಕೊಂಡ ಬೆಳದಿಂಗಳು ಕೈಯಿಂದ ಮುಟ್ಟಲು ಸಿಗುವುದಿಲ್ಲ. ನಡೆಯ ನೈಪುಣ್ಯವನ್ನು ಬಿಗಿಹಿಡಿದ ಅರಸಂಚೆಗಳು ಮಾನಸಸರೋವರವನ್ನು ಸೇರಿದುವು. ನುಡಿಯ ವಲಪನ್ನು ಸಂಪಾದಿಸಿಕೊಂಡ ಗಿಳಿಗಳು ಉನ್ನತವಾದ ಕೋಟರಗಳಲ್ಲಿ ಭದ್ರವಾಗಿರುವುವು. ಸ್ವರದ ಮಾಧುರ್ಯವನ್ನು ಗಳಿಸಿದ ಸಾರಿಕೆಯು 'ತನ್ನೊಳ್ಳೇನೂಯಿಲ್ಲ' ಎಂದು ಮುಂತಿಳಿಸುವುದಕ್ಕಾಗಿ 'ಮ್ಯೆ– ನಾ, ಮ್ಯೆ– ನಾ.' ಎಂದು ಪೆಸಗೊಂಡಿರುವುದು.

ಕಳ್ಳರಿಗೆ ಬಾಯಿಮುಂದೆಂಬುದನ್ನು ಬೇರೆಹೇಳಬೇಕಾಗಿಲ್ಲ. ಇವರೆಲ್ಲರಿಗೂ ತಾವು ಪ್ರಯತ್ನಪಟ್ಟು, ಕದ್ದು ಜೀವಿಸುವ ಒಡವೆಯನ್ನು ಕಸರಿಕೊಳ್ಳಲು ಇನ್ನಾರು ದೃಷ್ಟಿ ಇಟ್ಟಿರುವರೋ ಎಂಬುದೇ ಭೀತಿ. 'ಚೋರರಿಗತಿಜಾಗ್ರತೆ' ಎಂಬುದು ಊರುಕಳ್ಳರನ್ನು ನೋಡುವ ನಮಗೆ ನಂಬಿಕೆಯಷ್ಟೆ. ನೀಚವೃತ್ತಿಯಿಂದ ಸಂಪಾದಿಸಿದ ಹಣವನ್ನೂ ಮನ್ನಿಸುವಂತೆ ನಾವೀಗ ಇವೆಲ್ಲವನ್ನೂ ಆಧುನಿಕ ಹೆಂಗಸರಿಗೆ ದೃಷ್ಟಾಂತವಾಗಿ ತೋರಿಸುವೆವು.

ಯಾರು ಎಷ್ಟು ಕಾಂತಿರಾಶಿಯನ್ನು ಕದ್ದೊಯ್ದರೂ, ಇಲ್ಲಿ ಕಮನೀಯತೆಗೆ ಕುಂದಿಲ್ಲ; ಕಡಲಿನಿಂದ ಎಷ್ಟು ವಿಧರತ್ನಗಳನ್ನು ತೆಗೆದರೂ ಸಾಗರವು ಇನ್ನೂ ರತ್ನಾಕರವೇ! ಬಾಯಿಯಿಂದ ನೀರುಸೇದುವುದು ಇನ್ನೂ ಸ್ವಚ್ಛವೂ ಪ್ರಬಲವೂ ಆದ ನೀರಿಗೆನೇ ಕಾರಣ. ಈಕೆಯ ಮನ್ಮಥನಿಗೆ ಜಗತ್ತನ್ನು ಜಗ್ಗಿಸುವುದರಲ್ಲಿ ಬಿಲಿವಾದಬಿಲ್ಲು. ಇವಳ ನಡುವು ಗಟ್ಟಿಹಿಡಿದಿತ್ತಿದುದರಿಂದ ಸಣ್ಣದಾಗಿರುವುದು. ಅಲ್ಲದೆ ಅತನ ನಾಲ್ಕು ಬೆರಳುಗಳು ಸಂಧಿಸಿದ ಎಡೆಯೊಳು ಮೂರು ರೇಖೆಯಾಗಿ ಕಾಣುವುವು. ಕವಿಗಳಿವನ್ನು ತಮ್ಮ ಕಾವ್ಯಗಳಲ್ಲಿ ಅಲ್ಲಲ್ಲಿ "ತ್ರಿವಳಿ" ಎಂದು ವರ್ಣಿಸುತ್ತಾರೆ.

ದಿನಕ್ಕೊಂದು ಕಲೆ ವರಿಸಿದರೂ, ಈಕೆಯ ಮುಖಮಂಡಲಕ್ಕೆ ಸರಿಹೋಲಲಾಗದೆ ವ್ಯಥೆಪಟ್ಟು ಚಂದಿರನು ಕಗ್ಗತ್ತಲೆ ಎಂಬ ಕರಿಕಲ್ಲಿಗೆ ತಲೆ ಒಡೆದುಕೊಂಡಿದುದರಿಂದ ಬಿಂಬವೊಡೆದು ಉಚ್ಚಳಿಸಿ ಆಕಾಶಕ್ಕೆ ತಗಲಿದ

ಅಮೃತ ಬಿಂದುಗಳೇ ಕೃಷ್ಣಪಕ್ಷದಲ್ಲಿ ಸ್ಫುಟಗಳಾದ ನಕ್ಷತ್ರಗಳಾಗಿ ಕಾಣಿಸಿಕೊಳ್ಳುವುವು. ಇಂತೆಂದು ಬಗೆಬಗೆಯಾಗಿ ಉನ್ಮತ್ತನಂತೆ ಗುಣ ಗಣಗಳನ್ನು ವರ್ಣಿಸುವ ತನಗೆಷ್ಟು ಸಮಯವು ಕಳೆದುಹೋಯಿತೆಂಬುದು ರಾಜನ ಬುದ್ಧಿಗೆನೇ ಗೋಚರಿಸಲಿಲ್ಲ. ಬಿಂಬಫಲವು ಚೆಂದುಟಿಯ ಸಾದೃಶ್ಯ ಮಾತ್ರ ಪಡೆದೊಂದು ಕಾರಣದಿಂದಲೇ ಬುದ್ಧಿಭ್ರಾಂತಿಯನ್ನು ಮಾಡುತಲಿರುವುದು ಶಾಸ್ತ್ರಸಿದ್ಧವಾಗಿರಲು, ಆ ಸಾಕ್ಷಾದೂರ್ವಶಿಯ ನಲ್ಲುಟಿಯ ಸಾರವಂ ಹೀರಿದ ಮಹಾರಾಜನ ಈ ಅವಸ್ಥೆಯನ್ನು ವಿಶೇಷವೆನಲಾದೀತೆ?

ಊರ್ವಶಿಯು ಸಭೆಯಲ್ಲಿ ಅಗ್ನಿಹೋತ್ರಿ ಇಲ್ಲದಿರುವುದರಿಂದ ಸ್ವಲ್ಪ ಸಂಕೋಚಪಟ್ಟಳು. ಮೋಜಿ ಮುಗಿಯುವಷ್ಟರೊಳಗೆ ಬ್ರಾಹ್ಮಣನು ಬಂದೇ ಬಂದನು. ಮುಖವು ತಾನು ಆರಾಧಿಸುವ ದೇವತೆಯಂತೆ ಪ್ರೋಜ್ವಲಿಸುತ್ತಿತ್ತು. ಮುಖದ ಉರಿತಟ್ಟಿದ ಸೂರ್ಯಕಾಂತಮಣಿಗಳು ಜ್ವಾಲೆ ಹಿಡತೊಡಗಿದವು. ಸ್ತ್ರೀಯರ ಮುಖಕಾಂತಿ ತಗಲಿದ ಚಂದ್ರ ಕಾಂತ ಮಣಿಗಳ ಶೈತ್ಯದಿಂದ ಜ್ವಾಲೆಯು ಸ್ವರ್ಗವನ್ನಾವರಿಸಲಿಲ್ಲ. ಬ್ರಾಹ್ಮಣನು ಎವೆ ಇಕ್ಕದೆ ಊರ್ವಶಿಯ ಮುಖವನ್ನೇ ನೋಡಿದನು. 'ಛೀ! ದುರಾತ್ಮಳೇ! ನನ್ನನ್ನೇಕೆಂದು ನೋಡುವೆ? ಮುಂದರಿತೆನು' ಎಂದನು. ಅಷ್ಟರಲ್ಲಿಯೇ ಆಕೆಯ ರಹಸ್ಯವು ಆರು ಕಿವಿಗಳನ್ನುಸೇರಿ ಭಿನ್ನವಾಯಿತು. ದೃಷ್ಟಿಯು ಜಡವಾಯಿತು. ರಾಯನ ಗೋಪನವು ಬಯಲಾಯಿತು. ಎದೆಯು ಶ್ವಾಸಭರದಿಂದ ಬೇಗ ಬೇಗನೇ ಉಚ್ಛ್ವಸಿತವಾಗುತಲಿತ್ತು. ಸಭೆಯು ಒಮ್ಮೆಗೆ ಸುಣ್ಣಗಾಗಿ ದೇವತೆಗಳ ದೃಷ್ಟಿಯು ಇವರಿಬ್ಬರಲ್ಲಿಯೇ ಸುಳಿಯುತ್ತಿತ್ತು. ಮುಂದಿನ ಸಮಾಚಾರವರಿಯಲು ಎಲ್ಲರೂ ಕೌತುಕ ತಾಳಿದ್ದರು.

ಮೋಹಿನಿಯು ತ್ರಾಸವಿಹ್ವಲಳಾದಳು. ದೇವೇಂದ್ರನು ಸ್ವರ್ಗಕ್ಕೆ ವಿಪತ್ತಿರುವುದೇ ಎಂದು ಗಾಭರಿಯಾಗಿದ್ದನು. ತಮಾಷೆ ಗಿಡಗಳ ಇಕ್ಕಟ್ಟಿನಲ್ಲಿ ನಿಂತಿದ್ದ ಊರ್ವಶಿಯು ವಿಪ್ರವರ್ಯಗೆ ಎರಗಿದಳು. ಒಂದೊಮ್ಮೆಗೆ ಅಬಲೆ ಸೇವಕಿಯಾದಯೆನ್ನೊಳು ಮುನಿಯದೆ ಅಪರಾಧವಂ ಮನ್ನಿಸೆಂದು ಬೇಡಿಕೊಂಡಳು.

**ಬ್ರಾಹ್ಮಣ:**–'ಅಪ್ಸರೆ! ಲೋಕಪೂಜ್ಯಳು ಎಂದು ಗೌರವಪಾತ್ರಳಾಗಿ ಅವಿವೇಕದಿಂದ ಅಲ್ಪವನ್ನು ಅಭಿಲಷಿಸಿದೆಯಾ? ಸ್ವರ್ಗಲೋಕದ ಗೌರವಕ್ಕೆ ಕುಂದುತಂದೆಯಾ? ದೇವತೆಗಳು 'ನಿನ್ನಂ ಪೆಂಗಳೊಳು ರನ್ನ'ಳೆಂದು ಪ್ರೀತಿತುಂಬಿ ಮರ್ಯಾದಿಸಿದುದಕ್ಕೆ, ನೀನವರನ್ನು ಲಕ್ಕಿಸದಿದ್ದುದು ತಕ್ಕುದು. ರಕ್ಷಕನಾಗಿ ಸಮೀಪವಿರುವ ರೆಪ್ಪೆಯು ಕಣ್ಣಿಗೆ ಗೋಚರಿಸದು! ಏಂ ಗೈಯಲಿ? ಹೂವಿಗಾಗಿ ಹಗ್ಗಕ್ಕೆ ಬೆಲೆ!' ಎಂದು ಅನ್ಯೋಕ್ತಿಯಾಗಿ ಪುರಂದರನನ್ನು ಮುಟ್ಟುವಂತೆ ಗಟ್ಟಿಯಾಗಿ ಊರ್ವಶಿಯನ್ನು ಜರೆದು ಹೀಯಾಳಿಸಿದನು. ದೇವತೆಗಳು ವಿಲಕ್ಷ್ಯರಾಗಿ ಊರ್ವಶಿಯ ಸಮಾಚಾರವನ್ನು ಬ್ರಾಹ್ಮಣನ ಮುಖದಿಂದ ಸಮಗ್ರವಾಗಿ ತಿಳಿದುಕೊಂಡರು.

ಅಪರಾಧ ಕಾರಣವು ಸ್ವಚ್ಛಂದ ಸಂಚಾರಕ್ಕನುಕೂಲವಾದ ಗರಿಯೆಂದು ನಿಶ್ಚಯಿಸಿ ಅದನ್ನು ಕತ್ತರಿಸುವ ಏರ್ಪಾಟು ಹಚ್ಚಿದರು! ರಾಜನನ್ನು ಅದೇ ತೋಪಿನೊಳಗಿರುವ ಕಗ್ಗತ್ತಲೆ ಕಾಡಿನಲ್ಲಿಯೇ ನಿಲ್ಲಿಸಿಬಿಡುವಂತೆ ಕಟ್ಟುಮಾಡಿದರು. ಬ್ರಾಹ್ಮಣನು ನಿರ್ಜರರ ಕಡುಶಿಕ್ಷೆಯು ಸರ್ವದಾ ಸರ್ವ ಜನರ ಮನಸ್ಸಿನಲ್ಲಿಯೂ ನೆಲೆನಿಲ್ಲಲಿ ಎಂದುಕತ್ತರಿಸಿದ ಪಕ್ಕಗಳನ್ನು ಪುರದ್ವಾರದ ಕೀರ್ತಿಮುಖಕ್ಕೆ ನೀಟವಾಗಿ ಕಟ್ಟಿಸಿದನು.

# ೧೩. ಸಾಹಸ.

ಊರ್ವಶಿಯು ಇದರ ಬಿಡುಗಡೆಯ ಉಪಾಯವನ್ನು ಯೋಚಿಸುತ್ತಾ ವಿಮಾನವೇರಿ ಇಂದ್ರಜಾಲ ಮಹೇಂದ್ರಜಾಲವೇ ಮೊದಲಾದ, ಮಾಯಾ ಶಾಸ್ತ್ರಗಳ ಮರ್ಮಜ್ಞನಾದ ಮಾಯಾಮಾನುಷ ಮಯಾಸುರನ ಪಟ್ಟಣವನ್ನು ಸೇರಿ, ಆತಗೆ ಶರಣಾಗತಳಾಗಿ, 'ಮಹಾತ್ಮನೇ! ಕೃಪೆ ತೋರೆಂದು' ದೀನಭಾವದಿಂದ ಬೇಡಿಕೊಂಡಳು.

'ನಿನ್ನ ಪ್ರೀತಿಪಾತ್ರಳಾದ ಹೇಮೆಯು ನನ್ನನ್ನು ಬಹಳವಾಗಿ ಪ್ರೀತಿಸುತ್ತಿದ್ದಳು. ನಾವು ಪರಸ್ಪರಸಖಿಗಳು. ಆಕೆಯು ಈಗ ಎಲ್ಲಿರುವಳು? ಎಂದು ವಿಚಾರಿಸಿ, 'ಓ! ಮಯಾಸುರನೇ! ಎನ್ನ ಚಿಕ್ಕದೊಂದರಿಕೆಯನ್ನು ಮನಸಿಟ್ಟು ಆಲಿಸಬೇಕೆಂದು ಬಿನ್ನಯಿಸುವೆನು. ಕೇಳು – ರಾತ್ರಿಯು ಕಳೆಯಿತು, ಈಗಲೇ ಬೆಳಗಾಗುವುದು. ಇನ್ನರೆಗಳಿಗೆಯೊಳಗೆ ಸೂರ್ಯನು ಉದಯಿಸುವನು. ಇನ್ನರೆಕ್ಷಣದಲ್ಲಿ ಕಮಲವು ಬಾಯಿದೆರೆಯುವುದು. ಮುಂದೆ ತನ್ನ ಇಷ್ಟಬಂದ ಕಡೆಗೈದಿ ವಿಧವಿಧ ಪುಷ್ಪಗಳ ಮಕರಂದವನ್ನು ಮೆಲ್ಲುವೆನು, ಎಂದು ದುಂಬಿಯು ಹಂಬಲಿಸಿಕೊಂಡು, ಇಡೀರಾತ್ರಿಯನ್ನು ತಾವರೆಯೊಳಗೆ ಕಳೆಯುತ್ತಾ ಬದುಕಿಉಳಿದೇನೆಂದು ಹರ್ಷಿಸುತ್ತಿರುವಲ್ಲಿ, ಕೊಳದೊಳಿಳಿದ ಮದ್ದಾನೆಯು ಆ ತಾವರೆಯನ್ನು ಹರಿದು ನೆಗೆಸಿ ನೀರ ಗಪ್ಪಳಿಸಿದಂತೆ, ಎನ್ನ ಅಭಿಲಾಷೆಯು ಕಡೆಹಾಯಿತು' ಎಂದೆನ್ನುತ್ತಾ ತನ್ನಿಂದಾಗಿ ಮಹಾರಾಜನಿಗೆ ಸಂಭವಿಸಿದ ವಿಪತ್ತುಗಳನ್ನು ಒಂದೊಂದಾಗಿ ಮನಕರಗುವಂತೆ ಎಲ್ಲವನ್ನೂ ಬೆಸಗೊಂಡು ಕಣ್ಣೀರುಮಿಡಿದಳು.

ಮಯಾಸುರನು ದಯೆದೋರಿ, 'ಊರ್ವಶಿಯೆ! ಬೆದರದಿರು. ಬಂದ ಬಂಧನವನ್ನು ಬೇಗನೇ ಬಿಡಿಸುವೆನು. ಈ ರಾತ್ರಿಯಲ್ಲಿಯೇ ಶತ್ರುಸೈನ್ಯವು ನಿಮ್ಮೆಲ್ಲವರ ಮನೆಯನ್ನೂ ಮುಸುಕಿ, ಏಕದಾ ಸ್ವರ್ಗವನ್ನಾವರಿಸಿ, ದೂಳಿಪಟಮಾಡುವಂತೆ ನಟಿಸುವೆನು. ಆಗ ದೇವಸ್ತ್ರೀಯರೆಲ್ಲರೂ, ಬೊಬ್ಬಿಡುವರು. ಅವರೆಲ್ಲರೂ ಮುಂದೆ ತಮ್ಮ ಇರವು ಅಸಂಭವವೆಂದೆನ್ನುವರು. ಸ್ವರ್ಗವು ಈ ವಿಪತ್ತಿನಿಂದುಳಿದರೆ ಚಿರಸ್ಥಾಯಿಯಾಗುವುದೆಂದು ಭಾವಿ

ಸುವರು. ಆಗ ನೀನು 'ಇದಕ್ಕೆ ತಕ್ಕ ಪ್ರತಿಕಾರವು ನನ್ನ ಮನಸ್ಸಿನಲ್ಲಿ ಹೊಳೆಯುತ್ತಿರುವುದು. ಸುರರೆಲ್ಲರೂ ಸಮ್ಮತಿಸಿ ನನ್ನ ಅಭೀಷ್ಟವನ್ನು ನೆರವೇರಿಸುವೆವೆಂದು ಭಾಷೆಕೊಟ್ಟಲ್ಲಿ ಕೈಲಾದಷ್ಟು ನೋಡುವೆನೆಂದು' ಸಮಯಕ್ಕೆ ತಕ್ಕಂತೆ ಮಾತಾಡಿ, ಅವರಿಂದ ಬೇಕಾದ ವರವನ್ನು ಪಡೆದು ರಾಜನನ್ನು ತರಿಸಿ ಸೈನ್ಯಕ್ಕೆದುರಾಗಿ ನಿಲ್ಲಿಸು. ಆಗ ದಂಡು ತಾನಾಗಿಯೇ ಆತಗೆ ಬಿನ್ನಯಿಸಿ ದೂರ ಸರಿದುಹೋಗುವುದು' ಎಂದು ಹೇಳಿ ಊರ್ವಶಿಯನ್ನು ಕಳುಹಿಸಿದನು. ಊರ್ವಶಿಯು ಸಂತೋಷಸಾಗರದಲ್ಲಿ ತೇಲಾಡುತ್ತಾ ಸ್ವರ್ಗಕ್ಕೆ ಮುಖವಾಗಿ ವಿಮಾನವನ್ನು ಪ್ರೇರಿಸಿದಳು.

ಊರ್ವಶಿಯ ಕಷ್ಟದಲ್ಲಿ ಮುಕ್ಕಾಲು ಪಾಲು ಕಳೆದಂತೆ, ಊರ್ವಶಿಯ ತಂತ್ರಗಳನ್ನು ಉಪಾಯದಿಂದ ಅರಿತಿರುವ ಮೋಹಿನಿಯ ದೃಷ್ಟಿಯು ಮುಂದಣ ಸುಖದಲ್ಲಿಯೇ ಕಟ್ಟಲ್ಪಟ್ಟಿತ್ತು. ಹಾವಿನ ಹೆಜ್ಜೆಯು ಹಾವಿಗೇಸೇ ಗೊತ್ತಲ್ಲವೇ. ಹಾಗೆಯೇ ರಂಭಾದಿ ಸ್ತ್ರೀಯರು ಸಖಿಯಾದ ಊರ್ವಶಿಯ ದುಃಖವನ್ನನುಶೋಕಿಸುವರು. ಮಂತ್ರಿಸೇನಾನಿಗಳೂ ಆಶ್ರಮದ ಜನರೊಂದಿಗೆ ಹುತಶೇಷವನ್ನುಣ್ಣುತ್ತಾ ಪೂತಾತ್ಮರಾಗಿರುವರು.

ಮಹಾರಾಜನು ಬೇಟೆಯಾಟಕ್ಕಾಗಿ ಪಟ್ಟಣದಿಂದ ಹೊರಹೊರಟ ಸಮಯವು ಹೇಳತಕ್ಕದುದಲ್ಲ! ಕಾಡಲ್ಲಲೆದು ಜಲಪಾನಕ್ಕೆನೇ ಕಷ್ಟಪಡಬೇಕಾಯಿತು. ಮೋಹಿನಿಯ ಶಾಪವಿಮೋಚನೆಗಾಗಿ ಎಷ್ಟೋ ಪ್ರಯಾಸ, ಮೂರ್ಛಾವಸ್ಥೆ! ಇದನ್ನು ದಾಟಿದರೂ ಈಗಣ ದುರವಸ್ಥೆಯು ಹೇಳಲಳವೇ. ಕತ್ತಲೆ ಕೋಣೆಯೆನಲು ಅದ್ಯಾಪಿ ಜಗತ್ತೇ ನಡುಗುವುದು. ಹುಟ್ಟಿದ ಮೊದಲ್ಗೊಂಡು ದುಃಖವರಿಯದ ಈ ಮಹಾರಾಜನೆಲ್ಲಿ? ಕಠಿಣತರವಾದ ಈ ಕರಿಕಾಡಿನಲ್ಲಿ ಸಿಲ್ಲುವುದೆಲ್ಲಿ? ಜಗಚ್ಛಾಸಕನೆಂದೆನಿಸಿ ಸಿಂಹಾಸನಾರೂಢನಾಗಿರುವ ರಾಜನು ಈಗ ಹೇಗೆ ಕಾಲ ಕಳೆಯುವನೋ ತಿಳಿಯದು! ವಾರಮಹಿಳೆಯರ ಮಾತಿಗೆ ಮರುಳಾದವನು ತತ್ಕಾಲದಲ್ಲಿ ಸುಖ ಪಡೆದರೂ ಕಾಲಾಂತರದಲ್ಲಿ ದುಃಖಕ್ಕೆ ಈಡಾಗದಿರಲಾರನೆಂಬುದಕ್ಕೆ ರಾಜನೇ ದೃಷ್ಟಾಂತವು.

K-1652

# ೧೪. ಯೋಚನೆ.

ಕತ್ತಲೆ ಕಾಡಿನಲ್ಲಿ ಕೈದಿಯಾಗಿದ್ದ ಕುಂಭಿಣಿಪತಿಯು, 'ಬರಬೇಡ! ಸ್ವರ್ಗದ ಪರಿಯನ್ನರಿಯೆ, ಅವಿತಿರು' ಎಂಬ ಊರ್ವಶಿಯ ಮಾತನ್ನು ಮೀರಿದುದಕ್ಕೆ ತಕ್ಕ ಫಲವು ಲಭಿಸಿತು! ಉಳಿದ ನನ್ನ ಜೀವನವು ಕಾನನ ಕೌಮುದಿಯಂತಾಯಿತೇ! ನಾನು ಈ ಬಂಧದಿಂದ ಮುಕ್ತನಾಗಿ ನನ್ನ ಪ್ರಜೆಗಳನ್ನು ನೋಡಲೊಳವೆಂದು ವಿಧಾತನು ಹಣೆಯಲ್ಲಿ ಬರೆದಿರಬಹುದೇ! ಗೀರ್ವಾಣರು ಕರುಣೆ ತೋರಿ ತಾವಾಗಿ ನನ್ನನ್ನು ಬಿಡಬೇಕಲ್ಲದೆ ಬೇರೆ ದಾರಿ ತೋರದು. ಹೀಗಾಗಲು ನನ್ನ ಅಪರಾಧವು ಕ್ಷಮಿಸ ತಕ್ಕುದುದೇ? ಸ್ವರ್ಲೋಕಸ್ತ್ರೀಯಾದ ಆ ಮಹಸೀಯಳಲ್ಲಿ ಮನಸೋತು ಅವಳನ್ನು ಒಯಿಸಿ ಇಲ್ಲಿವರಿವಿಗೆ ಬಂದಿರುವ ಕೆಲಸವೆಂತಹುದು! ಅಲ್ಲದೆ ಈ ಸತ್ಯಸ್ಥಾನದಲ್ಲಿ ಪಕ್ಷಪಾತಕ್ಕೆ ಎಡೆಯಿಲ್ಲವು. ತಮ್ಮ ಬೇಸರಿಕೆಯಂ ದೂರೀಕರಿಸಿ ಕಳೆದು, ಸುಖಪ್ರೀತಿಗಳಿಗೆ ಮುಖ್ಯ ಪಾತ್ರಳಾಗಿದ್ದ ಬಲೆಗೂ ತಕ್ಕ ಶಿಕ್ಷೆಯನ್ನು ಕಲ್ಪಿಸಿರುವರು. ಅಯ್ಯೋ, ಮುಗ್ಧೇ! ನನಗೋಸುಗ ಸ್ವರ್ಗಸಿರಿಯನ್ನೂ ಲೆಕ್ಕಿಸದೆ ಪಕ್ಕಗಳನ್ನೂ ಕಳೆದುಕೊಂಡು ನಿತ್ಯದುಃಖಕ್ಕೆ ಭಾಜನಳಾದೆಯಾ! ಎಲ್ಲಿರುವೆ? ನಿನಗೆನ್ನೊಳಿರುವ ಮಮತೆಯ ಪರಿಣಾಮವು ಏನಾಯಿತು? ಮುಂದೆ ನಿನ್ನಂತಹ ಸ್ತ್ರೀಯನ್ನು ಕಾಂಬೆನೇ? ಹಲವು ಉಪಾಯಗಳಿಂದ ನನ್ನನ್ನು ತಪ್ಪಿಸಿ ಕಳುಹಿಸುವೆಯಾ? ಪ್ರಜೆಪರಿವಾರಗಳ ಸಾವಿರಾರು ಧನ್ಯವಾದಗಳನ್ನು ಪಡೆಯಲೆಳಸುವೆಯಾ? ಮನ್ಮಥನೇ! ಕ್ಷಣಕಾಲದೊಳಗೆ ಪ್ರಾಣಿಗಳಿಗೆ ಎಂತಹ ಸಂಪತ್ತು ವಿಪತ್ತುಗಳನ್ನು ತೋರಿಸುವೆ! ಅಭಿಪ್ರಾಯವಿಲ್ಲದ ಬಾಲೆಯರ ಸರಳದೃಷ್ಟಿಯು ಸ್ವಲ್ಪ ಹೊತ್ತು ಕಳೆಯಲು ನಿನ್ನ ದೆಸೆಯಿಂದಾಗಿ, ಇಂಗಿತವನ್ನು ತೋರ್ಪಡಿಸುವಂತೆ ಮೆಲ್ಲಮೆಲ್ಲನೆ ವಕ್ರವಾಗುವುದು. ಇದ್ದದ್ದಿದ್ದಂತೆಯೇ ಪರಸ್ಪರಾನುರಾಗವು ತಲೆದೋರುವುದು, ಆ ಅನುರಾಗವು ಸ್ವಲ್ಪ ಸಮಯದಲ್ಲಿಯೇ ಬಲಿತು ತಡವಿಲ್ಲದೆ ಅಪಾರವಾದ ದುಃಖದಲ್ಲಿಯೋ ಸುಖದಲ್ಲಿಯೋ ತೇಲಾಡಿಸುವುದು! ಅಹೋ! ದೈವಗತಿಯ ಪರಿಣಾಮವೇ! ನಾನು ಆನೆಸೇನೆಗಳನ್ನು ಬಿಟ್ಟು ಜಿಂಕೆಯನ್ನಟ್ಟುತ್ತಾ ಘೋರಾರಣ್ಯವ

ನ್ನೊಳಹೊಕ್ಕು, ಆ ಸ್ತ್ರೀಯಲ್ಲಿ ಏಕೆ ತುಟಿಯೆತ್ತಿದೆ? ಇಲ್ಲಿ ಸ್ವರ್ಗದಲ್ಲಿಯೂ ಊರ್ವಶಿಯ ಮಾತುಮೀರಿ ತೋಪಿಗೇಕೆಂದು ಬಂದೆ? ಇರಲಿ. 'ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ' ಎಂಬಂತೆ ಅವರವರ ಸುಕೃತ ದುಷ್ಕೃತಗಳ ಫಲಗಳು ಅವರವರನ್ನೇ ಸೇರದಿರದು. ಆದರೆ ಮನುಷ್ಯರು, 'ಸುಖವು ತಮ್ಮ ಪೌರುಷ ಪ್ರಯತ್ನದಿಂದೊದಗಿಸಿಕೊಂಡುದೆಂದೂ ದುಃಖಬಂದಾಗ ಮಾತ್ರ ದೈವಗತಿ ಎಂದೂ ಉಸುರುವರು. ಅದು ಶುಧ್ಧಾಬದ್ಧ. ಎರಡಕ್ಕೂ ಅವರ ಕರ್ಮವೇ ಕಾರಣವು. ಇದನ್ನನುಭವಿಸದೆ ಕೋಟ್ಯಂತರ ವರ್ಷಗಳಾದರೂ ಅದೇನೂ ಕುಂದದೆ ಇದ್ದಂತೆಯೇ ಇರುವುದು. ಕಾರಣ ನನ್ನ ದುಷ್ಫಲವನ್ನೂ ಆದಷ್ಟು ಉಂಡುಕಳೆವೆನು; ಮೇಲಾದರೂ ದೇವರಿಗೆ ದಯೆತೋರದೇ? ರಾತ್ರಿಯು ಹಗಲಿನ ಬುಡವಲ್ಲವೇ? ಇಳಿತವು ಭರತದ ಪೂರ್ವವಲ್ಲವೇ? ಕೃಷ್ಣಪಕ್ಷವು ಕಳೆಯದೆ ಶುಕ್ಲಪಕ್ಷವು ಬಂದೀತೆಂತು? ಇಂತೆಯೇ ದುಃಖವು ನಿಜವಾಗಿಯೂ ಸುಖದ ಪೂರ್ವಭಾವಿಯೇ' ಎಂದು ಬಗೆಬಗೆಯಾಗಿ ಯೋಚಿಸುತ್ತಿದ್ದನು. ಇಷ್ಟರಲ್ಲಿ ಪ್ರಾಣಿಮಾತ್ರಕ್ಕೆ ಸರ್ವೇಂದ್ರಿಯಗಳ ವಿರಾಮದಿಂದ ಸುಖಕಾರಣವಾದ ರಾತ್ರಿಕಾಲವು ಸಮೀಪಿಸಿತು.

ಪುರಂದರನು ಅಂದಿನ ಸಭೆಯಿಂದೆದ್ದು ಶಚಿಯೊಂದಿಗೆ ಅಂತಃಪುರ ಸೇರಿ, ನಿತ್ಯಾಹ್ನಿಕ ಮುಗಿದು ಆರೋಗಣೆಗೆ ಕುಳಿತುಕೊಳ್ಳುವ ಸಮಯ. ಯಾವ ಬಾಗಿಲ ಪಹರೆಯವರಿಗೂ ಗೋಚರಿಸದೆ ಓರ್ವ ಚರನು, ಪುರಂದರನ ಮುಂದೊಂದು ಓಲೇ ಸುರುಳಿಯನ್ನಿಟ್ಟು ತಿರಿಗಿಹೋದನು. ದೇವೇಂದ್ರನ ಮನಸ್ಸಿನಲ್ಲಿ ಒಂದೇ ತಡವೆ ಭಯವೂ ರೋಷವೂ ಅಡರಿದುವು!

ಮೇನಕೆಯು ಬಲು ಅಂಜುವ ಸ್ವಭಾವದವಳೆಂಬದು ಮಯನಿಗೆ ಗೊತ್ತು. ಅವಳ ಬಿಡಯದ ಬಳಿಯಲ್ಲಿಯೇ ಸೈನ್ಯವು ನೆಲೆಗೊಂಡಿತು. ಸೇನಾನಿಯು ಬಂದುನಿಂದನು. ಅವನ ಬೆನ್ನುಬಿಡದೆ ತಂಡತಂಡವಾಗಿ ಕಾಲಾಳುಗಳು ಬಂದುಮುತ್ತಿದುವು. ಮಯಕಲ್ಪಿತಗಳಾದ ಭಯಂಕರ

ಆಯುಧಗಳು,ಇವರಪ್ರತ್ಯಂಗಗಳಲ್ಲಿಯೂ ಝುಳಪಿಸುತಲಿದ್ದವು. ಚೌದಂತ ಮುಂಡಿತವಾದ ಐರಾವತವನ್ನು ಹಿಂಜರಿಸುವ ಆನೆಗಳು, ಪಾಲ್ಗಡಲಿನಲ್ಲಿ ಹುಟ್ಟಿದ ಉಚ್ಚೈಶ್ರವವನ್ನು ತಿರಸ್ಕರಿಸುವ ಕುದುರೆಗಳು, ಪುಷ್ಪಕದ ಭ್ರಾಂತಿಹುಟ್ಟಿಸುವ ಸಾವಿರಾರು ತೇರುಗಳು, ಇವೆಲ್ಲಾ ಸಾಲುಸಾಲಾಗಿ ಒರಲು, ಸಗ್ಗದಲ್ಲಿ ಮರಳೆರಚಲು ಎಡೆಕಡೆಗಳಿರವು.

ಈ ಮೂರ್ಬಲವು ವಾಸ್ತವವಾಗಿದ್ದರೆ ಸ್ವರ್ಗವು ಜರಿದುಬೀಳ ಬೇಕಿತ್ತು! ದಿಗ್ಗಜಗಳ ಮಸ್ತಕವು ಜಗ್ಗಿಸಿದಂತಾಗದಿರುತ್ತಿದ್ದಿಲ್ಲ. ಆದಿ ಶೇಷನು ಭಾರವೇರಿ ತಲೆಯನ್ನು ಮೂರ್ಪಡಿಸಲು ಭೂಕಂಪವಾಗಲೇ ಬೇಕಿತ್ತು. ಭೂಮಿಯು ಬಾಯ್ದೆರೆಯದಿರುವುದು ಹೇಗೆ? ಕುಲಾಚಲಗಳು ಬಿಸಿದು ಬೀಳದಿರುವುದು ಅಸಂಭವ. ಸಮುದ್ರಗಳು ಉಕ್ಕೇರಿ ಕದಡಿ ಮಗುಚುವುದೇನಾಶ್ಚರ್ಯ! ಕಗ್ಗಲ್ಲುಗಳು ಇದಿರುಬದುರಾಗಿ ಜಾರಿ ಪುಡಿ ಗುಟ್ಟುವುದೇನು ವಿಚಿತ್ರ! ಸೂರ್ಯಚಂದ್ರರುದುರುವುದೇನು ಚೋದ್ಯ! ಸಮುದ್ರದಂತೆ ಕಣ್ಣುಹಾಯದ ಪಾಳಯವನ್ನು ಕಂಡು, ಪುರಜನರು ಏಕದಾ ಅಕಾಲ ಮೃತ್ಯುವು ಒದಗಲು ಬಗೆ ಏನೆಂಬುದನ್ನು ಅರಿಯದೆ, ಅವರವರ ಮನೆಗಳಲ್ಲಿ ಗೋಳಿಡುತ್ತಿದ್ದರು.

ಓಲೆಯನ್ನು ಬಿಚ್ಚಿ ನೋಡಿದರೆ ಎರಡು ಪಂಕ್ತಿ ಬರೆದಿತ್ತು. ಅಪರಿಚಿತನಾದ ಈ ದೂತನಂತೆಯೇ ದೇವರಾಜನಿಗೆ ಅಪರಿಚಿತವಾದ ಆ ಬರಹ! ಅದನ್ನು ಓದಿದನು. 'ಕಣ್ಮುಳಿಗರೆಸಿ ಸಗ್ಗಸಿರಿಯಂ ಸೆರೆಪಿಡಿಯೆ ಶತ್ರುರಾಹುತರಮರಾವತಿಯಂ ಮುತ್ತುವರ್, ಕೆಚ್ಚಿರೆ ರಭಸದಿಂ ರಣಾಜಿ ರಕ್ಕಣೆಯಪ್ಪುದು' ಎಂದು ಅದರಲ್ಲಿ ಬರೆದಿತ್ತು. ಇದರ ಹಿಂದು ಮುಂದೇನೂ ತೋರದು! ಆಲೋಚನೆಯಲ್ಲಿ ನಿಪುಣರಾದ ಬೃಹಸ್ಪತ್ಯಾ ಚಾರ್ಯರೂ ರಣಧೀರರಾದ ಸಪ್ತದಿಕ್ಪಾಲಕರೂ ತಮ್ಮ ತಮ್ಮ ಮನೆ ಯನ್ನು ಸೇರಿರುವರು. ಸಮೀಪದಲ್ಲಿ ಶಚಿಯಲ್ಲದೆ ಮತ್ತಾರೂ ಇಲ್ಲ.

ಇಷ್ಟರಲ್ಲಿ ಪುರಜನರ ಧೈರ್ಯವನ್ನು ಹೀರುವಂತೆ, ಮೂರ್ಬಲವು ಯುಗಪತ್ ಧನುಸ್ಸಿನ ನೇಣನ್ನು ಸೆಳೆಸೆಳೆದು ಬಿಡತೊಡಗಿತು! ಈ ಧನು ಷ್ಟಾಂಕಾರವು ಪುರಜನರ ಸ್ಥೈರ್ಯದ ಸರ್ವಸ್ವವನ್ನು ಅಪಹರಿಸಿತು! ಬಾಲ

ಕರಂತೆಲ್ಲರೂ ರಕ್ಷಕರನ್ನು ಮೊರೆಯಿಟ್ಟರು. ಸ್ತ್ರೀಯರು ಅಲ್ಲಲ್ಲಿ ಪತಿ ಪುತ್ರರನ್ನು ಬಿಟ್ಟೋಡುವ ದಾರಿಕಾಣಲು ಎಡೆಕಂಡಿಲ್ಲ. ಕೊರಳಿನ ನಿತ್ಯಾಲಂಕಾರವಾದ ಏಕಾವಲಿಯು ಕಡಿದು ಅಂಗಣದಲ್ಲಿ ಬಿದ್ದು ಹೊರಡ್ಸ ತಲಿತ್ತು. ಧೇನುಗಳು ಬಾಲವೆತ್ತಿ 'ಅಮ್ಮಾ!' ಎಂದೊದರುತ್ತಾ ದಿಕ್ಕೆಟ್ಟು ಓಡುವುವು. ಕರುಗಳು ಮೈಯಿಂದ ತಾಯಿಯನ್ನು ಒತ್ತುತ್ತಾ ಬಸುರಡಿ ಯಲ್ಲಿ ಅಡಗಿ ನಿಲ್ಲುವುವು. ಯೋಧರ ಧನುಷ್ಟ್ಯಾಂಕಾರ, ವೀರರ ಸಿಂಹ ನಾದ, ಆನೆಗಳ ಬ್ರಂಹಿತ, ಕುದುರೆಗಳ ಹ್ರೇಷಿತ, ರಥನೇಮಿಯ ಕಿರ್ರೆಂಬ ಶಬ್ದ, ತುರುಕರುಗಳ ಕೂಗು, ಹೆಂಗಸರ ಬೊಬ್ಬಾಟ, ಮಕ್ಕಳ ಅಳುವು, ಎಲೆ ದೂಳುಗಳನ್ನು ಸುಳಿ ಹಾರಿಸುವ ಬಿರುಗಾಳಿ, ಇವುಗಳ ಗೊಂದಲ ದಿಂದ ಸ್ವರ್ಗವು ಆವರಿಸಲ್ಪಟ್ಟಿತು ರಾತ್ರಿಯ ಕಾಲ. ಭಯಾನಕಶಬ್ದ ಗಳು ಇಮ್ಮಡಿಯಾಗಿ ಕೇಳಿಸಿ ಪುರಜನರಲ್ಲಿ ಹಾಹಾಕಾರವನ್ನೆಬ್ಬಿಸಿತು!

ಈ ಧ್ವನಿಕೇಳಲು ಪತ್ರವನ್ನೋದಿ ಧೈರ್ಯಗೆಟ್ಟ ಸುರೇಂದ್ರನ ಹೃದ ಯಕ್ಕೆ ಶೂಲ ನೆಟ್ಟಂತಾಯಿತು. ಬಂದು ನೋಡಿದನು. ಹಿಂದೆ ದೇವಾ ಸುರರ ಕಾಳಗದಲ್ಲೂ ನೇರದ ಸೈನ್ಯ! ದೂರದಲ್ಲಿ ಊರ್ವಶಿಯು ಖಿನ್ನಳಂತೆ ನಿಂದಿದ್ದಳು.

ಬಿಡುಗಣ್ಣರೊಡೆಯನು ಆಕೆಯನ್ನು ಕೈ ಸನ್ನೆಯಿಂದ ಕರೆದನು. 'ಊರ್ವಶಿಯೇ ಈ ದುರ್ಗತಿಯಿಂದ ಸ್ವರ್ಗವು ಪಾರಾಗುವುದಿದೆಯೇ! ಈ ಕಡಲ ದಾಟುವುದು ಸರ್ವತಃ ದುರ್ಘಟವೇ ಸರಿ!! ಕಾರಣ ನಾನ. ಅಂದಿನಂತೆ ಕೆಲಕಾಲ ಭೂಮಿಯಲ್ಲಿ ಮೈ ಮರೆಯಿಸಿ ಇರುವೆನು. ನೀನು ಈ ಸಮಾಚಾರವನ್ನು ರಾಣಿಗೆ ತಿಳುಹಿ, ಅವಳನ್ನು ಜಾಗರೂಕತೆಯಿಂದ ಕಾದಿರು' ಎಂದನು.

'ದೇವ ದೇವನೆ, ಇದೆಂತಹ ಷಂಡರ ಮಾತನ್ನಾಡುವೆ? ತ್ರಿಲೋಕಾ ಧಿಪನಾದ ನಿನಗೆ ಈ ಮಾತು ಕುಂದುದೋರದೇ? ಬಂದ ಶತ್ರುಗಳಿಗಂಜಿ ಹಿಮ್ಮೆಟ್ಟುವುದಿದಾವ ಅಂದ? ಪಲಾಯನವಾಗಿ ಅಡಗುವುದೇನು ಚಂದ? ನನ್ನಂತೆ ನೀನೂ ಸ್ವರ್ಗಲೋಕಕ್ಕೆ ಕೊರತೆ ತರುವೆಯಾ? ಈ ನಿನ್ನ ಮಾತು ಕೇಳಿದ ಹೇಡಿಗಳು ಹೀಯಾಳಿಸರೇ? ಶೂರಧೀರನಾದ ನೀನ್ನೇ

ಇಂತು ಲಂಡಿಗಳಂತಾಡುವುದಾದರೆ, ಮುಂದೆ ನಮ್ಮಂತಹರಿಂದ ರಾಣಿಯನ್ನು ಕಾದಿರಲು ಸಾಧ್ಯವೆ? ಶತ್ರುರಾವೃತರಿಂದಾವರಿಸಲ್ಪಟ್ಟ ರಾಜಧಾನಿಯಲ್ಲಿ ರಮಣೀ ರತ್ನಳಾದ ರಾಣಿಯನ್ನು ಕಾವುದೆಂದರೆ ಚಿಕ್ಕ ಪುಟ್ಟ ಮಾತಲ್ಲ! ನಿನ್ನ ಭುಜಗಳಂತಿರುವ ಅಸಹಾಯ ಶೂರರೆಂದೆನ್ನಿಸಿದ ದಿಕ್ಪಾಲರೆಲ್ಲಿ? ನನ್ನ ಪಕ್ಕಗಳನ್ನೂ ತೆಗೆಯಿಸಿದೆ; ಅವಿರುತ್ತಿದ್ದರೆ ಕೈಲಾದಷ್ಟು ಯತ್ನಿಸುತಲಿದ್ದೆ. ಬೆಟ್ಟು ತೋರಿದ ಕೈಯಿಂದಾದರೂ ಏನು? ಸೌಟಿರಲು ಕೈ ಸುಟ್ಟುಕೊಳ್ಳಬೇಕೇ? ಇನ್ನಾದರೂ ನನ್ನ ಅಭೀಷ್ಟ ವರವನ್ನು ದಯೆಪಾಲಿಸುವೆನೆಂದು ಭಾಷೆಕೊಟ್ಟರೆ, ಸೈನ್ಯವನ್ನು ಏಕ್ಕ್ಯಪಾಲುಮಾಡುವುದು ದುಸ್ಸಾಧ್ಯವೆಂದರಿಯಲಾಗದು. ಎದುರಾದರೆ ಮಣ್ಣುಪಾಲು ಮಾಡುವುದು ಕಷ್ಟವಾಗದು. ಸಹಾಯ ಮುರಿದರೆ ಒಲಿಸ್ಪರೂ ವಿಪತ್ತಿಗೊಳಗಾಗಲೇ ಬೇಕು. ಹೇಗೂ ಇರಲಿ; ಮುಂದೆ ಧೈರ್ಯ ತಾಳೆಂದು' ಊರ್ವಶಿಯು ಸಮಾಧಾನಗೈದಳು.

ಸುರಪತಿಯು ಆಶ್ಚರ್ಯಚಕಿತನಾಗಿ 'ಗೆಳತಿಯೇ! ಆಣೆಇಟ್ಟು ಹೇಳಿದ್ದೇನೆ. ಮನಸ್ಸಿಗೆ ಬಂದುದನ್ನು ಕೇಳಿಕೊ. ಸ್ವರ್ಗವು ಒಂದೊವೆ್ಮಗೆ ನಿನ್ನ ಋಣಕ್ಕೆ ಪಾತ್ರವಾದರೂ ಒಪ್ಪುವೆನು. ಬಂದ ಭಯವನ್ನು ಬಯಲ್ಮಾಡು. ಮಹೋಪಕಾರವೆಂದೂ ಮರೆತು ಹೋಗದು' ಎಂದನು. ಆದರೆ ವಿಚಾರ ಚತುರನಾದ ಪುರುಹೂತನೂ ಕಳವಳಗೊಂಡು ಈ ಕಪಟ ತಂತ್ರವು ಊರ್ವಶಿಯ ಬುದ್ಧಿಚಾತುರ್ಯದಿಂದ ಪರಿಕಲ್ಪಿತವೆಂದು ಅರಿಯದೆ ಹೋದನು.

ಊರ್ವಶಿಯು ಒಡನೆ "ಕೃಷ್ಣಾಟವಿಯಲ್ಲಿ ಸಿಲ್ಲಿಸಿದ ಆ ರಾಯನನ್ನು ಎನ್ನ ಅಧೀನಕ್ಕೆ ಒಪ್ಪಿಸಿಕೊಡು. ಶೌರ್ಯೌದಾರ್ಯಗಳಿಂದ ಆತನು ಬಹಳ ದೂರವಿರುವನೆಂದರಿಯ ಬೇಡ. ಆತನ ಪರಾಕ್ರಮವೀಗಲೇ ವ್ಯಕ್ತವಾಗುವುದು. 'ಕೈ ಸೆಲ್ಲಿಗೆ ಕೈ ಪಿಡಿಬೇಕೇ?' ಎನಲು ಅದಕ್ಕ ಸುಮೋದಗೊಂಡು ವಾಸವನು ರಾಜನನ್ನು ಕರೆಯಿಸಿ ಊರ್ವಶಿಗೆ ಕೊಟ್ಟನು.

ಯುದ್ಧ ಸನ್ನದ್ಧವಾದ ಸೈನ್ಯವನ್ನು ನೋಡಿದ ಮಾತ್ರಕ್ಕೆ ರಾಜನ

ಬುದ್ಧಿಯು ಸ್ವಾಭಾವಿಕವಾಗಿ ರೋಷ ತಾಳಿತು. ಕ್ರೋಧಪರವಶನಾದ ರಾಜನು ಇಂದ್ರನನ್ನೂ ಕಾಣದೆ ಬಿಲ್ಲಿಗೆ ಹೆದೆಯೇರಿಸಿದನು. ಹುಬ್ಬು ಗಂಟಿಕ್ಕಿತು. ಮುಖದೊಂದಿಗೆ ನೇತ್ರಗಳೂ ಕೆಂಪಾದುವು. ಬಾಹು ಮೂಲವು ಉಬ್ಬಿತು. ಅದರೋಷ್ಠಗಳು ಪರವಶತೆಯಿಂದ ನಡುಗ ತೊಡಗಿದವು. ಸರ್ವಾಂಗವು ಹೊಂಪುಳಿಸಿತು. 'ಜಯ ಭೀಮ ಸೇನ' ಎಂದನ್ನುತ್ತಾ ಇದುರು ಹರಿದನು.

ಈ ಮಹಾರಾಜನನ್ನು ನೋಡಿದ ಸೈನ್ಯವೆಲ್ಲವೂ ಈತಗೆ ಎರಗಿ ಎಲ್ಲಿ ಅಡಗಿತೆಂದು ದೈವಕ್ಕೆ ಗೊತ್ತು! ಪ್ರಚಂಡವಾದ ಗಾಳಿಯಿಂದ ತೂರಲ್ಪಟ್ಟ ಮೋಡಗಳಂತೆ ಅವು ಚದರಿದುವು. ಸ್ವರ್ಗವು ರಾಹುಮುಖದಿಂದ ಬಿಡುಗಡೆ ಹೊಂದಿದ ಚಂದ್ರನಂತೆ, ಕ್ರಮಕ್ರಮವಾಗಿ ಉಜ್ವಲನಾಗುತ್ತಾ ಬಂತು. ಆ ಲೋಕವೇ ಹೊಸತಾಗಿ ಕಾಣಿಸಿತು. ಅಮರಪತಿಯು ಪುರೂರವಗೆ ಮೆಚ್ಚಿ, ಹಸ್ತಲಾಘವವನ್ನಿತ್ತು, ಅಪ್ಪಿ, ಸಖ್ಯವನ್ನು ಕೈಗೊಂಡನು. ದೇವತೆಗಳು ಸಂತೋಷಭರಿತರಾಗಿ ರಾಜನಿಗೂ ಊರ್ವಶಿಗೂ ಬಗೆಬಗೆಯಿಂದ ಹರಸಿದರು. ಅಗ್ನಿಹೋತ್ರಿಯು 'ಪ್ರತ್ಯುತ್ಪನ್ನಮತಿಃ ಸ್ತ್ರೀಣಾಂ' ಎಂದುಸುರಿದ ಕವಿಯು ಸ್ತ್ರೈಣನಲ್ಲವೆಂದನು. 'ಸ್ತ್ರೀಣಾಂ ಕೋವೇದ ಚೇಷ್ಠಿತಂ' ಎಂಬ ಮಹಾತ್ಮನೂ ಸುಳ್ಳಾಡದವನೆಂದು ಭಾವಿಸಿದನು. ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ಸ್ವಲ್ಪಸಮಯ ಸರಿಯಲು 'ದೇವಾಧಿದೇವನೇ! ಸ್ವಲ್ಪಕಾಲ ಮಾನಸ ಸರೋವರದ ಪ್ರಾಂತ್ಯದೊಳಿದ್ದು, ಕೆಲವು ಸಮಯಗಳಲ್ಲಿ ತಿರಿಗಿ ಸ್ವರ್ಗಕ್ಕೆ ಬಂದು ಸೇರುವೆನು. ನನ್ನ ಗರಿಗಳೊಡನೆ ಅಪ್ಪಣೆಯನ್ನನುಗ್ರಹಿಸಬೇಕೆಂದು' ಊರ್ವಶಿಯು ಬೇಡಿಕೊಂಡಳು.

ರಾಜನು ತನ್ನ ಮೂರು ಶಕ್ತಿ, ಆರು ಗುಣ, ಏಳು ಅಂಗ ಮುಂತಾದ ಸಕಲ ಸಾಮ್ರಾಜ್ಯದಲ್ಲಿಯೂ, ಸುಭಿಕ್ಷೆಯಾಗುವಂತೆ ಮಹೇಂದ್ರನಲ್ಲಿ ಬೇಡಿಕೊಂಡನು. ಊರ್ವಶಿಯು ದೇವತೆಗಳ ಪ್ರಸಾದಕ್ಕೆ ಪಾತ್ರನಾದ ರಾಜನನ್ನು ಭೂತಳಕ್ಕೆ ಹೊರಡುವಂತೆ ಬಿನ್ನಯಿಸಿಕೊಂಡಳು. ರಾಜನು ಊರ್ವಶಿ ಸಮೇತವಾಗಿ ವಿಮಾನವೇರಿ,

ಮೋಹಿನಿಯ ವನದ ಮಾರ್ಗವಾಗಿಯೇ ಇಳಿದು, ಆ ಅಚ್ಛೋದದ ಬಳಿಗೆ ಬಂದನು. ಪಾದರಕ್ಷೆಯೂ, ಕುದುರೆಯೂ, ಕಾಣಿಸಲಿಲ್ಲ. ಕುದುರೆಯ ಧೌರಂಧರ್ಯವನ್ನು ಯೋಚಿಸಿ ಬಲು ಕನಿಕರ ಪಟ್ಟನು.

## ೧೫. ಸಂತೋಷ.

ಈಗ ಅರುಣನು ಕೆಂಪು ಪಸರಿಸುತ್ತಾ ಪ್ರಾಚೀ ಸ್ತ್ರೀಯನ್ನಲಂಕರಿಸಲು ಉದಯಕ್ಕೆ ಬರತೊಡಗಿರುವನಷ್ಟೆ. ಈ ಕೆಂಬಣ್ಣವು ಮಹರ್ಷಿಗಳ ಮಂತ್ರಪೂತವಾದ ಜಲಾರ್ಘ್ಯೆಯಿಂದ ಸೀಳಿದ ಮಂದೇಹ ದೈತ್ಯರ ಶಿರಸ್ಸಿನಿಂದುಕ್ಕಿ ಚೆಲ್ಲಿದ ರಕ್ತವೆಂದರೂ ಕೂಡುವುದು. ಪ್ರಾಣಿಮಂಡಲಕ್ಕೇನೇ ಮುದವನ್ನೀಯುವ ಆ ಹಗಲೊಡೆಯನ ತೇರನ್ನು ತಡೆಗಟ್ಟಿದ ಫಲವು ಮಂದೇಹರಿಗೆ ತಪ್ಪುವುದಾದರೂ ಹೇಗೆ? ರಾತ್ರಿ ತುಂಬಾ ಕಸರಿಗೊಂಡು ಎಡೆ ಹುಡುಕುತ್ತಾ ಮೆಲ್ಲಮೆಲ್ಲನೆ ಅಡಿಯಿಡುವ ಕಳ್ಳರಂತೆ, ಸುಖೋಪಭೋಗಕ್ಕಾಗಿ ವಿಲಾಸಿನಿಯರು ಬಿಡಿಸಿಟ್ಟ ವಸ್ತುಗಳ ಸುವಾಸನೆಯೊಂದಿಗೆ, ಅವರ ಮುಖೋಚ್ಛ್ವಾಸ ಗಂಧವನ್ನು ಅಪಹರಿಸಿ, ಮಂದಮಾರುತನು ನಿಶ್ಶಬ್ದವಾಗಿ, ಎಲೆಬಳ್ಳಿಗಳು ಅಲುಕದಂತೆ ಹದಹದವಾಗಿ ನಡೆದುಬರುವನು. ಚಂದ್ರನು ವಿರಹೋತ್ಕಂಠಿತೆಯರಾದ ಅಂಗನೆಯರ ಮುಖಮಂಡಲದಂತೆ ನಿಸ್ತೇಜನಾಗಿ ಮೊಗದೋರಲು ನಾಚಿ, ಕಡಲಲ್ಲಿ ಮುಳುಗಹೋಗಿರುವನು. 'ಸತಾಂ ಮಾನೇ ಮ್ಲಾನೇ ಮರಣಮಥವಾ ದೂರಸರಣಂ' ಎಂಬುದು ಅಭಿಯುಕ್ತರ ಉಕ್ತಿಯಲ್ಲವೇ?

ಕಾಲಜ್ಞಾನಿ ಕುಕ್ಕುಟವು ಜಗತ್ತನ್ನುದ್ದೇಶಿಸಿ, ಕರ್ಮಸಾಕ್ಷಿಯಾದ ಬಾನ್ಮಣಿಯು 'ಕೋ' ಉದಯಿಸುವನು; 'ಕರ್ತವ್ಯ ಕರ್ಮಗಳನ್ನಾಚರಿಸಲು ಎಚ್ಚರಗೊಳ್ಳಿರಿ' ಎಂದು ಉಸುರುವಂತೆಯೋ. ಸಣ್ಣ ಪುಟ್ಟ ಮಕ್ಕಳಿಗೆ ಅಕ್ಷರಗಳಲ್ಲಿ, ಹ್ರಸ್ವ, ದೀರ್ಘ, ಪ್ಲುತ ಭೇದಗಳನ್ನು ತಿಳಿಸಿ, ಇದು ಅಭ್ಯಾಸ ಸಮಯವೆಂದು. ಮುಂಜಾನೆ ಮುಂಜಾಗ್ರತೆ ಕೊಡುವಂತೆಯೂ, ಕೊ, ಕೋ, ಕೋ, ಎಂದು ಕೂಗತೊಡಗಿತು!

ಕಾಗೆಗಳು ದಿನರಾಜನನ್ನು ಮುಂಗೊಳ್ಳಲೆಂಬಂತೆ ತಂಡತಂಡವಾಗಿ ನಡೆಯುತ್ತಾ, ಪ್ರಿಯ ಜನರ ಸಂಕೇತ ಸ್ಥಳದಿಂದ ಗುಗು ಜನರಿಗೆ ಹೆದರಿ ಬೆದರಿ, ಪುಲ್‌ಪೊದರುಗಳ ಎಡೆ ಎಡೆಯಾಗಿ ನಡೆದುಬರುವ ಸಿತಗೆಯರಾದ ಸುಂದರಿಯರನ್ನು "ಅದಾರು?" ಎಂದು ಗದರಿಸುವಂತೆ ಒಮ್ಮೊಮ್ಮೆ ಕಾ, ಸಾ? ಕಾ, ಸಾ? (ಆರವಳ್? ಆರವಳ್?) ಎಂದೂ, ಮುಂದಾಗಿ ಎದ್ದು ಗೃಹಕೃತ್ಯವನ್ನು ಪೂರೈಸಿ, ಗಂಡನ ಎಚ್ಚರನ್ನೆದುರು ನೋಡುತ್ತಾ ಅವನಿಗಾಗಿ ಪೂರ್ಣಕುಂಭವನ್ನು ಕೈಯಲ್ಲಿ ಧರಿಸಿದ ಆ ಆಕೆಯು, ಪತಿವ್ರತಾ ಶಿರೋಮಣಿ ಎಂಬಂತೆ ಬಾರಿಬಾರಿಗೂ ಸಾ ಸಾ, ಸಾ ಸಾ, (ಅವಳವಳು, ಅವಳವಳು) ಎಂದೂ, ದಕ್ಷಿಣೆಯ ಬಡಹಾರವರು ಮುಂದಾಗಿ ತಮ್ಮ ಗುರುತನ್ನು ತಾವೇ ಹೇಳಿಕೊಳ್ಳುವ ಹಾಗೆ ಎಡೆ ಎಡೆ 'ಕಾ ಕಾ, ಕಾ ಕಾ, (ಕಾಗೆಗಳು,' ಕಾಗೆಗಳು.) ಎಂದೂ ತರತರವಾಗಿ ಧ್ವನಿಗೈಯುತ್ತಾ ಮೂಡಲೋಡಲಾರಂಭಿಸಿದುವು!

ಆಕಾಶ ಮಂಡಲದಲ್ಲಿ ಬಿಳುಪಾದ ಎರಡು ನಾಲ್ಕು ಚುಕ್ಕೆಗಳು ಮಾತ್ರ ಕಂಡುಬರುವುವು. ಹೆರವರನ್ನು ಪೀಡಿಸುತಿದ್ದ ಕಗ್ಗತ್ತಲೆಯು ರಾಜನು ಉದಯಕ್ಕೆ ಬಂದನೆಂದಂಜಿ ಓಡಲು ಎಡೆ ಸಿಗದೆ, ಚೋರರಂತೆ ಗಿಡಮರಗಳ ಅಡಿ ಸೇರಿ, ಅಲ್ಲಲ್ಲಿಯೇ ನಾಶವಾಗುತ್ತಲಿತ್ತು. ಚಕ್ರವಾಕ ಪಕ್ಷಿಗಳ ಕಣ್ಣುಗಳೊಂದಿಗೆ ಕಮಲವು ಬಾಯ್ಬಿರಿಯ ತೊಡಗಿತು. ಗೂಬೆಯ ದೃಷ್ಟಿಗಳೊಡನೆ ನೈದಿಲೆಯು ಮುಚ್ಚಲಾರಂಭಿಸಿತು. ಶಕುನಿಗಳು ಉಚ್ಚಾವಚ ಸ್ವರಭೇದಗಳಿಂದ ಚೀರ ತೊಡಗಿದವು. ತಾವರೆಗಳಲ್ಲಿ ಕೈದಿಗಳಂತೆ ಸಿಲುಕಿದ್ದ ಆರಡಿಗಳು ಝೇಂಕರಿಸುತ್ತಾ ಸಂತೋಷದಿಂದ ಉಡ್ಡೈಸುವುವು. ಕಾಡುಗಳಲ್ಲಿ ಹಬ್ಬಿದ ಬೆಂಕಿಯು ಕಳೆಗುಂದಿತು. ಘಾತುಕ ಪ್ರಾಣಿಗಳು ಅತ್ತಿತ್ತ ನೋಡುತ್ತಾ ಇಕ್ಕೆ ಸೇರುವುವು. ಅರಳಿದ ತಾವರೆಯ ಪರಿಮಳವು ಮೂಗಿಗೆಸೆಯಲು, ತರುಣರು ಹಂಸತೂಲಿಕಾತಲ್ಪವನ್ನು ಬಿಟ್ಟು ಹೊರಡುವ ಸಮಯ. ಋಷಿಗಳು ಮಿಂದು ಸಾಂಗವಾಗಿ ವೇದವನ್ನುಚ್ಚರಿಸುತ್ತಾ ತಂಡತಂಡವಾಗಿ ಹೋಗುವರು. ಋಷಿಪ್ನತಿಯರು ಸಾಕಿದ ಎರಳೆಮರಿಗಳ ಬಾಯೊಳಗೆ, ಮೊದುವಿರುವ ಹುಲ್ಲು ಚಿಗುರುಗಳನ್ನು ತುಂಬಿಸುವ ತಮ್ಮ ಬಾಲಕರನ್ನೊದರುತ್ತಾ

ಗಂಡಂದಿರ ಬೆನ್ನುಹಿಡಿದು ಬರುವರು. ಜಡೆಯಿಂದಿಳಿದ ತೀರ್ಥ ಜಲವು ಆಶ್ರಮದ ವರೆಗೂ ಸ್ವರ್ಗದ ದಾರಿಯಂತೆ ಕಾಣಿಸುತಲಿತ್ತು. ಆಶ್ರಮ ದಲ್ಲಿ ಪ್ರದಕ್ಷಿಣಾಕಾರವಾಗಿ ಹೋಮಧೂಮವು ಮೇಲಕ್ಕೆ ಪಸರಿಸುತ ಲಿತ್ತು. ಆರ್ಚಿತನಾದ ಅಗ್ನಿಯು ಕೈವಲ್ಯಕ್ಕೆ ಹೋಗಲು ಋಷಿಗಳಿ ಗಾಗಿ ಕಟ್ಟಿದ ಕಬ್ಬಿಣದ ಸುಳಿ ಮೆಟ್ಟಲುಗಳಂತೆ ತೋರುತ್ತಲಿತ್ತು.

ಅಷ್ಟಕ್ಕೆ ಸೂರ್ಯನು ಉದಯಾಚಲದಲ್ಲಿ ಕಿರಣಗಳನ್ನು ಹಬ್ಬಿ ಸುತ್ತಾ ತಲೆದೋರಿದನು; ಕಳ್ಳಕಾಕರ ಮನಸ್ಸಿನಲ್ಲಿ ಭಯಸ್ತಂಭವವನ್ನು ನೆಟ್ಟನು; ವಿಟಜನರ ಚಿತ್ತದಲ್ಲಿ ಬೇಸರವನ್ನು ಹುಟ್ಟಿಸಿದನು; ತಂತಮ್ಮ ಕೆಲಸಗಳಲ್ಲಿ ಜಾಗ್ರತೆಯಿರುವಂತೆ ಜನರಿಗೆ ಎಚ್ಚರಿಸಲೋಸುಗ 'ಕರ್ಮ ಸಾಕ್ಷಿ' ಎಂಬ ಹೆಸರನ್ನು ವಹಿಸಿ, ಇಂದ್ರದಿಗ್ರಮಣಿಯ ಸ್ವರ್ಣಕುಂಡಲ ದಂತೆ ಪರ್ವತಾಗ್ರದಲ್ಲಿ ಕಾಣಿಸಿಕೊಂಡನು. ಕುಲಸ್ತ್ರೀಯರು ತಮ್ಮ ಪ್ರಾತಃಕೃತ್ಯಗಳನ್ನಾಗಿಸಿ, ಮೃದುಮಧುರವಾಗಿ ಕೃಷ್ಣಲೀಲೆಯನ್ನು ಹಾಡುತ್ತಾ ಮೊಸರುಕಡೆಯಲು ಕುಳಿತಿರುವರು. ಘನಶ್ಯಾಮಲ ಶ್ರೀ ಕೃಷ್ಣನು ಪಾಲ್ಗಡಲಿನಿಂದ ಅಮೃತದಂತೆ ಉದಯಿಸುವ ಬೆಣ್ಣೆಯನ್ನು ಪಿಸುಕೊಳ್ಳುವುದಕ್ಕಾಗಿ, ಅಂಬೆಗಾಲಿನಿಂದ ಹರಿದುಬಂದು ದಧಿಭಾಂಡದ ಬಳಿ ಕುಳಿತು, ತೊದಲುನುಡಿಯಿಂದ "ಅಮ್ಮಾ ತಾ, ಹಸಿದಿರುವೆನು." ಎಂದು ಬೇಡಿ ತಿನ್ನದಿರನು ಎಂಬಂತ್ತಿತ್ತು.

ರಾಜನು ಊರ್ವಶಿಯ ಹೆಗಲಲ್ಲಿ ಕೈಚಾಚಿ ನಿಂದು, ಇನ್ನೂ ಪರಿವಾ ರವನ್ನು ಯೋಚಿಸುತ್ತಿರುವನು. ಅಷ್ಟರಲ್ಲಿ ಕುದುರೆಯನ್ನು ತೆಗೆದುಕೊಂಡು ಈರ್ವರು ರಾಜಪುರುಷರು ಆಶ್ರಮದಿಂದ ಹೊರಟು ಬರುವುದನ್ನು ಕಂಡನು ಒಬ್ಬನು ಕುದುರೆಯ ಪ್ರಗ್ರಹವನ್ನು ಹಿಡಿದುಕೊಂಡು ಮುಂದಾಗಿ ಬರುವನು. ಮತ್ತೋರ್ವನು ಸರ್ವಾಯುಧ ಮಂಡಿತನಾಗಿ ಕಶಿಗೊಂಡು ಅದನ್ನು ಅಟ್ಟುತ್ತಲಿರುವನು. ಇವರ ಪಾದವಿನ್ಯಾಸವು ಏನೋ ಒಂದು ವಿಧದ ಆಲೋಚನೆಯನ್ನು ತೋರ್ಗೊಡಿಸುವಂತಿತ್ತು. ಮೆಲ್ಲಮೆಲ್ಲನೆ ಅಡಿ ತೆಗೆಯುವರು; ಅಲ್ಲಲ್ಲಿ ನಿಂದುಹೋಗತಕ್ಕ ದಿಕ್ಕನ್ನು ಗುರ್ತಿಸುವರು!

ರಾಜನು ಇವರನ್ನು ಪರೀಕ್ಷಿಸಿ ಇವರು ತನ್ನ ಮಂತ್ರಿಸೇನಾನಿಗಳು

ಎಂದು ಊರ್ವಶಿಗೆ ಹೇಳಿದನು. ಅವರಿಗೆದುರಾಗಿ ವಿಮಾನವನ್ನು ತಿರುಗಿಸಿದನು. ಸಮೀಪಿಸಲು ಸಚಿವ ಸೇನಾಪತಿಗಳು ರಾಣಿಯೊಡಗೂಡಿ ರಾರಾಜಿಸುವ ಮಹಾರಾಜನನ್ನು ಅವಲೋಕಿಸಿದರು. ನಮಿಷಕ್ಕೈಗಟ್ಟಿನಿಂದು ಊರ್ವಶಿಯನ್ನೇ ನೋಡತೊಡಗಿದರು. ಗುರುತಿಸಲಾಗಲಿಲ್ಲ. "ಮೋಹಿನಿಯೇ ಇರಬೇಕು" ಎಂದು ನಿಶ್ಚಯಪಟ್ಟರು. ಊರ್ವಶಿಯು ವಿಮಾನದಲ್ಲಿ ಕುಳ್ಳಿರೆಂದು ಆಜ್ಞಾಪಿಸಿದಳು. ಮಂತ್ರಿಯು ಕುಳಿತನು. ಸೇನಾನಿಯು ಕುದುರೆಯನ್ನು ಹಿಡಿದುಕೊಂಡು ಒಂದೆಡೆಯಲ್ಲಿ ನಿಂದನು. ವಿಮಾನವು ಊರುಮೊಗವಾಗಿ ನಡೆಯಿತು. ರಾಜನು ಮಧ್ಯಮಾರ್ಗದಲ್ಲಿ ಪ್ರೇಮದಿಂದ ತನ್ನ ಎರಡು ಭುಜಗಳಂತಿರುವ ಇವರಿಬ್ಬರಿಗೆ ತನಗೆ ಸಂಭವಿಸಿದ ದೇವರಾಜನ ಸಂದರ್ಶನ, ಈ ಊರ್ವಶಿಯ ಬುದ್ಧಿ ಕೌಶಲ್ಯದಿಂದ ಬಂದಿಖಾನೆಯ ಬಿಡುಗಡೆ, ಸ್ವರ್ಗಸಿರಿಯ ಸೊಬಗು, ಹೀಗೆ ಸಂಪದ್ವಿಪತ್ತನ್ನು ಒಂದೊಂದಾಗಿ ಹೇಳಿದನು. ಪಟ್ಟಣವು ಸನ್ನಿಹಿತವಾಯಿತು, ಪ್ರಜೆ ಪರಿವಾರಗಳು ನರಪತಿಯನ್ನು ಕಾಣದೆ ಕಂಗೆಟ್ಟಿದ್ದರು. ಮಹಿಷಿಯರು ಪ್ರಾಯೋಪವೇಶ (ನಿರಶನದಿಂದ ಆತ್ಮತ್ಯಾಗ ಮಾಡುವಿಕೆ) ಮಾಡಲು ಸಿದ್ಧರಾಗಿದ್ದರು.

ರಾಜನು ಊರ್ವಶಿಯ ಕೈಹಿಡಿದುಕೊಂಡು ಮಂತ್ರಿಸೇನಾನಿಗಳೊಂದಿಗೆ ವಿಮಾನದಿಂದಿಳಿದು, ರಾಜಮಾರ್ಗದಲ್ಲಿ ಬರುತ್ತಿದ್ದನು. ಜನರು ಉಪ್ಪರಿಗೆ, ಕಡೆಕಟ್ಟು, ಮೇಲ್ಮಹಡಿ, ಪಾಗಾರ, ಮುಂತಾದ ಏರುತಳಗಳಲ್ಲಿ ನಿಂತು ಗಂಧವನ್ನು ಚೆಲ್ಲುತ್ತಿದ್ದರು; ವೃದ್ಧ ಮಹಿಳೆಯರು ಅಕ್ಷತೆ ತಳಿವರು; ಬ್ರಾಹ್ಮಣರು ಆಶೀರ್ವದಿಸುವರು; ವಾರಾಂಗನೆಯರು ನರ್ತಿಸುತ್ತಾ, ಹೂಗಳನ್ನು ಬಿಸುಡುವರು; ರೈತರೂ ಸಾಹುಕಾರರೂ ಸಂಪನ್ನರೂ ಬೀದಿಯ ಎರಡೂ ಪಾರ್ಶ್ವಗಳಲ್ಲಿ ರತ್ನಖಚಿತವಾದ ಚಿನ್ನದ ಭಾಜನಗಳೊಳಗೆ ಪುಷ್ಪಫಲಗಳನ್ನು ತುಂಬಿಹಿಡಿದು ನಿಂದಿರುವರು! ಕೆಲ ಮುದಿಮುತ್ತೈದೆಯರು ಅರಳುಮಳೆ ಗರೆಯುವರು; ಇವುಗಳ ಹೊದಿಕೆಯಿಂದ ಧೂಳಿಯು ಕಾಣದು. ಪ್ರತಿಮನೆಗಳ ದ್ವಾರಗಳಲ್ಲಿಯೂ ತುಂಬಿದ ಚಿನ್ನದ ಕಲಶಗಳು ಇರಿಸಲ್ಪಟ್ಟಿದ್ದುವು. ಸ್ವಸ್ತವು ತಲೆಯಮೇಲೆ ಇಕ್ಕೈ

ಗಳನ್ನು ಚಾಚಿ ನಮಿಸುತ್ತಿತ್ತು. ವಾದ್ಯಘೋಷವು ದಿಗ್ಗಜಗಳ ಕರ್ಣ ರಂಧ್ರಗಳಲ್ಲಿ ಅಡಗುತ್ತಲಿತ್ತು. ಪಟ್ಟಣದ ಸುತ್ತಲಿನ ರಾಜಮಾರ್ಗದ ಭಾಟಾರಸ್ತೆಗಳು ಸಿಂಗರಿಸಲ್ಪಟ್ಟಿರುವುವು.

ರಾಜನು ಪುರದ್ವಾರದಲ್ಲಿ ದಾಸದಾಸಿಯರೊಡನೆ ನಿಂತಿದ್ದ ರಾಣಿಯಿಂದ ಪಾದಪ್ರಕ್ಷಾಳನೆ ಮಾಡಿಸಿಕೊಂಡು ಮಹಿಷಿಯರೊಡಗೂಡಿ ಸಭೆಯನ್ನು ಸೇರಿದನು. ನೆರೆದ ಸಭಿಕರು ಪರಸ್ಪರ ಯೋಗಕ್ಷೇಮಾದಿ ಕುಶಲಗಳನ್ನು ತಿಳಿದು ತಮ್ಮತಮ್ಮ ಕರ್ತವ್ಯಗಳಿಗೆ ಕೈಕೊಟ್ಟರು. ಕರ್ಮಸಚಿವರು ಆ ವರೇಗಣ ರಾಜ್ಯತಂತ್ರಗಳನ್ನರಿಕೆಗೈದರು. ರಾಜನು ಎಲ್ಲರನ್ನೂ ಬೀಳ್ಕೊಟ್ಟು, ಸ್ನಾನಕ್ಕಾಗಿ ಒಳಮನೆಹೊಕ್ಕನು. ಅಲ್ಲಿ ರಾಜನ ಮೃಗಯಾಪ್ರಸ್ಥಾನವನ್ನು ಮೊದಲ್ಗೊಂಡು, ಅವನಿಗೆ ಸಂಧಿಸಿದ ಸಂಭವಗಳನ್ನು ಕೇಳಿದ ಅವರೋಧ ಸ್ತ್ರೀಗಳು ಹರ್ಷರೋಷ ಕರುಣಾಸಂಕಟಗಳಲ್ಲಿ ಮುಳುಗೆದ್ದು ತೇಲಾಡುತಲಿದ್ದರು.

ಪ್ರಜೆಗಳು ಸಂತೋಷದಿಂದ "ಜಯಜಯ"ವೆಂದು ರಾಜನ ಶ್ರೇಯಸ್ಸನ್ನು ಕೋರುವರು. ಮಹೇಂದ್ರನ ಅನುಗ್ರಹದೊಂದಿಗೆ ವರವನ್ನು ಯಾವಾಗ ಪಡೆದಿದ್ದನೋ ಅದು ಮೊದಲು ರಾಜ್ಯಸ್ಥಿತಿಯು ನೂರ್ಮಡಿ ಮೇಲಾಗಿತ್ತು. ಜನರು ಸರಳಚಿತ್ತರು. ದೃಢಮನಸ್ಕರು. ಕೋಮಲ ಸ್ವಭಾವದವರು. ಪೂರ್ಣವಿದ್ಯೆಯಿಂದ ಶಾಂತವೃತ್ತರು. ಈ ರಾಜ್ಯದಲ್ಲಿ ದಾರಿದ್ರ್ಯವಿಲ್ಲ, ರಾಜನು ಸಂವತ್ಸರಗಳಂತೆ ಜಯಶ್ರೀಮುಖನಾಗಲು, ಅಂತೆಯೇ ರಾಜ್ಯವೂ ಬಹುಧಾನ್ಯಾನಂದವಾಯಿತು.

ಆಗ, ಕೌಟಿಲ್ಯವು ಚೂರ್ಣಕುಂತಳಗಳಲ್ಲಿ, ಕೃಶತೆಯು ತರುಣಿಯರ ನಡುಗಳಲ್ಲಿ, ಕಾಠಿಣ್ಯವು ಕಲ್ಲುಗಳಲ್ಲಿ, ಚಾಂಚಲ್ಯವು ಮೀನುಗಳಲ್ಲಿ, ಮಾಂದ್ಯವು ನಿತಂಬಿನಿಯರ ನಡೆಯಲ್ಲಿ, ಮದವು ಆನೆಗಳಲ್ಲಿ, ಸಂಕಲೆಯು ಅವುಗಳ ಕಾಲುಗಳಲ್ಲಿ, ಅಲ್ಲದೆ ಹಾರವಲಯವು ಹೆಂಗಸರ ಕುತ್ತಿಗೆಯಲ್ಲಿ, ಮಹಾಶೋಕವು ಕಾಡಿನಲ್ಲಿ, ಶೂಲವು ರುದ್ರನಲ್ಲಿ, ಭುಜಂಗದಂಶವು ಪಾರವಿಲಾಸಿನಿಯರ ಚೆಂಡುಟಿಗಳಲ್ಲಿ, ಮಧುಪಾನವು ಜೇನು ನೊಣಗಳಲ್ಲಿ.

ಅಂದಿನ ರಾಜ್ಯಸ್ಥಿತಿಯನ್ನು ಈಗ ಕೈನೀಂಟಿ ತೋರಿಸಲು ಆಳವಲ್ಲ ವಷ್ಟೇ? ಪಿಡಿಸಿಕೊನೆಯಾಗದು. ಕಾರಣ, ಏಕವಾಕ್ಯದಿಂದ ಹೇಳುವು ದಾದರೆ, ತ್ರೇತಾಯುಗದಲ್ಲಿ ಶ್ರೀ ರಾಮಚಂದ್ರನ ಪಾಲನೆಗೊಳಗೊಂಡಿದ್ದ "ಶ್ರೀರಾಮರಾಜ್ಯ"ವೇ ಹೀಗೆ ಎನ್ನಬಹುದು. ಮಹಾರಾಜನು ಚಿರಂಜೀವಿ ಎಂದೆನ್ನಿಸಿ ಸಾಮ್ರಾಜ್ಯದಲ್ಲಿ ಪ್ರಜೆಗಳ ಹಿತಕ್ಕಾಗಿ ಧರ್ಮದಿಂದ ರಾಜ್ಯ ವಾಳುತ್ತಾ ಊರ್ವಶಿಯೊಡನೆ ಬಹುಕಾಲ ಹಿತಮಿತಗಳಾದ ಆಹಾರ ವಿಹಾರಗಳಿಂದ ಸಂತುಷ್ಟನಾಗಿ ನಿಷ್ಕಲ್ಮಷ ಕ್ಷಾತ್ರಧರ್ಮವನ್ನು ಕೈಗೊಂಡಿದ್ದನು.

ಇಂದಿಗೆ ಮೋಹಿನಿಯು ಕೃತಾರ್ಥಳಾದಳು. ತಾಪದುಃಖವು ಕೊನೆಸಾಗಿತು. ಊರ್ವಶಿಯು ದುಃಸ್ವಪ್ನಕ್ಕೆ ಶುಭಫಲವನ್ನು ಪಡೆದಳು. ಅವಳ ಅಭೀಷ್ಟವೂ ಸಂದಿತು.

ಮಂತ್ರಿಸೇನಾನಿಗಳಿಗೆ ರಾಜನಲ್ಲಿರುವ ಸ್ವಾಮಿಭಕ್ತಿಯು ಪ್ರಕಟ ವಾಯಿತು; ಧನಿಯ ಪೂರ್ಣಾನುಕಂಪೆಗೆ ಪಾತ್ರರಾದರು. ಪಟ್ಟಣದಲ್ಲಿ ಮಹಿಷಿಯರಿಗೆ ದ್ವಾದಶಿಯು ಸಮಾಪಿಸಿತು. ಸುಖಪಾರಣಕ್ಕಿನ್ನಡ್ಡಿ ಯಿರದು. ರಾಜನ ಪುಣ್ಯೋದಯವನ್ನು ಹೇಳುವದೇನು? ಪರಮ ಯೋಗಿಗಳ ಸಂದರ್ಶನ, ಸ್ವರ್ಗಸೊಬಗಿನ ಅನುಭವ, ದೇವೇಂದ್ರನ ಅನುಗ್ರಹ, ಬಂಧವಿಮೋಚನ, ಅಪ್ಸರೆಯರ ಒಡನಾಟ, ಪುನಃ ರಾಜ್ಯ ಪ್ರಾಪ್ತಿ! ಈ ವಿಧದಿಂದ ಸಮಸ್ತರನ್ನೂ ಯಥಾಯೋಗ್ಯವಾಗಿ ಸಂತೋಷ ಗೊಳಿಸಿ ಜಗತ್ತನ್ನೇ ಅವರವರ ಯೋಗ್ಯತೆಗೆ ತಕ್ಕಂತೆ ನಡೆಯಿಸುವ ದೇವರನ್ನು 'ಸ್ಮರ್ತವ್ಯಃ ಸತತಂವಿಷ್ಣುಃ ವಿಸ್ಮರ್ತವ್ಯೋನಜಾತುಚಿತ್' ಎಂಬಂತೆ ತ್ರಿಕರಣಪರಿಶುದ್ಧ ಭಾವನೆಯಿಂದ ನಿರಂತರ ಧ್ಯಾನಿಸುವುದು ತಕ್ಕುದೆಂದು ಪ್ರಬಂಧಾಂತದಲ್ಲಿ ಮಂಗಳರೂಪವಾಗಿ 'ಕಾಮಿತಾರ್ಥ ವನ್ನು ಕರುಣಿಸಿ ಕಾಪಾಡುವ ಕಮಲಾಕಾಂತನೇ! ಅರವಿಂದಾಂತರ ದಲ್ಲಿ ಪ್ರಮರದ ಅರ್ಭಕನಂತೆ ಅನವರತವೂ ನೀನು ಹೊರತು ಬೇರೆ ಪೊರೆವ ದೊರೆಗಳನ್ನರಿಯದ ಪಾಮರರಾದೆಮ್ಮಂತರಂಗದಲ್ಲಿ ರಮಿಸುತ ನಿನ್ನ ಅರುಹನ್ನು ಪರಾಂಬರಿಸು ಶ್ರೀ ಹರಿಯೇ!' ಎಂದು ಅವನು

ಕೈವಲ್ಯವನ್ನೂ ಕೊಡುವವನಾದುದರಿಂದ ಅವನನ್ನು ಸರ್ವದಾ ಧ್ಯಾನಿಸಿ, ಅವನಿಂದ ಸೃಷ್ಟಿಸಲ್ಪಟ್ಟ ಸದ್ವಸ್ತುಗಳಿಂದ ಅವನಿಗೆ ಪೂಜೋಪಹಾರಗಳನ್ನೆಸಗುತ್ತಾ ಅವನ ದೆಸೆಯಿಂದ ನಮಗೆ ಸಕಲ ದೈವೀಸಂಪತ್ತು ಬರಬೇಕಾದ ಕಾರಣ, ಅವನೊಲ್ಮೆಯಂ ಪಡೆಯಲು ಅವನಲ್ಲಿ ಶಾಶ್ವತ ಭಕ್ತಿ ಶ್ರದ್ಧೆಯನ್ನಿರಿಸಿ ನಂಬುವ ಎಂಬಲ್ಲಿ,

**ಪುರೂರವರಾಜನ ಚರಿತೆಯು ಒಂದಂಶವು ಕೊನೆಸಾಗಿತು**

ಸಮಾಪ್ತಿ.